ಸೋಮವಾರ, ಫೆಬ್ರುವರಿ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 48 | ಪುಟ 12

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಮಕ್ಕಳ ಜ್ಞಾನಕ್ಕೆ ಸಾಣೆ ಹಿಡಿಯುವ 'ಕಲಿಕಾ ಹಬ್ಬ'

ಆಳ–ಅಗಲ

ಗೀಲನ್ ಬಾ ಸಿಂಡ್ರೋಮ್ ಇರಲಿ ಎಚ್ಚರ

'ವಿಕಟನ್' ವೆಬ್‌ಸೈಟ್‌ಗೆ ನಿರ್ಬಂಧ? 11

'ಚಿಯರ್ ಲೀಡರ್‌ನಂತೆ ಗೌಡರ ವರ್ತನೆ' 7

ಒಎಂಆರ್ ಶೀಟ್ ತಿದ್ದಿ ಹುದ್ದೆಗೆ ಆಯ್ಕೆ • 10 ಎಇಇ ಆಯ್ಕೆ ರದ್ದತಿ, ಸಿಐಡಿ ತನಿಖೆಗೆ ಶಿಫಾರಸು

ಕೆಪಿಎಸ್‌ಸಿ ಪರೀಕ್ಷೆ: ಭಾರಿ ಅಕ್ರಮ

• ರಾಜೇಶ್ ರೈ ಚಟ್ಲ

ಬೆಂಗಳೂರು: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) 24 ಹುದ್ದೆಗಳ ನೇಮಕಾತಿಯಲ್ಲಿ 10 ಅಭ್ಯರ್ಥಿಗಳು ಒಎಂಆರ್ (ಆಪ್ಟಿಕಲ್ ಮಾರ್ಕ್ಸ್ ರೆಕಗ್ನಿಷನ್) ಶೀಟ್ ತಿದ್ದಿ ಹುದ್ದೆ ಗಿಟ್ಟಿಸಿಕೊಂಡಿರುವ ಭಾರಿ ಅಕ್ರಮವನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ತನಿಖಾ ಸಮಿತಿ ಪತ್ತೆ ಹಚ್ಚಿದೆ.

ಈ 10 ಕಳಂಕಿತ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲು ನಿರ್ಧರಿಸಿರುವ ಕೆಪಿಎಸ್‌ಸಿ, ಈ ಅಭ್ಯರ್ಥಿಗಳ ವಿರುದ್ಧ ಪೊಲೀಸ್ ದೂರು ದಾಖಲಿಸಲು ಮುಂದಾಗಿದೆ. ಅಲ್ಲದೆ, ಅಕ್ರಮಕ್ಕೆ ಕಾರಣರಾದ ಎಲ್ಲ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಇಡೀ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ರಾಜ್ಯ ಸರ್ಕಾರಕ್ಕೆ ಕೋರಿಕೆ ಸಲ್ಲಿಸಲು ಕೂಡಾ ನಿರ್ಣಯಿಸಿದೆ.

7ನೇ ಪುಟ ನೋಡಿ

ಸಮಿತಿಯ ವರದಿ ಪ್ರಕಾರ ಕಳಂಕಿತ ಅಭ್ಯರ್ಥಿಗಳು

1. ವಿಶ್ವಾಸ್ ಎಸ್.
2. ಸಿಂಚನ ಎಂ.ಎಸ್.
3. ಭುವನ ಜಿ.ಎಲ್.
4. ನವೀನ್ ಗೋವಿಂದಪ್ಪ ಹುಚರೆಡ್ಡಿ
5. ವಿಶ್ವನಾಥ್ ಬಿ.
6. ಶ್ರೀಧರ್ ಹೊಸಮನಿ
7. ಸಂಜೀವ್ ಕುಮಾರ್ ಬಿರದಾರ
8. ಅಶೋಕ ಬಸಪ್ಪ ವಡ್ಡರ್
9. ಆನಂದಕುಮಾರ್
10. ಅಮರ್ ನಾಯಕ್ ಎಸ್.

ಆಯೋಗದ ಶಿಫಾರಸುಗಳೇನು?

- ತನಿಖಾ ವರದಿಯಲ್ಲಿ ತಿಳಿಸಿರುವ ಕಳಂಕಿತ ಅಭ್ಯರ್ಥಿಗಳ ಆಯ್ಕೆ ರದ್ದುಪಡಿಸಬೇಕು
- ಕಳಂಕಿತ ಅಭ್ಯರ್ಥಿಗಳ ಮೇಲೆ ಪೊಲೀಸ್ ದೂರು ದಾಖಲಿಸಲು ಆಯೋಗದ ಕಾರ್ಯದರ್ಶಿಗೆ ಅಧಿಕಾರ
- ಸತ್ಯ ಹೊರಗೆ ತೆಗೆಯಲು ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಸರ್ಕಾರಕ್ಕೆ ಆಯೋಗದ ಮನವಿ
- ಈ ಅಕ್ರಮಕ್ಕೆ ಕಾರಣರಾದ ಎಲ್ಲ ವ್ಯಕ್ತಿಗಳು, ಕಳಂಕಿತ ಅಭ್ಯರ್ಥಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಪೊಲೀಸ್, ಸಿಐಡಿಗೆ ಕಾರ್ಯದರ್ಶಿ ಸಹಕಾರ ನೀಡಬೇಕು
- ಕಳಂಕರಹಿತ ಅಭ್ಯರ್ಥಿಗಳಿಗೆ ತಕ್ಷಣ ನೇಮಕಾತಿ ಆದೇಶ ಕೊಡುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡಬೇಕು
- ಈ ಪ್ರಕರಣದಲ್ಲಿ ಅಭ್ಯರ್ಥಿಗಳು ತಡೆಯಾಜ್ಞೆ ತರದಂತೆ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಹೈಕೋರ್ಟ್ ಪೀಠಗಳಲ್ಲಿ ಹಾಗೂ ಬೆಂಗಳೂರು ಮತ್ತು ಬೆಳಗಾವಿ ನ್ಯಾಯಮಂಡಳಿಗಳಲ್ಲಿ ಕೇವಿಯಟ್ ದಾಖಲಿಸಲು ಕಾನೂನು ಕೋಶದ ಮುಖ್ಯಸ್ಥರಿಗೆ ಸೂಚನೆ
- ಪರೀಕ್ಷಾ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ತನಿಖಾ ವರದಿಯಲ್ಲಿರುವ ಶಿಫಾರಸುಗಳನ್ನು ಮುಂಬರುವ ಪರೀಕ್ಷೆಗಳಲ್ಲಿ ಅಳವಡಿಸಿಕೊಳ್ಳಲು ಪರಿಶೀಲಿಸಬೇಕು

ಅಕ್ರಮ ಪತ್ತೆ ಹಚ್ಚಿದ ತನಿಖಾ ಸಮಿತಿ

ಪರೀಕ್ಷಾ ಹಂತದಲ್ಲಿ ಅಕ್ರಮ ನಡೆದಿದೆ ಎಂದು ದೂರು ಬರುತ್ತಿದ್ದಂತೆಯೇ ಈ ಬಗ್ಗೆ ಪರಿಶೀಲಿಸಲು ಆಯೋಗದ ಸದಸ್ಯರಾದ ಡಾ. ಶಾಂತಾ ಹೊಸಮನಿ ನೇತೃತ್ವದಲ್ಲಿ ಬಿ.ವಿ. ಗೀತಾ ಮತ್ತು ಮುಸ್ತಫಾ ಹುಸೇನ್ ಎಸ್.ಎ ಅವರನ್ನೊಳಗೊಂಡ ಮೂರು ಮಂದಿಯ ಉಪ ಸಮಿತಿಯನ್ನು ಕೆಪಿಎಸ್‌ಸಿ ಮೊದಲು ರಚಿಸಿತ್ತು. ಈ ಸಮಿತಿ ಸಮರ್ಪಕವಾಗಿ ಪರಿಶೀಲನೆ ನಡೆಸಿಲ್ಲವೆಂದು, ಹಿರಿಯ ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ ಅಧ್ಯಕ್ಷತೆಯಲ್ಲಿ ಆರ್. ಗಿರೀಶ್, ಎಂ.ಬಿ. ಹೆಗ್ಗಣ್ಣವರ, ಮುಸ್ತಫಾ ಹುಸೇನ್ ಎಸ್.ಎ, ಬಿ.ವಿ. ಗೀತಾ ಅವರನ್ನೊಳಗೊಂಡ ಐದು ಮಂದಿಯ ಮತ್ತೊಂದು ತನಿಖಾ ಸಮಿತಿಯನ್ನು ಆಯೋಗ ರಚಿಸಿತ್ತು. ಸುಮಾರು 40 ಸಭೆ ನಡೆಸಿರುವ ಈ ಸಮಿತಿಯು ತನಿಖೆ ಅಂತಿಮಗೊಳ್ಳುವವರೆಗೆ ಯಾವುದೇ ಮಾಹಿತಿ ಬಹಿರಂಗ ಆಗದಂತೆ ಎಚ್ಚರಿಕೆ ವಹಿಸಿ, ಇದೀಗ ಸಮಗ್ರ ವರದಿಯನ್ನು ಆಯೋಗಕ್ಕೆ ಸಲ್ಲಿಸಿದೆ.

'ಗೊಂದಲದಿಂದಲೇ ಅವಘಡ'

ದೆಹಲಿ ರೈಲು ನಿಲ್ದಾಣದಲ್ಲಿ ಕಾಲ್ತುಳಿತ: ಸಾವಿನ ಸಂಖ್ಯೆ 18

ನವದೆಹಲಿ (ಪಿಟಿಐ): ನವದೆಹಲಿ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ಸಂಭವಿಸಿದ ಕಾಲ್ತುಳಿತದ ವೇಳೆ 18 ಜನ ಮೃತಪಟ್ಟಿದ್ದು, 12ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಪಾದಚಾರಿ ಮೇಲ್ಸೇತುವೆಯಿಂದ ಇಳಿಯುವಾಗ ಕೆಲ ಪ್ರಯಾಣಿಕರು ಜಾರಿ ಬಿದ್ದಿದ್ದೇ ಕಾಲ್ತುಳಿತಕ್ಕೆ ಕಾರಣ' ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಮಹಾ ಕುಂಭ ಮೇಳದಲ್ಲಿ ಪಾಲ್ಗೊಳ್ಳಲು ಪ್ರಯಾಗರಾಜ್‌ಗೆ ತೆರಳುತ್ತಿದ್ದ ಜನರು ಭಾರಿ ಸಂಖ್ಯೆಯಲ್ಲಿ ಸೇರಿದ್ದ ಕಾರಣ, ರೈಲು ನಿಲ್ದಾಣದಲ್ಲಿ ದಟ್ಟಣೆ ಇತ್ತು. ಆದರೆ, ಪ್ರಯಾಗರಾಜ್‌ಗೆ ಸಂಚರಿಸುವ ರೈಲುಗಳ ಹೆಸರು ಕುರಿತು ಪ್ರಯಾಣಿಕರಲ್ಲಿ ಉಂಟಾದ ಗೊಂದಲವೇ ಕಾಲ್ತುಳಿತಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದ್ದಾಗಿ ದೆಹಲಿ ಪೊಲೀಸರು ಹೇಳಿದ್ದಾರೆ.

'ಪ್ರಯಾಗರಾಜ್ ಎಕ್ಸ್‌ಪ್ರೆಸ್' ಹಾಗೂ 'ಪ್ರಯಾಗರಾಜ್ ಸ್ಪೆಷಲ್' ರೈಲುಗಳು ಪ್ಲಾಟ್‌ಫಾರ್ಮ್‌ನಲ್ಲಿ ಇದ್ದವು. ಎರಡೂ ರೈಲುಗಳ ಹೆಸರಿನಲ್ಲಿ ಪ್ರಯಾಗರಾಜ್ ಹೆಸರು ಇದ್ದ ಕಾರಣ ಪ್ರಯಾಣಿಕರಲ್ಲಿ ಗೊಂದಲ ಉಂಟಾಯಿತು' ಎಂದು ಮೂಲಗಳು ಹೇಳಿವೆ.

11ನೇ ಪುಟ ನೋಡಿ

ಕಾಲ್ತುಳಿತದಲ್ಲಿ ಮೃತಪಟ್ಟಿರುವ, ನವದೆಹಲಿಯ ಸಂಗಮ್ ವಿಹಾರದ ಪಿಂಕಿ ದೇವಿ (38) ಅವರ ಸಂಬಂಧಿಕರ ಆಕ್ರಂದನ —ಪಿಟಿಐ ಚಿತ್ರ

- ಭಾನುವಾರವೂ ನವದೆಹಲಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ತಗ್ಗಿರಲಿಲ್ಲ
- ಕಾಲ್ತುಳಿತ ಸಂಭವಿಸಿದ್ದ ಪ್ಲಾಟ್‌ಫಾರ್ಮ್‌ಗಳಲ್ಲಿ ಶೂಗಳು, ಹರಿದ ಬ್ಯಾಗು– ಬಟ್ಟೆಗಳ ರಾಶಿ, ಅರ್ಧಂಬರ್ಧ ತಿಂದಿದ್ದ ಆಹಾರ ಪದಾರ್ಥಗಳು ಭಾರಿ ಪ್ರಮಾಣದಲ್ಲಿ ಬಿದ್ದಿದ್ದವು. ಇವುಗಳ ತೆರವಿಗಾಗಿ ರೈಲ್ವೆ ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ಕೈಗೊಂಡಿದ್ದರು
- ತಮ್ಮವರ ಶವಗಳನ್ನು ಗುರುತಿಸಲು ಲೋಕನಾಯಕ ಜಯಪ್ರಕಾಶ್ ನಾರಾಯಣ ಆಸ್ಪತ್ರೆಯಲ್ಲಿ ಮೃತರ ಕುಟುಂಬಗಳ ಸದಸ್ಯರು ಜಮಾಯಿಸಿದ್ದರು

ಕಾಲಿನಲ್ಲಿ ಸರಪಳಿ, ಕೈಯಲ್ಲಿ ಕೋಳ

ಚಂಡೀಗಢ (ಪಿಟಿಐ): 'ನಮ್ಮ ಕಾಲುಗಳಿಗೆ ಸರಪಳಿ ಹಾಕಲಾಗಿತ್ತು, ಕೈಗಳಿಗೆ ಕೋಳ ತೊಡಿಸಲಾಗಿತ್ತು' ಎಂದು ಅಕ್ರಮ ವಲಸಿಗರು ಎಂಬ ಕಾರಣಕ್ಕೆ ಅಮೆರಿಕದಿಂದ ಗಡೀಪಾರು ಮಾಡಲಾದ ಭಾರತೀಯರು ಹೇಳಿದ್ದಾರೆ.

116 ಅಕ್ರಮ ವಲಸಿಗರನ್ನು ಹೊತ್ತ ಅಮೆರಿಕದ ಮಿಲಿಟರಿ ವಿಮಾನವು ಅಮೃತಸರ ವಿಮಾನ ನಿಲ್ದಾಣದಲ್ಲಿ ಶನಿವಾರ ರಾತ್ರಿ 11.35ಕ್ಕೆ ಬಂದಿಳಿಯಿತು. 112 ಮಂದಿ ಅಕ್ರಮ ವಲಸಿಗರನ್ನು ಹೊತ್ತ ಅಮೆರಿಕದ ಮಿಲಿಟರಿಯ ಇನ್ನೊಂದು ವಿಮಾನವು ಅಮೃತಸರ ವಿಮಾನ ನಿಲ್ದಾಣದಲ್ಲಿ ಭಾನುವಾರ ರಾತ್ರಿ 10.03ಕ್ಕೆ ಬಂದಿಳಿಯಿತು. ಭಾರತದ ಅಕ್ರಮ ವಲಸಿಗರನ್ನು ಅಮೆರಿಕವು ಇದುವರೆಗೆ ಒಟ್ಟು ಮೂರು ವಿಮಾನಗಳಲ್ಲಿ ವಾಪಸ್ ಕಳುಹಿಸಿದೆ.

'ಪ್ರಯಾಣದ ವೇಳೆ ನಮ್ಮ ಕಾಲುಗಳಿಗೆ ಸರಪಳಿ ಹಾಗೂ ಕೈಗಳಿಗೆ ಕೋಳ ಹಾಕಿದ್ದರು' ಎಂದು ದಲ್ಜೀತ್ ಸಿಂಗ್ ಅವರು ಹೋಶಿಯಾರ್‌ಪುರ-ದಲ್ಲಿ ತಿಳಿಸಿದರು. 'ನಮ್ಮನ್ನು 'ಡಂಕಿ ಮಾರ್ಗ'ದ ಮೂಲಕ ಅಮೆರಿಕಕ್ಕೆ ಕರೆದುಕೊಂಡು ಹೋಗಲಾಗಿತ್ತು. ಅಮೆರಿಕವನ್ನು ಅಕ್ರಮವಾಗಿ ಪ್ರವೇಶಿಸುವವರನ್ನು ಈ ಮಾರ್ಗದ ಮೂಲಕ ಕರೆದುಕೊಂಡು ಹೋಗುತ್ತಾರೆ. ಈ ಮಾರ್ಗ ಬಹಳ ಅಪಾಯಕಾರಿ' ಎಂದು ದಲ್ಜೀತ್ ವಿವರಿಸಿದರು.

'ಟ್ರಾವೆಲ್ ಏಜೆಂಟ್‌ವೊಬ್ಬರು ನನ್ನ ಗಂಡನಿಗೆ ಮೋಸ ಮಾಡಿದ್ದಾರೆ. ನೇರ ವಿಮಾನದ ಮೂಲಕ ಅಮೆರಿಕಕ್ಕೆ ಕರೆದೊಯ್ಯುವುದಾಗಿ ಹೇಳಿದ್ದ ಏಜೆಂಟ್, ನಂತರ ಡಂಕಿ ಮಾರ್ಗದ ಮೂಲಕ ಕರೆದೊಯ್ದರು' ಎಂದು ದಲ್ಜೀತ್ ಪತ್ನಿ ಕಮಲ್‌ಪ್ರೀತ್ ಕೌರ್ ದೂರಿದರು.

ವ್ಯವಸ್ಥೆ: ಪಂಜಾಬ್ ಪೊಲೀಸರು ರಾಜ್ಯದವರನ್ನು ಭಾನುವಾರ ನಸುಕಿನ 4.30ರ ಸುಮಾರಿಗೆ ಕರೆದೊಯ್ದರೆ, ಹರಿಯಾಣ ಪೊಲೀಸರು ತಮ್ಮ ರಾಜ್ಯದವರನ್ನು ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಿದ್ದರು.

'ನಮ್ಮ ಕನಸು ನುಚ್ಚು ನೂರಾಯ್ತು...'

'ಉತ್ತಮ ಆದಾಯ ಗಳಿಸಿ, ಸುಂದರ ಬದುಕುಕಟ್ಟಿಕೊಂಡು ಅಮೆರಿಕದಲ್ಲಿ ನೆಲಸಲು ಯೋಜಿಸಿದ್ದೆವು. ಈಗ ನೋಡಿದರೆ, ನಮ್ಮ ಕನಸುಗಳೇ ನುಚ್ಚು ನೂರಾಗಿವೆ...'

– ಇದು, ಅಮೆರಿಕ ವಾಪಸು ಕಳುಹಿಸಿರುವ ಅಕ್ರಮ ವಲಸಿಗರಲ್ಲಿ ಬಹುತೇಕರು ಹೇಳುವ ಮಾತು.

11ನೇ ಪುಟ ನೋಡಿ

ಅಮೆರಿಕವು ಗಡೀಪಾರು ಮಾಡಿದವರು ಅಮೃತಸರ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಶನಿವಾರ ರಾತ್ರಿ ಬಂದಿಳಿದ ನಂತರ ಪಂಜಾಬ್ ಪೊಲೀಸರು ಅವರನ್ನು ಕರೆದೊಯ್ದರು —ಪಿಟಿಐ ಚಿತ್ರ

ಶನಿವಾರ ಬಂದ ವಿಮಾನದಲ್ಲಿ ವಾಪಸ್ಸಾದವರು 18ರಿಂದ 30 ವರ್ಷ ವಯೋಮಾನದವರು. ಭಾನುವಾರ ಬಂದ ಮೂರನೆಯ ವಿಮಾನದಲ್ಲಿದ್ದ 112 ಮಂದಿಯಲ್ಲಿ 19 ಮಂದಿ ಮಹಿಳೆಯರು, 14 ಮಕ್ಕಳು ಸೇರಿದ್ದಾರೆ. ಅಲ್ಲದೆ, ಎರಡು ಶಿಶುಗಳು ಕೂಡ ಮೂರನೆಯ ವಿಮಾನದಲ್ಲಿ ಬಂದವರಲ್ಲಿ ಸೇರಿವೆ.

ಇಬ್ಬರು ಕೊಲೆ ಆರೋಪಿಗಳು: ಕಳೆದ ವರ್ಷ ನಡೆದಿದ್ದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಇಬ್ಬರು ಆರೋಪಿಗಳು ಕೂಡ ಅಮೆರಿಕದಿಂದ ಬಂದಿಳಿದವರಲ್ಲಿ ಸೇರಿದ್ದರು.

11ನೇ ಪುಟ ನೋಡಿ

ದಮ್ಮಚಾರಿಕ– ದಮ್ಮ ನಡಿಗೆ

ಭಗವಾನ್ ಬುದ್ಧ ಬೋಧಿಸಿದ್ದ 'ತಿಪಿಟಕ ಸದ್ಧಮ್ಮ ಸಜ್ಝಾಯನ' ಇದರ ಪಠಣೆಯನ್ನು ಹಲವಾರು ವರ್ಷಗಳ ಬಳಿಕ ದಕ್ಷಿಣ ಭಾರತದಲ್ಲಿ ಆರಂಭಿಸಲಾಗಿದ್ದು, ಇದರ ಅಂಗವಾಗಿ ಭಾನುವಾರ ದಮ್ಮಚಾರಿಕ–ದಮ್ಮ ನಡಿಗೆಯಲ್ಲಿ ಭಾಗವಹಿಸಿದ್ದ ಬೌದ್ಧ ಭಿಕ್ಕುಗಳು ವಿಧಾನಸೌಧದ ಮುಂಭಾಗ ಪ್ರಾರ್ಥನೆ ಸಲ್ಲಿಸಿ ನಡಿಗೆ ಮುಂದುವರಿಸಿದರು ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ಸಿದ್ದರಾಮಯ್ಯ ನಮ್ಮ ನಾಯಕರು'

ಬೆಂಗಳೂರು: 'ಸಿದ್ದರಾಮಯ್ಯ ನಮ್ಮ ಪಕ್ಷದ ನಾಯಕರು. ಅದರಲ್ಲಿ ಯಾವುದೇ ಪ್ರಶ್ನೆ ಇಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆ ಮೂಲಕ ಸಿದ್ದರಾಮಯ್ಯ ಪರ ಕೂಗೆಬ್ಬಿಸುತ್ತಿರುವ ಸಚಿವರು, ಶಾಸಕರನ್ನು ಮೌನವಾಗಿರುವಂತೆ ಪರೋಕ್ಷವಾಗಿ ಸಂದೇಶ ರವಾನಿಸಿದ್ದಾರೆ.

7

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ

'ಮತದಾನ ಉತ್ತೇಜನ' ಅಮೆರಿಕ ನೆರವು ಸ್ಥಗಿತ

ನ್ಯೂಯಾರ್ಕ್/ನವದೆಹಲಿ (ಪಿಟಿಐ): ಉದ್ಯಮಿ ಎಲಾನ್ ಮಸ್ಕ್ ನೇತೃತ್ವದ ಅಮೆರಿಕದ ಸರ್ಕಾರಿ ದಕ್ಷತೆಯ ಇಲಾಖೆಯು ವೆಚ್ಚಗಳಲ್ಲಿ ಕಡಿತ ಮಾಡುವುದಾಗಿ ಘೋಷಿಸಿದೆ. ಇದರ ಭಾಗವಾಗಿ ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದ 21 ಮಿಲಿಯನ್ ಡಾಲರ್ (ಅಂದಾಜು ₹182 ಕೋಟಿ) ಅನುದಾನ ಕೂಡ ಸ್ಥಗಿತಗೊಂಡಿದೆ.

ಆಡಳಿತದಲ್ಲಿ ದಕ್ಷತೆ ಹೆಚ್ಚಿಸುವುದು ಮತ್ತು ವ್ಯರ್ಥ ವೆಚ್ಚಗಳನ್ನು ತಗ್ಗಿಸುವುದು ಈ ಇಲಾಖೆಯ ಉದ್ದೇಶ. ಚುನಾವಣೆಗಳು ಮತ್ತು ರಾಜಕೀಯ ಪ್ರಕ್ರಿಯೆಗಳನ್ನು ಬಲಗೊಳಿಸುವ ಒಕ್ಕೂಟಕ್ಕೆ ನೀಡುತ್ತಿದ್ದ ₹4,212 ಕೋಟಿ ನೆರವನ್ನು ನಿಲ್ಲಿಸಲಾಗಿದೆ. ಭಾರತಕ್ಕೆ ನೀಡುತ್ತಿದ್ದ ₹182 ಕೋಟಿ ನೆರವು ಈ ನೆರವಿನ ಭಾಗವಾಗಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ ನಂತರ ಈ ತೀರ್ಮಾನ ಪ್ರಕಟವಾಗಿದೆ. ಮೋದಿ ಅವರು ಮಸ್ಕ್ ಅವರ ಜೊತೆಯೂ ಮಾತುಕತೆ ನಡೆಸಿದ್ದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದ ಶಕ್ತಿಗಳು ದೇಶದ ಸಂಸ್ಥೆಗಳ ಮೇಲೆ ಪ್ರಭಾವ ಬೀರುತ್ತಿದ್ದವು ಎಂಬ ಆರೋಪಕ್ಕೆ ಭಾರತದಲ್ಲಿ ಮತದಾನದ ಪ್ರಮಾಣ ಏರಿಕೆಗೆ ಸಂಬಂಧಿಸಿದಂತೆ ಅಮೆರಿಕದಿಂದ ದೇಣಿಗೆ ಪಡೆಯುತ್ತಿದ್ದ ಯೋಜನೆಯೊಂದು ಇಂಬು ಕೊಡುವಂತಿದೆ ಎಂದು ಬಿಜೆಪಿ ಆರೋಪಿಸಿದೆ.

10ನೇ ಪುಟ ನೋಡಿ

ನಾನು ಮುಖ್ಯ ಚುನಾವಣಾ ಆಯುಕ್ತ ಆಗಿದ್ದಾಗ ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಅಮೆರಿಕದ ಸಂಸ್ಥೆಯಿಂದ ಹಣದ ನೆರವು ಪಡೆಯಲಾಗಿತ್ತು ಎಂಬ ವರದಿಗಳಲ್ಲಿ ಸತ್ಯದ ಲವಲೇಶವೂ ಇಲ್ಲ

ಎಸ್.ವೈ. ಖುರೇಶಿ, ಮಾಜಿ ಸಿಇಸಿ

ಜಲ ಜೀವನ ಮಿಷನ್: ಅರುಣಾಚಲ ಪ್ರದೇಶ, ಹರಿಯಾಣ, ಗುಜರಾತ್‌ಗೆ ಬಿಡುಗಡೆ

ಗುರಿ ಸಾಧಿಸಿದ ರಾಜ್ಯಗಳಿಗೂ ಅನುದಾನ

• ಜಯಸಿಂಹ ಆರ್.

ಗುರಿ ಸಾಧನೆ

79.8% ರಾಷ್ಟ್ರೀಯ ಸರಾಸರಿ

84.3% ಕರ್ನಾಟಕ

ಬೆಂಗಳೂರು: ಜಲ ಜೀವನ ಮಿಷನ್ ಯೋಜನೆ ಅಡಿ ಶೇ 100ರಷ್ಟು ಗುರಿ ಸಾಧನೆ ಮಾಡಿದ ಹಲವು ರಾಜ್ಯಗಳಿಗೂ ಕೇಂದ್ರ ಸರ್ಕಾರ ಮತ್ತೆ ಅನುದಾನ ಬಿಡುಗಡೆ ಮಾಡಿದೆ. ಆದರೆ ಅದು, ಬಳಕೆಯೇ ಆಗಿಲ್ಲ.

ಶೇ 15ರಷ್ಟು ಗುರಿ ಬಾಕಿ ಇರುವ ಕರ್ನಾಟಕಕ್ಕೆ ಹಂಚಿಕೆಯಾದ ಅನುದಾನದಲ್ಲಿ ಕೇಂದ್ರದಿಂದ ಒಟ್ಟು ₹16,863 ಕೋಟಿ ಬಿಡುಗಡೆಯಾಗಿಲ್ಲ.

ಶೇ 100ರಷ್ಟು ಗುರಿ ಸಾಧಿಸಿದ ರಾಜ್ಯಗಳಲ್ಲಿ ಹೊಸ ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ ಆ ಅನುದಾನ ಬಳಕೆಯಾಗದೇ ಉಳಿದಿದೆ ಎಂಬುದನ್ನು ಕೇಂದ್ರದ ಅಂಕಿಅಂಶಗಳೇ ಹೇಳುತ್ತವೆ.

ಅರುಣಾಚಲ ಪ್ರದೇಶವು ನಲ್ಲಿ ಸಂಪರ್ಕ ಕಲ್ಪಿಸುವಲ್ಲಿ 2023–24ರಲ್ಲೇ ಗುರಿ ಸಾಧಿಸಿದೆ. 2024–25ನೇ ಸಾಲಿನಲ್ಲಿ ಕೇಂದ್ರವು ಆ ರಾಜ್ಯಕ್ಕೆ ₹217.82 ಕೋಟಿ ಅನುದಾನ ಹಂಚಿಕೆ ಮಾಡಿದೆ. ಅದರಲ್ಲಿ ₹108.91 ಕೋಟಿಯನ್ನು ಬಿಡುಗಡೆ ಮಾಡಿದೆ. ಆದರೆ ಅರುಣಾಚಲ ಪ್ರದೇಶ ಸರ್ಕಾರವು ಅದರಲ್ಲಿ ವೆಚ್ಚ ಮಾಡಿದ್ದು ₹22.93 ಕೋಟಿ ಮಾತ್ರ. ಶೇ 100ರಷ್ಟು ಗುರಿ ತಲುಪಿದ ಪಂಜಾಬ್‌ಗೆ 2024–25ರಲ್ಲಿ ₹644.54 ಕೋಟಿ ಹಂಚಿಕೆ ಮಾಡಿ, ₹50 ಕೋಟಿ ಬಿಡುಗಡೆ ಮಾಡಿದೆ. ಇದರಲ್ಲಿ ಬಳಕೆಯಾಗಿದ್ದು ₹3 ಕೋಟಿಯಷ್ಟೆ. ಗುರಿ ಸಾಧಿಸಿಯೂ ಅನುದಾನ ಪಡೆದು ಕೊಂಡು, ಅದನ್ನು ಬಳಕೆ ಮಾಡಿಕೊಳ್ಳದ ರಾಜ್ಯಗಳ ಪಟ್ಟಿಯಲ್ಲಿ ಹರಿಯಾಣ, ಹಿಮಾಚಲ ಪ್ರದೇಶ, ಮಿಜೋರಾಂ, ತೆಲಂಗಾಣ, ಗುಜರಾತ್ ಇವೆ.

ಶೇ 68ರಷ್ಟು ಖೋತಾ

ಕೇಂದ್ರವು 2024–25ನೇ ಸಾಲಿನ ಬಜೆಟ್‌ನಲ್ಲಿ ಹಂಚಿಕೆ ಮಾಡಿದ್ದ ಅನುದಾನದಲ್ಲಿ ಶೇ 68ರಷ್ಟು ಕಡಿತ ಮಾಡಿದೆ

₹70,163 ಕೋಟಿ 2024–25ರ ಬಜೆಟ್‌ನಲ್ಲಿ ಹಂಚಿಕೆ ಮಾಡಿದ ಅನುದಾನ

₹22,694 ಕೋಟಿ ಪರಿಷ್ಕೃತ ಅಂದಾಜಿನಲ್ಲಿ ನೀಡಿದ ಅನುದಾನ

₹47,469 ಕೋಟಿ ಖೋತಾ ಆದ ಅನುದಾನ

ಅನುದಾನ ಬಿಡುಗಡೆ: ಯಾರಿಗೆ, ಎಷ್ಟು?

ಕೇಂದ್ರವು ಆರು ವರ್ಷಗಳಲ್ಲಿ ಅರುಣಾಚಲ ಪ್ರದೇಶಕ್ಕೆ ಹಂಚಿಕೆಯಾಗಿದ್ದಕ್ಕಿಂತ ಹೆಚ್ಚು ಅನುದಾನ ನೀಡಿದೆ. ಈ ಅವಧಿಯಲ್ಲಿ ಹಂಚಿಕೆಯಾದುದರಲ್ಲಿ ಗರಿಷ್ಠ ಅನುದಾನ ಪಡೆದ ರಾಜ್ಯಗಳು, ಕಡಿಮೆ ಪ್ರಮಾಣದ ಅನುದಾನ ಪಡೆದ ಕರ್ನಾಟಕದ ಹೋಲಿಕೆ ಇಲ್ಲಿದೆ

ರಾಜ್ಯ	ಕೇಂದ್ರ ಹಂಚಿಕೆ ಮಾಡಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಬಿಡುಗಡೆಯಾದ ಅನುದಾನದ ಪ್ರಮಾಣ
ಅರುಣಾಚಲ ಪ್ರದೇಶ	₹3,792 ಕೋಟಿ	₹4,074 ಕೋಟಿ	107.5%
ಗುಜರಾತ್	₹14,766 ಕೋಟಿ	₹9,753 ಕೋಟಿ	66%
ಉತ್ತರ ಪ್ರದೇಶ	₹69,282 ಕೋಟಿ	₹40,993 ಕೋಟಿ	60%
ಕರ್ನಾಟಕ	₹28,624 ಕೋಟಿ	₹11,769 ಕೋಟಿ	41%

- ಅರುಣಾಚಲ ಪ್ರದೇಶ: ಐದು ಆರ್ಥಿಕ ವರ್ಷಗಳಲ್ಲಿ ಹಂಚಿಕೆಯಾಗಿದ್ದಕ್ಕಿಂತ ಹೆಚ್ಚು ಅನುದಾನ ಬಿಡುಗಡೆಯಾಗಿದೆ
- ಗುಜರಾತ್: 2020–21ರಲ್ಲಿ ₹883.08 ಕೋಟಿ ಹಂಚಿಕೆಯಾಗಿದ್ದು, ಹಿಂದಿನ ವರ್ಷದ ಉಳಿಕೆ ಸೇರಿ ಖಾತೆಯಲ್ಲಿ ₹888.78 ಕೋಟಿ ಇತ್ತು. ಅದೇ ವರ್ಷ ಕೇಂದ್ರವು ₹983.08 ಕೋಟಿ ಬಿಡುಗಡೆ ಮಾಡಿತ್ತು
- ಉತ್ತರ ಪ್ರದೇಶ: 2019–20ರಲ್ಲಿ ₹1,206.28 ಕೋಟಿ ಮತ್ತು ಹಿಂದಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ₹58.33 ಕೋಟಿ ಸೇರಿ, ₹1,264.61 ಕೋಟಿ ಇತ್ತು. ಅದೇ ಆರ್ಥಿಕ ವರ್ಷದಲ್ಲಿ ₹1,513.14 ಕೋಟಿ ಬಿಡುಗಡೆ ಮಾಡಿತ್ತು
- ಕರ್ನಾಟಕ: ಕರ್ನಾಟಕಕ್ಕೆ ಐದು ಆರ್ಥಿಕ ವರ್ಷಗಳಲ್ಲೂ ಹಂಚಿಕೆಯಾದಷ್ಟು ಅನುದಾನ ದೊರೆತಿಲ್ಲ. ಒಂದು ವರ್ಷವೂ ಹೆಚ್ಚಿನ ಅನುದಾನ ಬಿಡುಗಡೆಯಾಗಿಲ್ಲ

ಪ್ರಯಾಣಿಕರ ಸಂಖ್ಯೆಯಲ್ಲಿ ದಾಖಲೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಳ ಮಾಡಿದ ಬಳಿಕ ಒಂದು ವಾರದಲ್ಲಿ ಶನಿವಾರ ಅತಿ ಕಡಿಮೆ ಪ್ರಯಾಣಿಕರು ಮೆಟ್ರೊದಲ್ಲಿ ಪ್ರಯಾಣಿಸಿದ್ದಾರೆ. ಯಾವಾಗಲೂ 8 ಲಕ್ಷ ದಾಟುತ್ತಿದ್ದ ಪ್ರಯಾಣಿಕರ ಸಂಖ್ಯೆ 7 ಲಕ್ಷಕ್ಕಿಂತ ಕೆಳಗೆ ಇಳಿದಿದೆ.

ದರ ಏರಿಕೆ ಮಾಡುವುದಕ್ಕಿಂತ ಹಿಂದಿನ ಒಂದು ವಾರದಲ್ಲಿ ಮೆಟ್ರೊದಲ್ಲಿ ದಿನಕ್ಕೆ ಸರಾಸರಿ 8.50 ಲಕ್ಷ ಜನರು ಪ್ರಯಾಣಿಸಿದ್ದರು. ಪ್ರತಿ ಸೋಮವಾರ ಪ್ರಯಾಣಿಕರ ಸಂಖ್ಯೆ ಯಾವಾಗಲೂ ಹೆಚ್ಚಿರುತ್ತಿತ್ತು. ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿದ ಬಳಿಕ ಮೊದಲ ಸೋಮವಾರವೇ 8.28 ಲಕ್ಷಕ್ಕೆ ಇಳಿಕೆಯಾಗಿತ್ತು. ಅಲ್ಲಿಂದ ಪ್ರತಿದಿನ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತಾ ಬಂದಿದ್ದು, ಶನಿವಾರ 6.90 ಲಕ್ಷಕ್ಕೆ ಇಳಿದಿದೆ.

2ನೇ ಪುಟ ನೋಡಿ

‘ನಮ್ಮ ಮೆಟ್ರೊ’ ಪ್ರಯಾಣಿಕರ ಸಂಖ್ಯೆಯಲ್ಲಿ ದಾಖಲೆ ಇಳಿಕೆ

ಒಂದನೇ ಪುಟದಿಂದ...

‘ದರ ನಿಗದಿ ಸಮಿತಿಯು ಶೇಕಡ 45ರಷ್ಟು ದರ ಹೆಚ್ಚಳ ಮಾಡಲು ಶಿಫಾರಸು ಮಾಡಿದೆ’ ಎಂದು ಹೇಳುತ್ತಿದ್ದ ಬಿಎಂಆರ್‌ಸಿಎಲ್ ಶೇ 70ರಿಂದ ಶೇ 100ರಷ್ಟು ಹೆಚ್ಚಳ ಮಾಡಿತ್ತು. ಪ್ರಯಾಣಿಕರಿಂದ ತೀವ್ರ ಆಕ್ಷೇಪಗಳು ಬಂದ ಬಳಿಕ ಕೆಲವು ಸ್ಟೇಜ್‌ಗಳಿಗೆ ₹10 ದರ ಇಳಿಕೆ ಮಾಡಲಾಯಿತು. ಈಗಲೂ ಹಲವು ನಿಲ್ದಾಣಗಳಿಗೆ ಶೇ 70ಕ್ಕಿಂತ ಅಧಿಕ ಹೆಚ್ಚಳ ಇರುವುದು ಹಾಗೇ ಮುಂದುವರಿದಿದೆ. ಇದೆಲ್ಲದರ ಪರಿಣಾಮ ಮೆಟ್ರೊ ತೊರೆದು, ಬಸ್ ಇಲ್ಲವೇ ಖಾಸಗಿ ವಾಹನಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆ.

‘ನಾಯಂಡಹಳ್ಳಿಯಿಂದ ಎಂ.ಜಿ. ರಸ್ತೆಗೆ ಯಾವಾಗಲೂ ಮೆಟ್ರೊದಲ್ಲಿಯೇ ಬರುತ್ತಿದ್ದೆ. ಮೆಟ್ರೊ ಕಾರ್ಡ್ ಹೊಂದಿರುವುದರಿಂದ ₹33.25 ದರ ಇರುತ್ತಿತ್ತು. ಫೆ.9ರಂದು ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಕೆ ಮಾಡಿದ್ದಾರೆ. ಈಗ ನಾಯಂಡಹಳ್ಳಿ-ಎಂ.ಜಿ. ರಸ್ತೆ ಪ್ರಯಾಣಕ್ಕೆ ₹60 ನೀಡಬೇಕು. ಕಾರ್ಡ್ ರಿಯಾಯಿತಿ ಎಂದು ₹3 (ಶೇ 5) ಹಾಗೂ ಜನದಟ್ಟಣೆ ಇಲ್ಲದ ಸಮಯದಲ್ಲಿ ಬಂದರೆ ಮತ್ತೆ ₹3 ಕಡಿಮೆಯಾದರೂ ₹54 ನೀಡಬೇಕು. ದರ ಏರಿಕೆಯಾದ ಮೇಲೆ ಮೆಟ್ರೊದಲ್ಲಿ ಬರುವುದನ್ನು ನಿಲ್ಲಿಸಿದ್ದೇನೆ’ ಎಂದು ಪ್ರಯಾಣಿಕ ಸುಂದರೇಶ್ ಪ್ರತಿಕ್ರಿಯಿಸಿದರು.

‘ಕೆಲವು ದಿನಗಳಿಂದ ಬಿಎಂಟಿಸಿ ಬಸ್ಸಲ್ಲಿ ಬರುತ್ತಿದ್ದೇನೆ. ನಾಯಂಡಹಳ್ಳಿಯಿಂದ ಕೆ.ಆರ್. ಮಾರುಕಟ್ಟೆಗೆ ₹18 ದರ ಇದೆ. ಅಲ್ಲಿ ಇಳಿದು ಬಸ್ ಬದಲಾಯಿಸಿ ಎಂ.ಜಿ. ರಸ್ತೆಗೆ ಬರಲು ಟಿಕೆಟ್ ದರ ₹18 ಇದೆ. ಒಟ್ಟು ₹36 ವೆಚ್ಚದಲ್ಲಿ ತಲುಪುತ್ತಿದ್ದೇನೆ. ಇದರಿಂದ ₹18 ಉಳಿತಾಯವಾಗುತ್ತಿದೆ. ಒಂದು ದಿನಕ್ಕೆ ಬಂದು ಹೋಗುವಾಗ ₹36 ಉಳಿಯುತ್ತಿದೆ’ ಎಂದು ಮಾಹಿತಿ ನೀಡಿದರು.

‘ನಮಗೆ ಬಸ್‌ಗಳಲ್ಲಿ ಪ್ರಯಾಣ ಉಚಿತವಿತ್ತು. ಆದರೂ ಸಮಯ ಉಳಿತಾಯವಾಗುತ್ತದೆ ಎಂಬ ಕಾರಣಕ್ಕೆ ಮೆಟ್ರೊದಲ್ಲಿ ಬರುತ್ತಿದ್ದೆ. ಮೆಟ್ರೊ ಪ್ರಯಾಣದರ ಹೆಚ್ಚಳವಾದ ಮೇಲೆ ಮೆಟ್ರೊ ಬಿಟ್ಟು ಬಿಎಂಟಿಸಿ ಬಸ್‌ನಲ್ಲಿಯೇ ಪ್ರಯಾಣಿಸುತ್ತಿದ್ದೇನೆ. ವಾಹನ ದಟ್ಟಣೆ, ಟ್ರಾಫಿಕ್ ಸಿಗ್ನಲ್‌ಗಳಿಂದಾಗಿ ಪ್ರಯಾಣಕ್ಕೆ ಸ್ವಲ್ಪ ಸಮಯ ಹೆಚ್ಚು ಬೇಕಾಗುತ್ತದೆ. ಅದಕ್ಕಾಗಿ ಅರ್ಧ ಗಂಟೆ ಬೇಗ ಮನೆ ಬಿಡುತ್ತಿದ್ದೇನೆ’ ಎಂದು ಖಾಸಗಿ ಕಂಪನಿ ಉದ್ಯೋಗಿ ಜ್ಞಾನಭಾರತಿ ನಿವಾಸಿ ರಮ್ಯಾ ತಿಳಿಸಿದರು.

ಅಂಕಿ ಅಂಶ

ವಾರ	ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)
ಸೋಮವಾರ	8.28
ಮಂಗಳವಾರ	7.79
ಬುಧವಾರ	7.62
ಗುರುವಾರ	7.51
ಶುಕ್ರವಾರ	7.63
ಶನಿವಾರ	6.90

ರೇಣುಕಾಚಾರ್ಯ ಜಯಂತಿ ಮಾ. 12ರಂದು

ಕವಿತಾ ಮಿಶ್ರಾ

ರಂಭಾಪುರಿ ಪೀಠ (ಬಾಳೆಹೊನ್ನೂರು): ಮಾ. 10ರಿಂದ 14ರವರೆಗೆ ರಂಭಾಪುರಿ ಪೀಠದಲ್ಲಿ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಸಂಯೋಜಿಸಲಾಗಿದೆ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದ್ದಾರೆ.

ಮಾರ್ಚ್ 12ರಂದು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವ, ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ, ಶಿವಾದ್ವೈತ ಸಮ್ಮೇಳನ ನಡೆಯಲಿದೆ. ಕೃಷಿ ಸಾಧಕಿ ರಾಯಚೂರು ಜಿಲ್ಲೆ ಕವಿತಾಳ ಗ್ರಾಮದ ಕವಿತಾ ಮಿಶ್ರಾ ಅವರಿಗೆ ‘ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ’ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮಾ.10ರಂದು ಧ್ವಜಾರೋಹಣ, ಹರಿದ್ರಾಲೇಪನ ಹಾಗೂ ವೀರಗಾಸೆ-ಪುರವಂತರ ಸಮ್ಮೇಳನ ನಡೆಯಲಿದೆ. 11ರಂದು ದೀಪೋತ್ಸವ-ಕುಂಕುಮೋತ್ಸವ, ವೀರಭದ್ರಸ್ವಾಮಿ ಚಿಕ್ಕ ರಥೋತ್ಸವ, ಕೃಷಿ ಸಮ್ಮೇಳನ, ಕಾಫಿ-ಅಡಿಕೆ ಬೆಳೆಗಾರರ ಹಿತ ಚಿಂತನ-ಮಂಥನ ಸಮಾರಂಭ ಆಯೋಜಿಸಲಾಗಿದೆ. 13ರಂದು ಶಯನೋತ್ಸವ, ಶಿವಾನಂದ ಎಸ್ಟೇಟ್‌ನಲ್ಲಿ ಪೂಜಾ-ಪ್ರಸಾದ, ಕೆಂಡಾರ್ಚನೆ ಹಾಗೂ ಜಾನಪದ ಸಮ್ಮೇಳನ, 14ರಂದು ವಸಂತೋತ್ಸವ, ಭದ್ರಾ ನದಿ ತೀರದಲ್ಲಿ ಸುರಗಿ ಸಮಾರಾಧನೆ ನಡೆಯಲಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಇದು ಹಗಲು ದರೋಡೆಯಲ್ಲವೇ?

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಸಿರುವ ಬಿಎಂಆರ್‌ಸಿಎಲ್, ಆದಾಯ–ನಷ್ಟದ ಸಮರ್ಥನೆ ನೀಡುತ್ತಿದೆ. ‘ಆದಾಯಕ್ಕೆ ಬೇರೆ ಮೂಲ ಬಳಸಿಕೊಳ್ಳಿ, ಮೊದಲು ದರ ಇಳಿಸಿ, ನಮ್ಮ ಮೆಟ್ರೊ ಹೆಸರು ಉಳಿಸಿ’ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಶೇಕಡ 47ರಷ್ಟು ದರ ಹೆಚ್ಚಳ ಎಂದು ಪ್ರಕಟಿಸಿದ್ದು. ಆದರೆ, ಹೆಚ್ಚಿಸಿದ ದರ ಶೇ 70ರಷ್ಟು. ಇದು ಹಗಲು ದರೋಡೆಯಲ್ಲದೇ ಮತ್ತೇನು? ಇವರು ಅವರನ್ನು, ಅವರು ಇವರನ್ನು ದೂಷಿಸಿ ನಮ್ಮನ್ನು ಕುರಿಗಳನ್ನಾಗಿ ಮಾಡಿದ್ದಾರೆ. ಮೊದಲೇ ಎಲ್ಲ ವಸ್ತುಗಳ ಬೆಲೆ ಏರಿಕೆಯಿಂದ ಸೋತು ಕಂಗಾಲಾಗಿರುವ ಬಡ ಹಾಗೂ ಮಧ್ಯಮವರ್ಗದ ಜನರಿಗೆ ‘ನಮ್ಮ ಮೆಟ್ರೊ’ದವರು ಗಾಯಕ್ಕೆ ಸುಣ್ಣ ಹಾಕಿದಂತೆ ಮಾಡಿದ್ದಾರೆ. ಹಿರಿಯ ನಾಗರಿಕರಿಗೆ ರಿಯಾಯಿತಿ ಅಪೇಕ್ಷಿಸಿದ್ದ ನಮಗೆ ಬಹಳ ನಿರಾಶೆ ಆಗಿದೆ. ದರ ಪರಿಷ್ಕರಣೆ ಕೂಡಲೇ ಹಿಂಪಡೆಯಬೇಕು.

ವೈ.ವಿ. ಪ್ರಭಾಕರ, ಗುಬ್ಬಲಾಳ

ನಾನು ಯಲಚೇನಹಳ್ಳಿಯಲ್ಲಿರುವ ಶಾಲೆಯೊಂದರಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದೇನೆ. ನಮ್ಮ ಮನೆಯಿಂದ ಶಾಲೆಗೆ ಏಳು ಕಿ.ಮೀ. ಆಗುತ್ತದೆ. ಆಟೊದಲ್ಲಿ ಮತ್ತು ದ್ವಿಚಕ್ರ ವಾಹನದಲ್ಲಿ ಪ್ರಯಾಣ ದುಬಾರಿ ಎಂದು ಮೆಟ್ರೊ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ನಾನು ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣದಿಂದ ಯಲಚೇನ ಹಳ್ಳಿ ಮೆಟ್ರೊ ನಿಲ್ದಾಣಕ್ಕೆ ಮೊದಲು ₹25 ಪಾವತಿಸುತ್ತಿದ್ದೆ. ಈಗ ಅದೇ ನಿಲ್ದಾಣಕ್ಕೆ ₹42 ದರ ನಿಗದಿ ಮಾಡಿದ್ದು ನಮ್ಮಂಥ ವಿದ್ಯಾರ್ಥಿಗಳಿಗೆ ಕಷ್ಟ ವಾಗುತ್ತಿದೆ. ನಮ್ಮ ಮೆಟ್ರೊ ಆಡಳಿತ ಮಂಡಳಿಯು ನಮ್ಮಂತಹ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮೊದಲು ಇದ್ದ ದರವನ್ನೇ ಮುಂದುವರಿಸಬೇಕು.

ಚಂದ್ರಕೀರ್ತಿ ಉಮಾಶಂಕರ್

ಅದು ‘ನಮ್ಮ ಮೆಟ್ರೊ’ ಅಲ್ಲ. ಶ್ರೀಮಂತರ ಮೆಟ್ರೊ ಎಂದು ಭಾಸವಾಗುತ್ತಿದೆ. ಬಿಎಂಆರ್‌ಸಿಎಲ್ ನಷ್ಟದಲ್ಲಿ ಇದ್ದರೆ ಶೇ 5ರಿಂದ ಶೇ 10 ದರ ಏರಿಕೆ ಮಾಡಬೇಕಿತ್ತು. ಅದು ಬಿಟ್ಟು ಏಕಾಏಕಿಯಾಗಿ ಶೇ 50ರಿಂದ ಶೇ 100ವರೆಗೂ ದರ ಏರಿಕೆ ಮಾಡಿರುವುದರಿಂದ ಮಧ್ಯಮ ವರ್ಗದ ಜನರಿಗೆ ತುಂಬಾ ಆರ್ಥಿಕ ಹೊರೆ ಆಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ದರವನ್ನು ಇಳಿಕೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕು.

ಜಗದೀಶ

‘ನಮ್ಮ ಮೆಟ್ರೊ’ ಅಭಿವೃದ್ಧಿಗೆ ಜನರ ತೆರಿಗೆ ಹಣ ಬಳಸಿ, ಈಗ ರಾಜ್ಯದ ಪಾಲು, ಕೇಂದ್ರದ ಪಾಲು ಎನ್ನುತ್ತಾ ದರ ಏರಿಸಿದ್ದಾರೆ. ದರ ಏರಿಕೆಯನ್ನು ಕೇಂದ್ರ–ರಾಜ್ಯ ಸರ್ಕಾರಗಳು ಪರಸ್ಪರ ದೂರುತ್ತಾ ಜನರನ್ನು ಬಲಿಪಶು ಮಾಡುತ್ತಿದ್ದಾರೆ. ಈಗಾಗಲೇ ಜನರು ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದಾರೆ. ತಕ್ಷಣವೇ ದರ ಏರಿಕೆ ಹಿಂಪಡೆಯಿರಿ. ಇಲ್ಲದಿದ್ದರೆ, ಇದಕ್ಕೆ ಜನರೇ ಮುಂದಿನ ದಿನಗಳಲ್ಲಿ ಉತ್ತರಿಸುತ್ತಾರೆ.

ರಮೇಶ್ ಎಸ್, ಬಿನ್ನಿಪೇಟೆ

‘ನಮ್ಮ ಮೆಟ್ರೊ’ದ ಮುಖ್ಯ ಉದ್ದೇಶವೇ ಸಾರ್ವಜನಿಕ ಸಾರಿಗೆ ಬಲಪಡಿಸುವುದು ಮತ್ತು ಜನರು ಸ್ವಂತ ವಾಹನಗಳನ್ನು ರಸ್ತೆಗೆ ಇಳಿಸದೆ ಸುಗಮ ಸಂಚಾರಕ್ಕೆ ಸಹಕರಿಸುವುದಾಗಿತ್ತು. ಅದು ತಕ್ಕ ಮಟ್ಟಿಗೆ ಯಶಸ್ವಿಯಾಗಿತ್ತು. ಆದರೆ, ಈಗ ಅವೈಜ್ಞಾನಿಕವಾಗಿ ಪ್ರಯಾಣ ದರ ಏರಿಕೆ ಮಾಡಿರುವುದು, ಮೂಲ ಉದ್ದೇಶಕ್ಕೆ ಕೊಡಲಿ ಪೆಟ್ಟು ಕೊಟ್ಟಂತಾಗಿದೆ. ದರ ಹೆಚ್ಚಳದಿಂದ ನಾಗರಿಕರು ಮತ್ತೆ ತಮ್ಮ ವಾಹನಗಳನ್ನು ರಸ್ತೆಗಿಳಿಸಲು ಯೋಚಿಸುತ್ತಿದ್ದಾರೆ. ಮೊದಲಿಗೆ ಮೆಟ್ರೊ ಪ್ರಯಾಣ ದರ ಇಳಿಸಬೇಕು. ಆದಾಯಕ್ಕಾಗಿ ಬೇರೆ ಮೂಲಗಳನ್ನು ಬಳಸಬೇಕು.

ಕಡೂರು ಫಣಿಶಂಕರ್

‘ನಮ್ಮ ಮೆಟ್ರೊ’ದಲ್ಲಿ ಬನಶಂಕರಿಯಿಂದ ಮಾದಾವರದವರೆಗೆ ₹60ರ ಬದಲಾಗಿ ₹90ಕ್ಕೆ ಏರಿಕೆ ಮಾಡಲಾಗಿದೆ. ದರ ಏರಿಕೆಗೆ ಕೇಂದ್ರ–ರಾಜ್ಯ ಸರ್ಕಾರಗಳೆರಡೂ ತಮಗೆ ಸಂಬಂಧವಿಲ್ಲ ಎಂದು ಜಾರಿಕೊಳ್ಳುವುದು ಸರಿಯಲ್ಲ. ಅಧಿಕಾರಿಗಳು ಸಂಬಳ, ಸಾರಿಗೆ ಖರ್ಚುಗಳನ್ನು ತಮ್ಮ ಇಷ್ಟದಂತೆ ಜಾರಿ ಮಾಡಿಕೊಂಡು ಸಾರ್ವಜನಿಕರ ಹಣದಿಂದ ಸಂತೋಷ ಪಡುವುದು ಸೂಕ್ತವಲ್ಲ. ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿಗಳು, ಕೇಂದ್ರ, ರಾಜ್ಯ ಸರ್ಕಾರಿ ನೌಕರರಷ್ಟೇ ಅಲ್ಲ, ಕೂಲಿ ಕಾರ್ಮಿಕರು, ನಿವೃತ್ತರೂ ವಾಸವಾಗಿದ್ದಾರೆ. ಹಾಗಾಗಿ, ದರ ಇಳಿಕೆಗೆ ಕ್ರಮ ಕೈಗೊಳ್ಳಿ. ಹಳೆಯ ದರವನ್ನೇ ಜಾರಿಗೆ ತನ್ನಿ. ಇಲ್ಲದಿದ್ದರೆ ತೀವ್ರ ಹೋರಾಟ ಅನಿವಾರ್ಯ.

ಸಿ.ಕಾಳಯ್ಯ, ಉಪಾಧ್ಯಕ್ಷ, ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ

‘ನಮ್ಮ ಮೆಟ್ರೊ’ ಎಂದು ಹೆಸರಿಟ್ಟರೆ ಸಾಲದು. ಅದಕ್ಕೆ ತಕ್ಕಂತೆ ಪ್ರಯಾಣ ದರವಿರಬೇಕು. ಪ್ರಯಾಣ ದರದಲ್ಲಿ ಶೇಕಡ 10, 20, 30ರಂತೆ ಹಂತ ಹಂತವಾಗಿ ಹೆಚ್ಚಿಸಬೇಕು. ಅದನ್ನು ಬಿಟ್ಟು ಎರಡು–ಮೂರು ಪಟ್ಟು ಹೆಚ್ಚಿಸಿದರೆ ಹೇಗೆ? ನಾವು ಪ್ರಯಾಣಿಕರೆಲ್ಲರೂ ಮೆಟ್ರೊ ಪ್ರಯಾಣದಿಂದ, ಕೆಲವು ದಿನ ದೂರ ಇರೋಣ. ‘ಮೆಟ್ರೊ ರೈಲು ಪ್ರಯಾಣ ದರ ಏರಿಕೆ’ಯ ಬಿಸಿಯನ್ನು ಏರಿಸಿದವರಿಗೆ ತಟ್ಟುವಂತೆ ಮಾಡೋಣ..

ರಾವ್ ಸಾಹೇಬ ಪೂಜೇರಿ

ದೇಶದಲ್ಲೇ ಅತಿ ಹೆಚ್ಚು ಪ್ರಯಾಣ ದರವಿರುವುದು ‘ನಮ್ಮ ಮೆಟ್ರೊ’ದಲ್ಲಿ. ಇದು ಆಘಾತಕಾರಿ ಅಂಶ. ನಾನು ನಿತ್ಯ ರೇಷ್ಮೆ ಸಂಸ್ಥೆಯಿಂದ ಕೆ.ಆರ್. ಮಾರುಕಟ್ಟೆಗೆ ₹35 ಕೊಟ್ಟು ಬರುತ್ತಿದ್ದೆ. ದರ ಏರಿಕೆ ನಂತರ ಈಗ ₹57 ಕ್ಕೆ ಏರಿದೆ. (ಶೇಕಡ 61ರಷ್ಟು ಹೆಚ್ಚಾಗಿದೆ). ಈಗ ಕೆಲವು ಕಡೆ ದರ ಕೊಂಚ ತಗ್ಗಿದೆ ಎನ್ನುತ್ತಾರೆ. ನನಗೆ ಪ್ರಯಾಣ ದರ ₹ 3 ಕಡಿಮೆಯಾಗಿದೆ. ಈಗ ನಾವಿಬ್ಬರು ಸ್ನೇಹಿತರು ಮೆಟ್ರೊ ಬಿಟ್ಟು ದ್ವಿಚಕ್ರ ವಾಹನ ಏರಿದ್ದೇವೆ. ಇದರಿಂದ ಹಣ ಉಳಿಯುತ್ತಿದೆ. ಆದರೆ ಎಲ್ಲರೂ ಹೀಗೆ ಮಾಡಿದರೆ ಸಮೂಹ ಸಾರಿಗೆ ಉದ್ದೇಶವೇ ಈಡೇರುವುದಿಲ್ಲ. ಇದಕ್ಕೆ ಸರ್ಕಾರ ಮತ್ತು ಬಿಎಂಆರ್‌ಸಿಎಲ್ ನೇರ ಹೊಣೆ.

ಜಗದೀಶ್ ಎಂ.

ಅಭಿಪ್ರಾಯ ಕಳುಹಿಸಿ: ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ. ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಸುದ್ದಿ 2 ನಿಮಿಷ

ಎಪಿಸಿಆರ್ ಅಧ್ಯಕ್ಷರಾಗಿ ಸುಧೀರ್ ಮುರೊಳ್ಳಿ ಆಯ್ಕೆ

ಬೆಂಗಳೂರು: ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ (ಎಪಿಸಿಆರ್) ರಾಜ್ಯ ಘಟಕದ ಅಧ್ಯಕ್ಷರಾಗಿ ವಕೀಲ ಎಂ.ಎಚ್.ಸುಧೀರ್ ಕುಮಾರ್ ಮುರೊಳ್ಳಿ ಆಯ್ಕೆಯಾಗಿದ್ದಾರೆ.

2025-26ನೇ ಸಾಲಿನ ರಾಜ್ಯ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಸಮಿತಿಯಲ್ಲಿ ಕಾನೂನು ತಜ್ಞರು, ನಿವೃತ್ತ ಅಧಿಕಾರಿಗಳು, ಶಿಕ್ಷಣ ತಜ್ಞರು, ನಾಗರಿಕ ಹಕ್ಕುಗಳ ಹೋರಾಟಗಾರರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರು ಇದ್ದಾರೆ.

ಉಪಾಧ್ಯಕ್ಷರಾಗಿ ಹೈಕೋರ್ಟ್ ವಕೀಲೆ ಅಖಿಲಾ ವಿದ್ಯಾಸಂದ್ರ ಮತ್ತು ಮಾಜಿ ಐಜಿಪಿ ಸೈಯದ್ ಉಲ್ಫತ್ ಹುಸೇನ್ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ವಕೀಲ ಮುಹಮ್ಮದ್ ನಿಯಾಝ್, ಕಾರ್ಯದರ್ಶಿಯಾಗಿ ಸಾಮಾಜಿಕ ಕಾರ್ಯಕರ್ತ ಹುಸೇನ್ ಕೋಡಿಬೆಂಗ್ರೆ, ಜಂಟಿ ಕಾರ್ಯದರ್ಶಿಗಳಾಗಿ ಜೀಶನ್ ಆಕಿಲ್ ಸಿದ್ದಿಕಿ, ವಕೀಲ ಶಾಜೀಹಾ ಪಿ ಮತ್ತು ಕೋಶಾಧಿಕಾರಿಯಾಗಿ ವಕೀಲ ಎನ್.ಕೆ. ಅಬ್ದುಲ್ ಸಲಾಂ ಆಯ್ಕೆ ಆಗಿದ್ದಾರೆ.

ದೇಗುಲಗಳಿಗೆ ತಸ್ತೀಕ್ ಹೆಚ್ಚಿಸಲು ಅರ್ಚಕರ ಒಕ್ಕೂಟ ಮನವಿ

ಬೆಂಗಳೂರು: ಮುಜರಾಯಿ ಇಲಾಖೆಯ ಅಧೀನದಲ್ಲಿರುವ ‘ಸಿ’ ದರ್ಜೆಯ ದೇವಸ್ಥಾನಗಳಿಗೆ ಇರುವ ತಸ್ತೀಕ್ ಮೊತ್ತವನ್ನು ₹5000 ದಿಂದ ₹10 ಸಾವಿರಕ್ಕೆ ಏರಿಸಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ‘ಸಿ’ ದರ್ಜೆಯ 36,217 ದೇವಸ್ಥಾನಗಳಿವೆ. ಬಹುತೇಕ ಎಲ್ಲವೂ ಗ್ರಾಮೀಣ ಪ್ರದೇಶದಲ್ಲಿವೆ. ಪೂಜೆಗಾಗಿ ಇದ್ದ ತಸ್ತೀಕ್ ಅನ್ನು ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ₹5000ಕ್ಕೆ ಹೆಚ್ಚಿಸಿದ್ದರು. ಆನಂತರ ಇಲ್ಲಿವರೆಗೆ ಹೆಚ್ಚಳವಾಗಿಲ್ಲ. ಪೂಜಾ ಸಾಮಗ್ರಿ ಸೇರಿದಂತೆ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿದ್ದು, ತಸ್ತೀಕ್ ಮೊತ್ತವನ್ನೂ ಹೆಚ್ಚಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ದೇವಸ್ಥಾನದ ಅರ್ಚಕರು ಮತ್ತು ಸಿಬ್ಬಂದಿಗೆ ಜೀವವಿಮೆ, ಆರೋಗ್ಯ ವಿಮೆ, ವಸತಿ ಸೌಕರ್ಯ ಒದಗಿಸಬೇಕು. ‘ಸಿ’ ದರ್ಜೆಯ ದೇವಸ್ಥಾನಗಳಿಗೆ ಪೂಜಾನಿಧಿ ಸ್ಥಾಪನೆ ಮಾಡಬೇಕು. ಅರ್ಚಕರ ಗೌರವ ನಿಧಿ ಆರಂಭಿಸಬೇಕು ಎಂದು ಒಕ್ಕೂಟದ ಗೌರವಾಧ್ಯಕ್ಷ ದಿನೇಶ್ ಗುಂಡೂರಾವ್, ಅಧ್ಯಕ್ಷ ರಾಧಾಕೃಷ್ಣ ಕೆ.ಇ., ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಆಗ್ರಹಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

WANTED Experienced DRIVER Kaadubeesanahalli, Bhoganhalli/ Bommanahalli (Bangalore) Mob: 9980140661 Email: starsilks@gmail.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Residential/ Commercial

Rajarajeshwari Nagar

RAJARAJESHWARI NAGAR Ideal Homes 44 X 50 North facing Excellent Location. 9900522163

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH ಪ್ರಜಾವಾಣಿ Classifieds More value, more impact
PUBLIC NOTICE
www.dhclassifieds.com BOOK NOW
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@550/-* PER SQCM
*Conditions apply
For more details contact: 9886213331 9901641752

ರಾಜೀನಾಮೆ ಹಿಂಪಡೆಯಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುವೆಂಪು ಸಾಹಿತ್ಯವನ್ನು, ವಿಶ್ವಮಾನವ ಸಂದೇಶವನ್ನು ಜನ ಸಾಮಾನ್ಯರಿಗೆ ತಲುಪಿಸಲು ಶ್ರಮಿಸಿದ ಕಡಿದಾಳ್ ಪ್ರಕಾಶ್ ಅವರು, ಯಾವುದೇ ಟೀಕೆಗಳಿಗೆ ಕಿವಿಗೊಡದೇ, ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ವಾಪಸ್ ಪಡೆಯಬೇಕು ಎಂದು ಬೆಂಗಳೂರಿನ ಸಹ್ಯಾದ್ರಿ ಸಂಘ ಒತ್ತಾಯಿಸಿದೆ.

‘ಕುವೆಂಪು ಅವರ ಹೇಳಿದಂತೆ ಟೀಕೆಗಳು ಸಾಯುತ್ತವೆ, ಕೆಲಸ ಉಳಿಯುತ್ತದೆ ಎಂಬ ನಿಲುವು ತೆಗೆದುಕೊಂಡು, ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳಬೇಕು’ ಎಂದು ಸಂಘದ ಅಧ್ಯಕ್ಷ ಜಿ.ಎ.ಪುರುಷೋತ್ತಮ ಗೌಡ, ಕಾರ್ಯದರ್ಶಿ ಎಚ್.ಸಿ.ಜಯಪ್ರಕಾಶ್ ಅವರು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಮಹಾ ಶಿವರಾತ್ರಿಯ ನಿಮಿತ್ತ ಮಹಾ ರುದ್ರಾಕ್ಷಿ ಪ್ರದಶನ ಹಾಗೂ ಮಾರಾಟ

ಫೆಬ್ರವರಿ 12 ರಿಂದ 17 ರವರೆಗೆ ಆಯೋಜನೆ

ಬೆಂಗಳೂರು: ನಗರದ ಹೊಟೇಲ್ ಡಾ. ರಾಜಕುಮಾರ ಇಂಟರನೇಷನಲ್, 6ನೇ ಕ್ರಾಸ್ ರೋಡ್, ಗಾಂಧಿ ನಗರ, ಬೆಂಗಳೂರು, ಫೆಬ್ರವರಿ 12 ರಿಂದ 17 ರವರೆಗೆ ಮಹಾಶಿವರಾತ್ರಿ ಪ್ರದರ್ಶನ ಮಾರಾಟ, ಈ ಮಹಾ ಶಿವರಾತ್ರಿಯಲ್ಲಿ ರುದ್ರಾಕ್ಷಿಯನ್ನು ಧರಿಸುವ ಅವಕಾಶವನ್ನು ಕಳೆದುಕೊಳ್ಳಬೇಡಿ ಹಾಗೂ ಶಿವರಾತ್ರಿಯಲ್ಲಿ ರುದ್ರಾಕ್ಷಿ ಧರಿಸುವದು ಶುಭದಾಯಕ, ಹೈದ್ರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ. ಇಂಡಸ್-ನೇಪಾಳ ಸಂಸ್ಥೆಯ ನಿರ್ದೇಶಕ ನರೇಂದ್ರ ಕಾಶಿರೆಡ್ಡಿ ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಸಸ್ಯಾಹಾರಿ ಹಾಗೂ ಮಾಂಸಹಾರಿಗಳು ಧರಿಸಬಹುದು. ಮಳಿಗೆಯು ಬೆಳಗ್ಗೆ 10.30 ರಿಂದ ರಾತ್ರಿ 9 ರವರೆಗೆ ತೆರೆದಿದ್ದು ಎಂದು ತಿಳಿಸಿದ್ದಾರೆ. ಸಂಪರ್ಕಿಸಿ: 7097296666

TODAY LAST DAY

ಸಾರ್ವಜನಿಕ ಪ್ರಕಟಣೆ

ಮೆ. ತ್ರಿನಯನಿ ರಿಯಲ್ಟರ್ಸ್ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೆ ನಂ. 39/2(ಪಿ), 41/1, 43(ಪಿ), 44(ಪಿ), 75/1 ರ ಉದಯಗಿರಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೆ. ತ್ರಿನಯನಿ ರಿಯಲ್ಟರ್ಸ್ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು, ಫೈಲ್ ನಂಬರ್ ಎಸ್‌ಇಐಎಎ 115 ಸಿಎಎನ್ 2024, ದಿನಾಂಕ: 10/02/2025 ರಂದು ಮಂಜೂರಾಗಿದೆ, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ ಎಸ್‌ಇಐಎಎ ಕರ್ನಾಟಕ ವೆಬ್‌ಸೈಟ್: http://environmentclearance.nic.in ನಲ್ಲಿ ಕಾಣಬಹುದು.

ಸಂಗೀತ ಕೇಳಿದರೆ ಮನಸ್ಸಿಗೆ ನೆಮ್ಮದಿ: ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

ಅಶ್ವಿನ್ ಬಾಳಿಗಾಗೆ ಶೇಷಾದ್ರಿ, ಗವಾಯಿ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ಮನರಂಜನೆ ಮಾತ್ರವಲ್ಲ, ಬಹಳ ರೋಗಗಳಿಗೆ ಔಷಧವಾಗಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ಮಹಾ ಮಹೋಪಾಧ್ಯಾಯ ಪಂಡಿತ್ ಆರ್.ವಿ.ಶೇಷಾದ್ರಿ ಗವಾಯಿ ಜನ್ಮ ಶತಮಾನೋತ್ಸವ ‘ಸ್ವರ ನಮನ’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ನಾನು ಸ್ವಲ್ಪ ದಿನ ತಬಲಾ ಕಲಿತೆ. ಆದರೆ, ಅಪಘಾತದಲ್ಲಿ ಬಲಗೈಗೆ ಪೆಟ್ಟಾದ ಕಾರಣ ವೈದ್ಯರ ಸಲಹೆಯ ಮೇರೆಗೆ ತಬಲಾ ಕಲಿಯುವುದನ್ನು ನಿಲ್ಲಿಸಿದೆ. ಆದರೂ ಸಂಗೀತದ ಮೇಲಿನ ಪ್ರೀತಿ ಕಡಿಮೆ ಆಗಿಲ್ಲ. ಸಿನಿಮಾ, ಹಿಂದೂಸ್ತಾನಿ ಅಥವಾ ಕರ್ನಾಟಕ ಸಂಗೀತವೇ ಇರಲಿ, ನಿತ್ಯ ಕೆಲವು ತಾಸು ಕೇಳುತ್ತೇನೆ. ಸಂಗೀತ ಕೇಳುವುದರಿಂದ ಲಾಭವೇ ಹೊರತು ನಷ್ಟವಿಲ್ಲ’ ಎಂದು ತಿಳಿಸಿದರು.

‘ಕೆಲಸದ ಒತ್ತಡ, ಅನಾರೋಗ್ಯ, ನಿದ್ರಾಹೀನತೆ, ನಾನಾ ರೀತಿಯ ಸಮಸ್ಯೆ ಎದುರಾಗುವುದು ಸಹಜ. ಅಂತಹ ಸಂದರ್ಭದಲ್ಲಿ ತಮಗೆ ಇಷ್ಟವಾದ ಸಂಗೀತ ಕೇಳುವುದರಿಂದ ನೆಮ್ಮದಿ ಸಿಗಲಿದೆ. ನಿತ್ಯದ ವೃತ್ತಿಯಲ್ಲಿ ಸಂಗೀತ ಬಳಸಿಕೊಳ್ಳುವುದು ಸೂಕ್ತ’ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಿದ್ವಾಂಸ ಎಂ.ಸೂರ್ಯಪ್ರಸಾದ್, ‘ಶೇಷಾದ್ರಿ ಗವಾಯಿ ಅವರು ಹಿಂದೂಸ್ತಾನಿ ಸಂಗೀತ ಕಲಿಸಿದರು. ನಾನು ಸಂಗೀತ ಮತ್ತು ನೃತ್ಯ ಕುರಿತು ವಿಮರ್ಶೆ ಬರೆಯಲು ಅವರೇ ಪ್ರೇರಣೆ. ಕಷ್ಟದ ದಿನಗಳಲ್ಲಿಯೂ ‘ಗಾಯನ ಗಂಗಾ’ ಎಂಬ ಕನ್ನಡ ಮಾಸಪತ್ರಿಕೆಯನ್ನು ಹೊರತರುತ್ತಿದ್ದರು. ಸೈಕಲ್ ಮೇಲೆ ಪತ್ರಿಕೆಗಳನ್ನು ಕೊಂಡೊಯ್ದು ಮನೆಗಳಿಗೆ ತಲುಪಿಸುತ್ತಿದ್ದರು. ಸಂಗೀತ, ನೃತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರು ಉತ್ತಮ ಕೆಲಸ ಮಾಡಿದ್ದರು’ ಎಂದು ನೆನಪಿಸಿಕೊಂಡರು.

ಇದೇ ವೇಳೆ ಹಿಂದೂಸ್ತಾನಿ ಗಾಯಕ ಅಶ್ವಿನ್ ಬಾಳಿಗಾ ಅವರಿಗೆ ಪಂಡಿತ್ ಆರ್. ವಿ.ಶೇಷಾದ್ರಿ ಗವಾಯಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ತಬಲಾ ವಾದಕ ಎನ್.ಎಸ್. ಗುಂಡಾಶಾಸ್ತ್ರಿ, ಸಂಗೀತ ಸಂಯೋಜಕ ಬಿ.ವಿ. ಶ್ರೀನಿವಾಸ್, ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸತೀಶ್ ಹಂಪಿಹೊಳಿ, ಕಲಾದೇಗುಲ ಶ್ರೀನಿವಾಸ್ ಹಾಜರಿದ್ದರು.

ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾವೇದಿಕೆಯ ಮಕ್ಕಳು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಗಾಯಕರು ಹಾಡಿನ ಮೂಲಕ ಶೇಷಾದ್ರಿ ಅವರಿಗೆ ಸ್ವರ ಗೌರವ ಸಲ್ಲಿಸಿದರು.

ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಎನ್ ಸಂತೋಷ್ ಹೆಗ್ಡೆ ಅವರು ಹಿಂದೂಸ್ತಾನಿ ಗಾಯಕ ಅಶ್ವಿನ್ ಬಾಳಿಗಾ ಅವರಿಗೆ ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಪ್ರಶಸ್ತಿ ನೀಡಿ ಗೌರವಿಸಿದರು. ಸತೀಶ್ ಹಂಪಿಹೊಳಿ, ಬಿ.ವಿ ಶ್ರೀನಿವಾಸ್, ಎಂ ಸೂರ್ಯಪ್ರಸಾದ್, ಎನ್.ಎಸ್ ಗುಂಡಾಶಾಸ್ತ್ರಿ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘8 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ’

ಬೆಂಗಳೂರು: ‘ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಪ್ರಸಕ್ತ ವರ್ಷ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ 7.85 ಲಕ್ಷ ವಿದ್ಯಾರ್ಥಿಗಳಿಗೆ ₹290 ಕೋಟಿ ವಿದ್ಯಾರ್ಥಿವೇತನ ನೀಡಲಾಗುತ್ತಿದೆ’ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

‘6.25 ಲಕ್ಷ ವಿದ್ಯಾರ್ಥಿಗಳ ಖಾತೆಗೆ ₹180 ಕೋಟಿ ವರ್ಗಾಯಿಸಲಾಗಿದೆ. 1.60 ಲಕ್ಷ ವಿದ್ಯಾರ್ಥಿಗಳಿಗೆ ₹100 ಕೋಟಿ ಅನುದಾನ ಅಗತ್ಯವಿದ್ದು, ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದಿದ್ದಾರೆ.

‘ವಿದ್ಯಾಸಿರಿ’ ಯೋಜನೆಯಡಿ ಹಾಸ್ಟೆಲ್‌ಗಳಲ್ಲಿ 23 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. 7,500 ವಿದ್ಯಾರ್ಥಿಗಳಿಗೆ ‘ಅರಿವು’ ಯೋಜನೆ ಹಾಗೂ ವಿದೇಶಿ ವಿದ್ಯಾಭ್ಯಾಸ ನೆರವು ಯೋಜನೆಯಡಿಯಲ್ಲಿ ₹92.50 ಕೋಟಿ ಸಾಲ ವಿತರಿಸಲಾಗಿದೆ. ವಕ್ಫ್ ಮಂಡಳಿಗೆ ಬಿಡುಗಡೆಯಾದ ₹157 ಕೋಟಿಯಲ್ಲಿ ₹125 ಕೋಟಿ ವೆಚ್ಚ ಮಾಡಲಾಗಿದೆ’ ಎಂದೂ ಹೇಳಿದ್ದಾರೆ.

ನಗರದಲ್ಲಿ ಇಂದು

ಹಂಸಲೇಖ

ಅಕ್ಷರ ಉತ್ಸವ ನಿತ್ಯೋತ್ಸವ: ಉದ್ಘಾಟನೆ: ಅಶ್ವಿನಿ ಪುನೀತ್ ರಾಜಕುಮಾರ್, ಪ್ರಾಸ್ತಾವಿಕ ಮಾತು: ಎನ್.ಆರ್. ಗೌರಿಪ್ರಸಾದ್, ಅಧ್ಯಕ್ಷತೆ: ಹಂಸಲೇಖ, ಅತಿಥಿಗಳು: ದಿನೇಶ್ ಗುಂಡೂರಾವ್, ಬಾಲಕೃಷ್ಣ ಮಾಗಡಿ, ಶಾಂತಕುಮಾರಿ, ಶ್ರೀನಾಥ್, ಎಸ್. ನಾರಾಯಣ್, ಎಸ್.ಎಂ. ಸುರೇಶ್, ಬಲರಾಮ್, ಶಿವರಾಜು, ಅನಂತು, ಎಸ್. ನಾಗರತ್ನ, ಆಯೋಜನೆ: ಅಕ್ಷರ ಕಲ್ಚರಲ್ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4


ಚನ್ನಬಸಪ್ಪ

ಎಲ್.ಎಸ್. ಶೇಷಗಿರಿರಾವ್ ಜನ್ಮ ಶತಮಾನೋತ್ಸವದ ಸಮಾರೋಪ: ಉದ್ಘಾಟನೆ: ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಗ್ರಂಥ ಲೋಕಾರ್ಪಣೆ: ಸಿ.ಎನ್. ರಾಮಚಂದ್ರನ್, ಸಮಾರೋಪ: ಮಲ್ಲೇಪುರಂ ಜಿ. ವೆಂಕಟೇಶ, ಉಪಸ್ಥಿತಿ: ಭಾರತೀ ಶೇಷಗಿರಿರಾವ್, ಆರ್. ಶೇಷಶಾಸ್ತ್ರಿ, ಟಿ.ಎನ್. ವಾಸುದೇವಮೂರ್ತಿ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ನಯನ ಸಭಾಂಗಣ, ಜೆ.ಸಿ ರಸ್ತೆ, ಸಂಜೆ 5

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮನೆಯಲ್ಲಿ 80ಕ್ಕೂ ಹೆಚ್ಚು ಚೀಲ ಅಕ್ಕಿ ದಾಸ್ತಾನು

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಮಸೀದಾಪುರ ಗ್ರಾಮದ ನ್ಯಾಯ ಬೆಲೆ ಅಂಗಡಿ ಮಾಲೀಕ ರೇವಣಸಿದ್ದಯ್ಯ ಅವರು ಫೆಬ್ರುವರಿ ತಿಂಗಳ 80ಕ್ಕೂ ಹೆಚ್ಚು ಚೀಲ ಅಕ್ಕಿಯನ್ನು ಜನರಿಗೆ ವಿತರಿಸದೇ ಗಬ್ಬೂರು ಗ್ರಾಮದ ಮನೆಯೊಂದರಲ್ಲಿ ದಾಸ್ತಾನು ಮಾಡಿದ ಪ್ರಕರಣ ಬಯಲಾಗಿದೆ.

‘ಅಂಗಡಿ ಮಾಲೀಕರು ಪಡಿತರದಾರರ ಹೆಬ್ಬೆಟ್ಟು ಪಡೆದು ಪಡಿತರ ವಿತರಣೆ ಮಾಡಲಿಲ್ಲ. ವಿತರಿಸಬೇಕಾಗಿದ್ದ ಅಕ್ಕಿ ಪ್ರಮಾಣವನ್ನು ಬಿಳಿ ಹಾಳೆ ಮೇಲೆ ಬರೆದು ಕೊಟ್ಟರು. ಮುಂದಿನ ತಿಂಗಳು ಒಟ್ಟಿಗೆ ವಿತರಿಸುವುದಾಗಿ 5-6 ತಿಂಗಳಿಂದ ವಂಚಿಸಿದ್ದಾರೆ’ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದ 50ಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿದಾಗ ಪ್ರತಿಯೊಬ್ಬರ ಮನೆಯಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರು ಮೊಹರು ಹಾಕಿದ ಚೀಟಿಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

‘ಗ್ರಾಮದ ಜನರಿಗೆ 5 ತಿಂಗಳಿಂದ ಹೀಗೆ ಹೇಳುತ್ತಿದ್ದಾರೆ. ಎಲ್ಲವೂ ಒಟ್ಟಿಗೆ ಕೊಡುತ್ತಾರೆ ಎಂದು ನಾವು ಭಾವಿಸಿದ್ದೆವು. ಪ್ರಶ್ನಿಸಿದರೆ ಹಿರಿಯ ನಾಗರಿಕರಿಗೆ, ಮಹಿಳೆಯರು ಎನ್ನದೇ ನ್ಯಾಯಬೆಲೆ ಅಂಗಡಿಯ ಮಾಲೀಕರ ಮಗ ಅವಾಚ್ಯ ಮತ್ತು ಅಶ್ಲೀಲ ಪದಗಳಿಂದ ನಿಂದಿಸುತ್ತಾನೆ’ ಎಂದು ಜನರು ಆರೋಪಿಸಿದರು.

‘ಶನಿವಾರ ಗ್ರಾಮಕ್ಕೆ ಪಡಿತರ ಅಕ್ಕಿ ಹೊತ್ತು ಬಂದ ಲಾರಿ ಗಬ್ಬೂರು ಸಮೀಪದ ಕ್ಯಾಂಪ್‌ನಲ್ಲಿ ದಾಸ್ತಾನು ಮಾಡಲು ಹೊರಟಿತು. ಇಲ್ಲಿ ಏಕೆ ದಾಸ್ತಾನು ಮಾಡುತ್ತೀರಿ? ನ್ಯಾಯಬೆಲೆ ಅಂಗಡಿಯಲ್ಲಿ ದಾಸ್ತಾನು ಮಾಡಿ ಜನರಿಗೆ ವಿತರಿಸಿ ಎಂದು ನಾವು ಪ್ರಶ್ನಿಸಿದ್ದೇವೆ. ಅಲ್ಲಿ ನೆಟ್‌ವರ್ಕ್ ಸಮಸ್ಯೆ ಇದೆ ಎಂದು ನೆಪ ಹೇಳಿದರು. ನಾವು ಪಟ್ಟು ಬಿಡದ ಹಿನ್ನೆಲೆ ಲಾರಿ ವಾಪಸ್ ತೆರಳಿದೆ ಎಂದುಕೊಂಡಿದ್ದೆವು. ಆದರೆ, ಲಾರಿಯಲ್ಲಿದ್ದ 80ಕ್ಕೂ ಹೆಚ್ಚು ಅಕ್ಕಿ ಮೂಟೆಗಳನ್ನು ಗಬ್ಬೂರಿನ ಮನೆಯಲ್ಲಿ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುವ ಸಂಚು ರೂಪಿಸಿದ್ದಾರೆ. 285 ರೇಷನ್ ಕಾರ್ಡ್ ಕುಟುಂಬಗಳಿಗೆ ಈ ಅಕ್ಕಿ ವಿತರಣೆ ಮಾಡಬೇಕಿತ್ತು’ ಎಂದು ಗ್ರಾಮಸ್ಥ ಶಿವರಾಜ ಆರೋಪಿದರು.

ಗಬ್ಬೂರು ಗ್ರಾಮದ ಮನೆಯೊಂದರಲ್ಲಿ ದಾಸ್ತಾನು ಮಾಡಿರುವ ಪಡಿತರ ಅಕ್ಕಿ ಚೀಲದ ಮೂಟೆಗಳು

ಪಡಿತರವನ್ನು ನ್ಯಾಯ ಬೆಲೆ ಅಂಗಡಿಯಲ್ಲಿ ದಾಸ್ತಾನು ಮಾಡಬೇಕು. ಆದರೆ, ಮನೆಯಲ್ಲಿ ಮಾಡಲಾಗಿದೆ. ಆ ಸ್ಥಳಕ್ಕೆ ಭೇಟಿ ನೀಡಿ ಕ್ರಮಕ್ಕೆ ವರದಿ ನೀಡುತ್ತೇನೆ

ರಾಮಕೃಷ್ಣ ನಾಯಕ, ಪ್ರಭಾರ ಆಹಾರ ಇಲಾಖೆ ನಿರೀಕ್ಷಕ, ದೇವದುರ್ಗ

‘ಸಿದ್ದರಾಮಯ್ಯ 5 ವರ್ಷ ಸಿ.ಎಂ’

ಪ್ರಜಾವಾಣಿ ವಾರ್ತೆ

ಕೋಲಾರ: ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಆಗಿ ಮುಂದುವರಿಯಲಿದ್ದಾರೆ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯೂ ಆಗುವುದಿಲ್ಲ ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘2028ರಲ್ಲೂ ಸಿದ್ದರಾಮಯ್ಯ ನಾಯಕತ್ವದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಇದಕ್ಕೆ ಯಾರ ಅಭ್ಯಂತರವೂ ಇರಲಾರದು. ಬಹಳ ಚಟುವಟಿಕೆಯಿಂದ ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಅವರ ಮಾರ್ಗದರ್ಶನ ಅಗತ್ಯವಿದೆ’ ಎಂದರು.

ಕೊತ್ತೂರು ಮಂಜುನಾಥ್

‘ಪಕ್ಷದಲ್ಲಿ ಗುಂಪುಗಾರಿಕೆ ಇಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಕೇವಲ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ’ ಎಂದು ಅವರು ಹೇಳಿದರು.

‘ಪಕ್ಷವೇ ಬೇರೆ, ಸರ್ಕಾರವೇ ಬೇರೆ. ಡಿ.ಕೆ.ಶಿವಕುಮಾರ್ ಎರಡು ಹುದ್ದೆಯಲ್ಲಿ ಮುಂದುವರಿದರೆ ತಪ್ಪೇನು? ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಅವರೊಬ್ಬ ಹಿರಿಯ ನಾಯಕ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಏನು ಹೇಳುತ್ತಾರೋ ಅದೇ ಅಂತಿಮ’ ಎಂದರು.

ಲೋಕಾಯುಕ್ತ ಅಧಿಕಾರಿ ಸೋಗಿನಲ್ಲಿ ಬ್ಲ್ಯಾಕ್‌ಮೇಲ್

ಬೆಂಗಳೂರು: ಲೋಕಾಯುಕ್ತ ಅಧಿಕಾರಿ ಸೋಗಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ‘ಬ್ಲ್ಯಾಕ್‌ಮೇಲ್’ ಮಾಡುತ್ತಿದ್ದ ಆರೋಪಿ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೋಕಾಯುಕ್ತ ಡಿವೈಎಸ್ಪಿ ಬಸವರಾಜು ಆರ್. ಮಗದಮ್ ಅವರು ದೂರು ನೀಡಿದ್ದಾರೆ.

‘ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ತಾನು ಲೋಕಾಯುಕ್ತ ಕಚೇರಿ ಅಧಿಕಾರಿ ಎಂದು ಪರಿಚಯಿಸಿ ಕೊಳ್ಳುತ್ತಿದ್ದ. ನಿಮ್ಮ ವಿರುದ್ಧ ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿ ಪ್ರಕರಣ ದಾಖಲಾಗುತ್ತಿದೆ. ಇದನ್ನು ತಪ್ಪಿಸಲು ಹಣ ನೀಡಬೇಕು ಎಂದು ಹೇಳುತ್ತಿದ್ದ’ ಎಂದು ಮೂಲಗಳು ಹೇಳಿವೆ.

‘ಆರೋಪಿಯ ಮೊಬೈಲ್ ಸಂಖ್ಯೆ ಪರಿಶೀಲಿಸಲಾಗಿದೆ. ಮೊಬೈಲ್ ಲೊಕೇಶನ್ ಪರಿಶೀಲಿಸಿದಾಗ ಮಹಾರಾಷ್ಟ್ರದ ಶಿರೋಲ್ ತೋರಿಸುತ್ತಿದ್ದು, ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದರು.

‘ದೀರ್ಘ ಬಾಳಿಕೆಯ ರಸ್ತೆ ನಿರ್ಮಾಣ’

ಬೆಂಗಳೂರು ಪ್ರದಕ್ಷಿಣೆ, ವೈಟ್‌ಟಾಪಿಂಗ್ ಪರಿಶೀಲನೆ ವೇಳೆ ಡಿಸಿಎಂ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರ್ಯಾಂಡ್ ಬೆಂಗಳೂರು ಸುಗಮ ಸಂಚಾರ ಯೋಜನೆ’ ಅಡಿಯಲ್ಲಿ ನಗರದಲ್ಲಿ 30 ವರ್ಷಗಳ ದೀರ್ಘ ಬಾಳಿಕೆ ಬರುವಂತಹ ಅಂತರ ರಾಷ್ಟ್ರೀಯ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲು ವೈಟ್‌ಟಾಪಿಂಗ್ ಮಾಡಲಾಗುತ್ತಿದೆ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಸವನಗುಡಿ, ಯಶವಂತಪುರ, ಆರ್‌.ಟಿ.ನಗರ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ವೈಟ್‌ಟಾಪಿಂಗ್ ಕಾಮಗಾರಿಗಳ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ದೀರ್ಘ ಬಾಳಿಕೆ ಬರುವಂತಹ ಶಾಶ್ವತ ರಸ್ತೆ ನಿರ್ಮಿಸುವ ಈ ಯೋಜನೆಗೆ ₹1,700 ಕೋಟಿ ವೆಚ್ಚ ಮಾಡಲಾಗುತ್ತಿದೆ. ಈ ಯೋಜನೆಯಲ್ಲಿ 14 ಪ್ಯಾಕೇಜ್‌ಗಳ ಮೂಲಕ ಬೆಂಗಳೂರಿನ 150 ಕಿ.ಮೀ. ಉದ್ದದ 97 ರಸ್ತೆಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ನಡೆಯುತ್ತಿದೆ’ ಎಂದು ವಿವರಿಸಿದರು.

‘ಬಿಬಿಎಂಪಿ, ಜಲಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಸ್ಕಾಂ ನಡುವೆ ಸಮನ್ವಯದೊಂದಿಗೆ ಶಾಶ್ವತ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಕೇಬಲ್, ವಿದ್ಯುತ್ ತಂತಿಗಳನ್ನು ಅಳವಡಿಸಲು ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸುವುದೂ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ, ಮುಂದೆ ಯಾವುದೇ ಕಾರಣಕ್ಕೂ ರಸ್ತೆ ಅಗೆಯಲು ಅವಕಾಶ ನೀಡದಂತೆ ಕಾಮಗಾರಿ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ನಗರದಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಪರಿಶೀಲನೆ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಸ್ತೆಯ ಗಾತ್ರವನ್ನು ಟೇಪ್‌ನಿಂದ ಅಳತೆ ಮಾಡಿದರು

‘ಈ ಯೋಜನೆಯ ಕಾಮಗಾರಿ ಪೂರ್ಣಗೊಳಿಸಲು 11 ತಿಂಗಳ ಕಾಲ ಮಿತಿ ನಿಗದಿಪಡಿಸಲಾಗಿದೆ. ಈ ಯೋಜನೆಯ ಎರಡನೇ ಹಂತದಲ್ಲಿ 450 ಕಿ.ಮೀ. ಉದ್ದದ ರಸ್ತೆಗಳ ವೈಟ್ ಟಾಪಿಂಗ್ ಮಾಡಲಾಗುವುದು. ಈ ಎಲ್ಲ ಹಂತಗಳ ಕಾಮಗಾರಿ ಮುಕ್ತಾಯವಾದರೆ ಬೆಂಗಳೂರಿನಲ್ಲಿ ಒಟ್ಟಾರೆ 1,700 ಕಿ.ಮೀ. ಉದ್ದದ ರಸ್ತೆಗಳ ವೈಟ್‌ಟಾಪಿಂಗ್ ಮುಕ್ತಾಯಗೊಳ್ಳಲಿದೆ’ ಎಂದು ಮಾಹಿತಿ ನೀಡಿದರು.

‘ರಸ್ತೆಗಳ ಜೊತೆಗೆ ಬೆಂಗಳೂರಿನಾದ್ಯಂತ ಮಳೆ ನೀರುಗಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮುಂದಾಗಿದ್ದೇವೆ. ನಾವು ಒಂದೇ ದಿನದಲ್ಲಿ ಎಲ್ಲಾ ಬದಲಾವಣೆ ಮಾಡುತ್ತೇವೆ ಎಂದು ಹೇಳುವುದಿಲ್ಲ. ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಯೋಜನೆ ಕೈಗೆತ್ತಿಕೊಳ್ಳುತ್ತಿದ್ದೇವೆ’ ಎಂದರು.

ವೈಟ್‌ಟಾಪಿಂಗ್ ಪರಿಶೀಲನೆ ವೇಳೆ ಶಾಸಕ ರವಿಸುಬ್ರಮಣ್ಯ, ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಕೆಪಿಸಿಸಿ ವಕ್ತಾರ ಶಂಕರ್ ಗುಹಾ, ಸಚಿವ ಬೈರತಿ ಸುರೇಶ್, ಶಾಸಕ ಎಸ್‌.ಟಿ.ಸೋಮಶೇಖರ್ ಮತ್ತಿತರರು ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ₹1700 ಕೋಟಿ ವೆಚ್ಚ
- 14 ಪ್ಯಾಕೇಜ್, 150 ಕಿ.ಮೀ. ಉದ್ದದ ರಸ್ತೆ ಕಾಮಗಾರಿ
- ಭವಿಷ್ಯದಲ್ಲಿ ರಸ್ತೆ ಅಗೆಯುವ ಅಗತ್ಯ ಬೀಳದಂತೆ ನಿರ್ಮಾಣ

ಟೇಪ್ ಹಿಡಿದು ಪರಿಶೀಲನೆ

ಬಸನಗುಡಿಯ ನೆಟ್ಟಕಲ್ಲಪ್ಪ ವೃತ್ತದ ಬಳಿಯ ವೈಟ್‌ಟಾಪಿಂಗ್ ಕಾಮಗಾರಿ ಪರಿಶೀಲಿಸುವಾಗ, ಶಿವಕುಮಾರ್ ಅವರು, ತಾವೇ ಟೇಪ್ ಹಿಡಿದು ರಸ್ತೆಯ ಗಾತ್ರವನ್ನು ಅಳತೆ ಮಾಡಿದರು.

‘ನೀವೇ ಗುಣಮಟ್ಟ ಪರಿಶೀಲಿಸುತ್ತಿದ್ದೀರಿ’ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ, ‘ಯೋಜನೆಗೆ ಮೀಸಲಿಟ್ಟಿರುವ ಹಣ ರಸ್ತೆಗೆ ವೆಚ್ಚವಾಗಬೇಕು. ರಸ್ತೆ ನಿರ್ದಿಷ್ಟ ಪ್ರಮಾಣದಲ್ಲಿ ದಪ್ಪ ಇರಬೇಕು. ಹೀಗಾಗಿ ಪರಿಶೀಲನೆ ಮಾಡಿದ್ದೇನೆ’ ಎಂದು ಉತ್ತರಿಸಿದರು.

‘ಕಾಮಗಾರಿ ಮುಗಿದ ನಂತರವೂ ಗುಣಮಟ್ಟ ಪರಿಶೀಲಿಸಲಾಗುವುದು. ಎಲ್ಲೆಡೆ ಗುಣಮಟ್ಟದ ಕಾಮಗಾರಿ ನಡೆಯುತ್ತಿದೆ. ಒಂದು ಕಡೆ ನನಗೆ ಸ್ವಲ್ಪ ವ್ಯತ್ಯಾಸ ಕಂಡು ಬಂದಿದೆ. ಅಲ್ಲಿ ತಾಂತ್ರಿಕ ತಂಡವನ್ನು ಕಳುಹಿಸಿ ಮತ್ತೊಮ್ಮೆ ಪರಿಶೀಲಿಸುತ್ತೇವೆ’ ಎಂದು ತಿಳಿಸಿದರು.

‘ಡಿಸಿಎಂ ಫೋಟೊ ಶೂಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈಟ್ ಟಾಪಿಂಗ್ ಕಾಮಗಾರಿ ಹೆಸರಿನಲ್ಲಿ ಫೋಟೊ ಶೂಟಿಂಗ್ ಮಾಡಿದರೆ ಬೆಂಗಳೂರಿನ ಸಮಸ್ಯೆಗಳು ಪರಿಹಾರ ಆಗುತ್ತವೆಯೇ’ ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.

‘ಬೆಂಗಳೂರು ಅಭಿವೃದ್ಧಿ ಸಚಿವರಾಗಿ ನಿಮಗೆ ಬ್ರ್ಯಾಂಡ್ ಬೆಂಗಳೂರಿನ ಬಗ್ಗೆ ನಿಜವಾದ ಕಾಳಜಿ ಇದ್ದರೆ ನೀವು ಮಾಡಬೇಕಾದ ಕೆಲಸಗಳು ಬಹಳಷ್ಟಿವೆ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘₹660 ಕೋಟಿ ವ್ಯಯಿಸಿದರೂ ನಗರದಲ್ಲಿ ಇನ್ನೂ ಅನೇಕ ರಸ್ತೆಗಳು ಬಾಯ್ತೆರೆದು ಕೊಂಡಿವೆ. ಮಾರ್ಚ್ ತಿಂಗಳಿನಿಂದ ಏಪ್ರಿಲ್‌ವರೆಗೆ ಬೇಸಿಗೆಯಲ್ಲಿ ರಸ್ತೆ ಗುಂಡಿಗಳ ಮುಚ್ಚಲು, ರಸ್ತೆ ರಿಪೇರಿಗೆ ಒಳ್ಳೆಯ ಸಮಯ. ಈಗಲೂ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ, ಮಳೆಗಾಲದಲ್ಲಿ ರಸ್ತೆ ಗುಂಡಿಗಳು ಮತ್ತೊಮ್ಮೆ ಸಾರ್ವಜನಿಕರಿಗೆ ಮೃತ್ಯುಕೂಪ ಆಗುವುದು ಗ್ಯಾರಂಟಿ’ ಎಂದು ತಿಳಿಸಿದ್ದಾರೆ.

‘ಕಳೆದ ಬೇಸಿಗೆಯಲ್ಲಿ ಟ್ಯಾಂಕರ್ ಮಾಫಿಯಾ ಜತೆ ಶಾಮೀಲಾಗಿ ಸುಲಿಗೆ ಮಾಡಿದ್ದಿರಿ. ಈ ವರ್ಷವಾದರೂ ಬೇಸಿಗೆ ಕಾಲದಲ್ಲಿ ಬೆಂಗಳೂರಿನ ಜನತೆ ನೀರಿಗಾಗಿ ಬವಣೆ ಪಡದಂತೆ ಏನಾದರೂ ಕ್ರಮ ಕೈಗೊಳ್ಳುತ್ತೀರೋ ಅಥವಾ ಜನರನ್ನು ಟ್ಯಾಂಕರ್ ಮಾಫಿಯಾ ಮರ್ಜಿಗೆ ಬಿಡುತ್ತೀರೋ’ ಎಂದು ಅಶೋಕ ಪ್ರಶ್ನಿಸಿದ್ದಾರೆ.

‘ಬಜೆಟ್ ಪೂರ್ವಭಾವಿ ಸಭೆಗಳಿಗೆ ಉಪಮುಖ್ಯಮಂತ್ರಿ ಸಾಹೇಬರ ಅನುಪಸ್ಥಿತಿ ನೋಡಿದರೆ ಬಹುಶಃ ಅವರಿಗೆ ಆಹ್ವಾನವೇ ಇಲ್ಲ ಅನ್ನಿಸುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಕೇವಲ ನಾಮಕಾವಸ್ತೆ ಉಪಮುಖ್ಯಮಂತ್ರಿ ಆಗಿರುವ ಡಿ.ಕೆ.ಶಿವಕುಮಾರ್ ಅವರನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ ಅನ್ನಿಸುತ್ತದೆ’ ಎಂದಿದ್ದಾರೆ.

ಇಂದಿನ ಸಂಕಲ್ಪ. ಉಜ್ವಲ ನಾಳೆಯ ಪಕ್ಷಿನೋಟ.

ಬೆಂಗಳೂರಿನ ದೂರದೃಷ್ಟಿಯುಳ್ಳ ಯುವಜನತೆ ಕೇಂದ್ರ ಆಕರ್ಷಣೆಯಾಗುತ್ತಿರುವ ವೇದಿಕೆ. ಈ ಉತ್ಸಾಹಭರಿತ ತರುಣ–ತರುಣಿಯರ ಕನಸುಗಳನ್ನು ಹುರಿದುಂಬಿಸೋಣ ಬನ್ನಿ.

ಡಿಹೆಚ್ ಬೆಂಗಳೂರು 2040 ಸಮಿಟ್ ನಲ್ಲಿ, ಬೆಂಗಳೂರಿನ ಪ್ರಗತಿಯನ್ನು ಮುಂದುವರಿಸಬಲ್ಲ ಪರಿವರ್ತನಕಾರಿ ಆಲೋಚನೆಗಳನ್ನು ಹುರಿದುಂಬಿಸುತ್ತೇವೆ. ಈ ಸಭೆಯಲ್ಲಿ ಕೆಲವು ಜನಪ್ರಿಯ ಚಿಂತಕರು ಪಾಲ್ಗೊಂಡು, ನಮ್ಮ ನಗರಕ್ಕೆ ಅದ್ಭುತವಾದ ಮತ್ತು ಸುಸ್ಥಿರವಾದ ದೃಷ್ಟಿಕೋನದ ಕಲ್ಪನೆಯನ್ನು ರೂಪಿಸಲಿದ್ದಾರೆ. ಕಳೆದೊಂದು ದಶಕದಿಂದ, ಯುರೋ ಸ್ಕೂಲ್, ಬೆಂಗಳೂರಿನ ವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ವಿಷಯಗಳಲ್ಲಿ ಅಪೂರ್ವ ಸಾಧನೆಗಳನ್ನು ದಾಖಲಿಸಿದ್ದಾರೆ. ಡೆಕ್ಕನ್ ಹೆರಾಲ್ಡ್ ಸಹಭಾಗಿತ್ವದಲ್ಲಿ ಯುರೋ ಸ್ಕೂಲ್, 2040ರಲ್ಲಿ ಬೆಂಗಳೂರಿನ ಚಿತ್ರಣವನ್ನು ಬಣ್ಣಿಸಲು ಉತ್ಸುಕವಾಗಿದೆ. ಅದ್ಭುತ ಪರಿಕಲ್ಪನೆಗಳಿಗೆ ಫೆಬ್ರವರಿ 21 ರಂದು ಸಮಿಟ್ ನಲ್ಲಿ ಮನ್ನಣೆ ನೀಡಲಾಗುತ್ತದೆ.

ಡೆಕ್ಕನ್ ಹೆರಾಲ್ಡ್ ಮತ್ತು ಯುರೋ ಸ್ಕೂಲ್ ನ ಈ ಜಂಟಿ ಚಾಲನೆಯು, ಬೆಂಗಳೂರು ಮಹಾನಗರಕ್ಕೆ 2040ರ ಪರಿವರ್ತನಕಾರಿ ಕಲ್ಪನೆಗಳ ವೇದಿಕೆ ಸಿದ್ಧಪಡಿಸಲಿದೆ.

ಬನ್ನಿ, ನೀವು ಕೂಡ ಸಭೆಯಲ್ಲಿ ಪಾಲ್ಗೊಳ್ಳಿರಿ ಮತ್ತು ಬೆಂಗಳೂರು–2040 ಎಂಬ ಕಲ್ಪನೆಗೆ ನಿಮ್ಮ ಆಲೋಚನೆ ಹಾಗೂ ದೃಷ್ಟಿಕೋನಗಳ ಕೊಡುಗೆ ನೀಡಿರಿ.

ಡಿಹೆಚ್ ಬೆಂಗಳೂರು 2040 ಮತ್ತು ಯುರೋಸ್ಕೂಲ್ ನ ಉಪಕ್ರಮ

ಇನ್ನಷ್ಟು ತಿಳಿದುಕೊಳ್ಳಲು, QR ಕೋಡ್ ಅನ್ನು ಸ್ಕ್ಯಾನ್ ಮಾಡಿ.

50 ವರ್ಷಗಳ ಪರಿಣತಿ ಹಾಗೂ ವಿಶ್ವದರ್ಜೆಯ ಸೌಕರ್ಯ ಜೊತೆಗೂಡಿದಾಗ, ಪಾಸಿಟಿವ್ ಫಲಿತಾಂಶ ನಿಶ್ಚಿತ!

ಖ್ಯಾತ ಪ್ರಸೂತಿ ತಜ್ಞೆ ದಿ. ಡಾ. ಸುಲೋಚನಾ ಗುಣಶೀಲ ಮತ್ತು ಹೆಸರಾಂತ ಶಸ್ತ್ರ ಚಿಕಿತ್ಸೆ ತಜ್ಞ ದಿ. ಡಾ. ಮಾವಳ್ಳಿ ಗುಣಶೀಲ ಅವರು ವಿಶ್ವದರ್ಜೆಯ ಪ್ರಸೂತಿ ಸೇವೆಯನ್ನು ಒದಗಿಸುವ ಸಲುವಾಗಿ, 1975 ರಲ್ಲಿ ಗುಣಶೀಲ ಸರ್ಜಿಕಲ್ & ಮ್ಯಾಟರ್ನಿಟಿ ಹಾಸ್ಪಿಟಲ್ ಅನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ತರುವಾಯ ಮಕ್ಕಳಾಗದ ದಂಪತಿಗಳು ಇವರನ್ನು ಸಂಪರ್ಕಿಸಲಾರಂಭಿಸಿದರು. ಅವರ ನೋವನ್ನು ಅರ್ಥೈಸಿಕೊಂಡ ವೈದ್ಯರ ಜೋಡಿ, 1985ರಲ್ಲಿ ಕೃತಕ ಸಂತಾನೋತ್ಪತ್ತಿ ಚಿಕಿತ್ಸೆ ಸೇವೆಗಳನ್ನು ತಮ್ಮ ಆಸ್ಪತ್ರೆಯಲ್ಲಿ ಪ್ರಾರಂಭಿಸಿದರು. ಈ ಸೇವೆ ಆರಂಭವಾಗಿ 3 ವರ್ಷಗಳ ನಂತರ, 1988 ರಲ್ಲಿ ಸಂತಾನೋತ್ಪತ್ತಿ ಸಹಾಯಕ ತಂತ್ರಜ್ಞಾನದ (ಎ.ಆರ್.ಟಿ) ಮೂಲಕ ದಕ್ಷಿಣ ಭಾರತದಲ್ಲೇ ಮೊದಲ ಮಗುವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಈ ಆಸ್ಪತ್ರೆಯದ್ದಾಯಿತು.

ನಂತರ ಡಾ. ದೇವಿಕಾ ಗುಣಶೀಲ ಅವರು ತಮ್ಮ ತಾಯಿ ಹಾಕಿಕೊಟ್ಟ ಅಡಿಪಾಯವನ್ನು, ತಮ್ಮ ಜೀವನ ಸಂಗಾತಿ ಡಾ. ರಾಜಶೇಖರ್ ನಾಯಕ್ ಅವರ ಜೊತೆಗೂಡಿ ಈ ಆಸ್ಪತ್ರೆಯನ್ನು ಮತ್ತೊಂದು ಸ್ತರಕ್ಕೆ ಕೊಂಡೊಯ್ದರು. ತಮ್ಮ ತಾಯಿಯವರು ಆರಂಭಿಸಿದ ಸಂತಾನೋತ್ಪತ್ತಿ ಸಹಾಯಕ ತಂತ್ರಜ್ಞಾನ ಬಳಸಿಕೊಳ್ಳುವ ಜೊತೆಗೆ ಜಗತ್ತಿನಲ್ಲಿ ಲಭ್ಯವಿರುವ ಅತ್ಯಾಧುನಿಕ ಸಂತಾನೋತ್ಪತ್ತಿ ಸಹಾಯಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಡಾ. ದೇವಿಕಾ ಗುಣಶೀಲ ಅವರು ಮಕ್ಕಳಾಗುತ್ತಿಲ್ಲ ಎಂದು ಕೊರಗಿನಲ್ಲಿದ್ದ ಸಹಸ್ರಾರು ದಂಪತಿಗಳ ಬಾಳಲ್ಲಿ ಸಂತಸದ ಬೆಳಕು ತಂದು, ಅವರ ಕೊರಗನ್ನು ನೀಗಿಸಿದ್ದಾರೆ.

ಇದೀಗ ಗುಣಶೀಲ ಸರ್ಜಿಕಲ್ & ಮ್ಯಾಟರ್ನಿಟಿ ಹಾಸ್ಪಿಟಲ್ ಅತ್ಯಾಧುನಿಕ ಸಂತಾನೋತ್ಪತ್ತಿ ಸಹಾಯಕ ತಂತ್ರಜ್ಞಾನಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವ ಮೂಲಕ ಹಲವಾರು ಪ್ರಥಮ ಸಾಧನೆಗಳನ್ನು ತನ್ನದಾಗಿಸಿಕೊಳ್ಳುತ್ತಿದೆ. ಬಂಜೆತನದಿಂದ ನರಳುತ್ತಿರುವ ದಂಪತಿಗಳ ಆರೋಗ್ಯ ಮೌಲ್ಯಾಂಕ ಮತ್ತು ಸಮಾಲೋಚನೆ ಜೊತೆಗೆ ವಿವಿಧ ಸ್ತರದ ಚಿಕಿತ್ಸೆಯವರೆಗೆ ಎ.ಆರ್.ಟಿ.ಯ ಸಂಪೂರ್ಣ ಸೌಲಭ್ಯಗಳನ್ನು ಒಂದೇ ಸೂರಿನಡಿಯಲ್ಲಿ ಈ ಆಸ್ಪತ್ರೆ ಒದಗಿಸುತ್ತಿದೆ. ಆರ್.ಎಫ್.ಐ.ಡಿ. ಸಹಿತ ರೋಗಿಯ ಗುರುತು ಮತ್ತು ಅತ್ಯಾಧುನಿಕ 'ಫರ್ಟಿಲಿಟಿ ಜೆನೆಟಿಕ್ಸ್' ಒಳಗೊಂಡ ಸುರಕ್ಷಿತ ಬಂಜೆತನ ನಿವಾರಣೆ ಕ್ರಮಗಳನ್ನು ಈ ಆಸ್ಪತ್ರೆ ಅನುಸರಿಸುತ್ತಿದೆ.

50 ವರ್ಷಗಳ ಸುದೀರ್ಘ ಅನುಭವ ಮತ್ತು ವಿಶ್ವದರ್ಜೆಯ ಸೌಲಭ್ಯದೊಂದಿಗೆ ಗುಣಶೀಲ ಸರ್ಜಿಕಲ್ & ಮ್ಯಾಟರ್ನಿಟಿ ಹಾಸ್ಪಿಟಲ್ ಭವಿಷ್ಯದ ಎಲ್ಲಾ ಸವಾಲುಗಳನ್ನು ಎದುರಿಸಲು ಸಜ್ಜಾಗಿದೆ.

ಗುಣಶೀಲ ಪರಂಪರೆ ಮುಂದುವರೆಯುತ್ತಿದೆ....

GUNASHEELA Surgical & Maternity Hospital
DELIVERING HAPPINESS
Since 1975
ESTD. 1975
www.gunasheela.in | 1800 425 0524
Basavanagudi, Koramangala and Ballari

ಹೂಡಿಕೆಯ ಹೆಸರಿನಲ್ಲಿ ಹೆಚ್ಚುತ್ತಿವೆ ಸೈಬರ್ ವಂಚನೆ ಪ್ರಕರಣಗಳು • ಸಿಐಡಿ ಅಪರಾಧ ವಿಭಾಗಕ್ಕೆ ಪ್ರಕರಣ ವರ್ಗಾವಣೆ

ದುಪ್ಪಟ್ಟು ಗಳಿಕೆ ಆಸೆ: ಕೊನೆಯಲ್ಲಿ ನಿರಾಸೆ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ಅಪರಾಧ ಪ್ರಕರಣಗಳ ಕುರಿತು ಪೊಲೀಸರು ಜಾಗೃತಿ ಮೂಡಿಸುತ್ತಿದ್ದರೂ ಪ್ರಕರಣಗಳ ಸಂಖ್ಯೆ ಇಳಿಕೆ ಆಗುತ್ತಿಲ್ಲ. ಇತ್ತೀಚೆಗೆ ಹೂಡಿಕೆಗೆ ಸಂಬಂಧಿಸಿದಂತೆ ನಡೆದಿರುವ ವಂಚನೆ ಪ್ರಕರಣಗಳೇ ಸೈಬರ್ ಠಾಣೆಗಳಲ್ಲಿ ಹೆಚ್ಚು ದಾಖಲಾಗುತ್ತಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಸಕ್ರಿಯವಾದವರಿಗೆ ಸೈಬರ್ ವಂಚಕರು ಗಾಳ ಹಾಕಿ, ಅವರಲ್ಲಿ ನಂಬಿಕೆ ಹುಟ್ಟಿಸಿ ಹಣ ದೋಚುತ್ತಿದ್ದಾರೆ.

ಹೊಸಕೆರೆಹಳ್ಳಿಯ ರಂಜಿತ್ ಎಂಬ ವ್ಯಕ್ತಿಗೆ ಆಮಿಷವೊಡ್ಡಿ ₹5 ಕೋಟಿ ದೋಚಿದ್ದಾರೆ. ಅಲ್ಲದೇ ಬ್ಯಾಟರಾಯನಪುರ ರೆಡ್ಡಿ ಲೇಔಟ್‌ನಲ್ಲಿ ನೆಲಸಿರುವ ಉಪನ್ಯಾಸಕಿಗೂ ಮೋಸ ಮಾಡಿದ್ದಾರೆ. ಅವರಿಬ್ಬರೂ ಈಗ ಸೈಬರ್ ಅಪರಾಧ ಠಾಣೆಯ ಮೆಟ್ಟಿಲೇರಿದ್ದಾರೆ.

₹5 ಕೋಟಿಗಿಂತ ಹೆಚ್ಚಿನ ವಂಚನೆ ನಡೆದಿದ್ದರೆ ಆ ಪ್ರಕರಣಗಳನ್ನು ಸಿಐಡಿಗೆ ವರ್ಗಾವಣೆ ಮಾಡಲಾಗುತ್ತಿದೆ. ರಂಜಿತ್ ಅವರ ಪ್ರಕರಣವನ್ನೂ ಸಿಐಡಿಯ ಸೈಬರ್ ಅಪರಾಧ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆ-2000 ಹಾಗೂ ಭಾರತೀಯ ನ್ಯಾಯ ಸಂಹಿತೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೃತಕ ಬುದ್ಧಿಮತ್ತೆಯ(ಎ.ಐ) ಮಿಮಿಕ್ರಿ, ಒಎಲ್‌ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್(ಒಟಿಪಿ), ಹಾಗೂ ವಿಶೇಷ ಕೊಡುಗೆ ನೀಡುವುದಾಗಿ ಹೇಳಿ ಇದುವರೆಗೂ ವಂಚನೆ ನಡೆಸುತ್ತಿದ್ದರು. ಈ ರೀತಿಯ ವಂಚನೆ ನಡೆಸುವುದನ್ನು ಕಡಿಮೆ ಮಾಡಿರುವ ಕಳ್ಳರು, ಹೂಡಿಕೆ ಹೆಸರಿನಲ್ಲಿ ಹೆಚ್ಚು ಹೆಚ್ಚು ಹಣ ದೋಚಲು ಆರಂಭಿಸಿದ್ದಾರೆ. ಜನರೂ ದುಪ್ಪಟ್ಟು ಹಣ ಸಿಗುವ ಆಸೆಯಿಂದ ಹೂಡಿಕೆಯತ್ತ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಸೈಬರ್ ವಂಚಕರು ಮೋಸ ಮಾಡುತ್ತಿದ್ದಾರೆ.

‘ಸಿಐಡಿ ಸೈಬರ್ ಠಾಣೆ ಸೇರಿದಂತೆ ನಾಲ್ಕು ವಿಭಾಗಗಳಲ್ಲೂ ಪ್ರತ್ಯೇಕ ವಿಶೇಷ ಸೈಬರ್ ಅಪರಾಧ ಠಾಣೆಗಳಿವೆ. ಕಡಿಮೆ ಮೊತ್ತದ ವಂಚನೆ ನಡೆದಿದ್ದರೆ ಕಾನೂನು ಸುವ್ಯವಸ್ಥೆ ಠಾಣೆಗಳಲ್ಲೂ ಪ್ರಕರಣ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಒಂದೂವರೆ ತಿಂಗಳಿಂದ ಹೂಡಿಕೆಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿವೆ’ ಎಂದು ಸೈಬರ್ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೊಸಕೆರೆಹಳ್ಳಿಯ ಹೊರವರ್ತುಲ ರಸ್ತೆಯ ನಿವಾಸಿ, ದೂರುದಾರ ರಂಜಿತ್ ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಅರ್ಹ ಹೂಡಿಕೆದಾರರ ಮಾಹಿತಿ ಕಲೆಹಾಕುತ್ತಿದ್ದರು. ಅವರಿಗೆ ಫೈನಾನ್ಸ್ ಸರ್ವೀಸ್ ವೆಬ್‌ಸೈಟ್‌ನಲ್ಲಿ ವಂಚಕರಾದ ಜಿ.ತುಶೀತ್, ಮಂಗುಕಿಯಾ, ಜುಹಿ ವಿ. ಪಾಟೀಲ್ ಹಾಗೂ ಡಿ.ಜಡೇಜಾ ಅವರ ಪರಿಚಯವಾಗಿತ್ತು. ರಂಜಿತ್ ಅವರನ್ನು ಪುಸಲಾಯಿಸಿ ‘ಸಿ–606’ ಹೆಸರಿನ ವಾಟ್ಸ್‌ಆ್ಯಪ್ ಗುಂಪೊಂದಕ್ಕೆ ಆರೋಪಿಗಳು ಸೇರ್ಪಡೆ ಮಾಡಿದ್ದರು. ಆ ಗುಂಪಿನಲ್ಲಿ ಜಡೇಜಾ ಹೆಸರಿನ ವ್ಯಕ್ತಿ, ಹೂಡಿಕೆಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತಿದ್ದ. ನಂತರ, ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದ್ದ. ₹1 ಕೋಟಿ ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ₹2 ಕೋಟಿ ನೀಡುವುದಾಗಿ ಆಮಿಷವೊಡ್ಡಿದ್ದ’ ಎಂದು ಸೈಬರ್ ಪೊಲೀಸರು ಹೇಳಿದರು.

‘ವಂಚಕನ ಮಾತು ನಂಬಿದ್ದ, ರಂಜಿತ್ ಅವರು ಡಿಸೆಂಬರ್ 28ರಿಂದ ಫೆಬ್ರುವರಿ 8ರವರೆಗೆ ತಮ್ಮ ವಿವಿಧ ಬ್ಯಾಂಕ್ ಖಾತೆಗಳಿಂದ ₹5.2 ಕೋಟಿ ವರ್ಗಾವಣೆ ಮಾಡಿದ್ದರು. ಹೂಡಿಕೆ ಮಾಡಿದ್ದ ಹಣಕ್ಕೆ ಪ್ರತಿಯಾಗಿ ₹12.93 ಕೋಟಿ ಹಣ ಕೊಡುವುದಾಗಿ ವಂಚಕ ಭರವಸೆ ನೀಡಿದ್ದ. ರಂಜಿತ್ ಅವರು ಹಣವನ್ನು ವಾಪಸ್ ಪಡೆಯಲು ಮುಂದಾದ ವೇಳೆ ಸೇವಾ ಶುಲ್ಕದ ಹೆಸರಿನಲ್ಲಿ ಹೆಚ್ಚಿನ ನೀಡುವಂತೆ ವಂಚಕ ಹೇಳಿದ್ದ. ಆಗ ಅವರಿಗೆ ವಂಚನೆಗೆ ಒಳಗಾಗಿರುವ ಅನುಮಾನ ಬಂದು ದೂರು ನೀಡಿದ್ದಾರೆ. ಹಣ ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ’ ಎಂದು ಸೈಬರ್ ಪೊಲೀಸರು ಹೇಳಿದರು.

ಸರ್ಕಾರಿ ಕಂಪನಿಯೆಂದು ನಂಬಿಸಿದ್ದರು

ಉಪನ್ಯಾಸಕಿ ಎಂ.ಸಿ.ಲಕ್ಷ್ಮಿಪ್ರಿಯಾ ಅವರಿಗೂ ಹೂಡಿಕೆ ಹೆಸರಿನಲ್ಲಿ ಸೈಬರ್ ವಂಚಕರು ₹7.76 ಲಕ್ಷ ವಂಚನೆ ಮಾಡಿದ್ದಾರೆ. ಅವರು ಪಶ್ಚಿಮ ವಿಭಾಗದ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಲಕ್ಷ್ಮಿಪ್ರಿಯಾ ಅವರ ಮೊಬೈಲ್ ಸಂಖ್ಯೆಯನ್ನು ವಾಟ್ಸ್‌ಆ್ಯಪ್ ಗುಂಪೊಂದಕ್ಕೆ ಸ್ನೇಹಾ ಅಗರ್‌ವಾಲ್ ಹೆಸರಿನ ಸೈಬರ್ ವಂಚಕಿ ಸೇರ್ಪಡೆ ಮಾಡಿದ್ದಳು. ನಂತರ, ಲಕ್ಷ್ಮಿಪ್ರಿಯಾ ಅವರಿಗೆ ಸಿದ್ಧಾರ್ಥ್ ಎಂಬ ವ್ಯಕ್ತಿ ಕರೆ ಮಾಡಿ, ‘ಎಐ ಪಾಲಿಸಿ’ ಬಗ್ಗೆ ಮಾಹಿತಿ ನೀಡಿದ್ದ. ಎನ್‌ಎಸ್‌ಇ ಕೇಂದ್ರ ಸರ್ಕಾರದ ಕಂಪನಿಯಾಗಿದ್ದು, ‘ಎಐ ಪಾಲಿಸಿ’ ಅನುಷ್ಠಾನಕ್ಕೆ ತಂದಿದೆ ಎಂದು ಮಾಹಿತಿ ನೀಡಿದ್ದ. ಹೂಡಿಕೆ ಮಾಡಿದರೆ ಕೆಲವೇ ದಿನಗಳಲ್ಲಿ ದುಪ್ಪಟ್ಟು ಹಣ ಸಿಗಲಿದೆ ಎಂದು ಆಮಿಷವೊಡ್ಡಿದ್ದ. ಆರಂಭದಲ್ಲಿ ದೂರುದಾರರು ಸ್ವಲ್ಪ ಹಣ ಹೂಡಿಕೆ ಮಾಡಿದ್ದರು. ಎಚ್‌ಇಎಂ ಆ್ಯಪ್ ಮೂಲಕ ಲಾಭದ ವಿವರ ತೋರಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಕೆಲವು ದಿನಗಳಾದ ಬಳಿಕ ಬೇರೆ ಬೇರೆ ಷೇರುಗಳಲ್ಲಿ ಹಣ ಹೂಡುವಂತೆ ವಂಚಕರು ಗಾಳ ಹಾಕಿದ್ದರು. ಲಕ್ಷ್ಮಿಪ್ರಿಯಾ ಅವರು ಜನವರಿ 24ರಿಂದ ಫೆಬ್ರುವರಿ 7ರವರೆಗೆ ಐಎಂಪಿಎಸ್, ಆರ್‌ಟಿಜಿಎಸ್ ಹಾಗೂ ನೆಫ್ಟ್ ಮೂಲಕ ₹7.76 ಲಕ್ಷವನ್ನು ವರ್ಗಾವಣೆ ಮಾಡಿದ್ದರು’ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ದೌರ್ಜನ್ಯ: ತಲೆಮರೆಸಿಕೊಂಡ ಕಿರುತೆರೆ ನಟ ಚರಿತ್ ಬಾಳಪ್ಪ

ಬೆಂಗಳೂರು: ಲೈಂಗಿಕ ದೌರ್ಜನ್ಯ ಹಾಗೂ ಬ್ಲ್ಯಾಕ್‌ಮೇಲ್ ಮಾಡಿದ ಆರೋಪದಡಿ ಕಿರುತೆರೆಯ ನಟ ಚರಿತ್ ಬಾಳಪ್ಪ ವಿರುದ್ಧ ಇನ್ನೊಂದು ಪ್ರಕರಣ ದಾಖಲಾಗಿದೆ.

‘ಅಮೃತಹಳ್ಳಿ ಠಾಣೆಗೆ ಸಂತ್ರಸ್ತೆ ದೂರು ನೀಡಿದ್ದರು. ಡಿಸೆಂಬರ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಅನ್ನಪೂರ್ಣೇಶ್ವರಿ ನಗರ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪ್ರಕರಣವನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು. ತನಿಖೆ ಆರಂಭವಾಗಿದೆ. ಪ್ರಕರಣ ದಾಖಲಾದ ಬಳಿಕ ಚರಿತ್ ಬಾಳಪ್ಪ ಅವರು ನಾಪತ್ತೆ ಆಗಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿನಿಮಾವೊಂದರ ಚಿತ್ರೀಕರಣದ ವೀಕ್ಷಣೆಗೆ ತೆರಳಿದ್ದ ವೇಳೆ, ಚರಿತ್ ಅವರ ಪರಿಚಯ ಆಗಿತ್ತು. ಮದುವೆ ಆಗುವುದಾಗಿ ಹೇಳಿ ಲೈಂಗಿಕವಾಗಿ ನನ್ನನ್ನು ಬಳಸಿಕೊಂಡಿದ್ದಾರೆ. ನಂತರ, ಬೇರೆ ಯುವತಿಯನ್ನು ಮದುವೆ ಆಗಿದ್ದಾರೆ. ನಮ್ಮಿಬ್ಬರ ಖಾಸಗಿ ಕ್ಷಣದ ಫೋಟೊಗಳನ್ನು ಇಟ್ಟುಕೊಂಡಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಡುವುದಾಗಿ ಈಗ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದು ಯುವತಿ ದೂರಿದ್ದಾರೆ.

‘ಮನೆ ಹಾಗೂ ಕೆಲಸದ ಸ್ಥಳಕ್ಕೆ ಬಂದು ಕಿರುಕುಳ ನೀಡಿದ್ದಾರೆ. ಅಲ್ಲದೇ ಬೆಲೆ ಸಾಮಗ್ರಿ ಹಾಗೂ ರೇಷ್ಮೆ ಸೀರೆಗಳನ್ನು ತೆಗೆದುಕೊಂಡು ಹೋಗಿದ್ದಾರೆ’ ಎಂದು ಸಂತ್ರಸ್ತೆ ಆಪಾದಿಸಿದ್ದಾರೆ.

ಮಂಗಳೂರು ಮೂಲದ ಚರಿತ್ ನಗರದಲ್ಲಿ ನೆಲಸಿದ್ದರು. ಕನ್ನಡದ ‘ಮುದ್ದುಲಕ್ಷ್ಮಿ’ ಮತ್ತು ತೆಲುಗಿನ ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದರು. ಚರಿತ್ ಬಾಳಪ್ಪ ವಿರುದ್ಧ ಲೈಂಗಿಕ ಕಿರುಕುಳ ಹಾಗೂ ಹಲ್ಲೆಗೆ ಯತ್ನಿಸಿದ ಆರೋಪದ ಅಡಿ ಡಿಸೆಂಬರ್‌ನಲ್ಲಿ ರಾಜರಾಜೇಶ್ವರಿ ನಗರ ಠಾಣೆಯಲ್ಲೂ ಎಫ್‌ಐಆರ್ ದಾಖಲಾಗಿತ್ತು.

ಯೂಟ್ಯೂಬ್ ಚಾನೆಲ್ ಮಾಲೀಕನ ಮೇಲೆ ಮಾರಕಾಸ್ತ್ರದಿಂದ ಹಲ್ಲೆ

ಮಂಡ್ಯ: ಇಲ್ಲಿನ ನೆಹರು ನಗರ ಬಡಾವಣೆಯಲ್ಲಿ ‘ಒನ್ ಇಂಡಿಯಾ’ ಯೂಟ್ಯೂಬ್ ಚಾನೆಲ್ ಮಾಲೀಕ, ವರದಿಗಾರ ಜೈಕುಮಾರ್ ಅಲಿಯಾಸ್ ನಾರಾಯಣಮೂರ್ತಿ ಎಂಬುವರ ಮೇಲೆ ಗುಂಪೊಂದು ಮಾರಕಾಸ್ತ್ರಗಳಿಂದ ಶನಿವಾರ ರಾತ್ರಿ ಹಲ್ಲೆ ನಡೆಸಿದೆ.

ರಾತ್ರಿ 11 ಗಂಟೆ ಸುಮಾರಿಗೆ ಮನೆಗೆ ಬಂದು ಬೈಕ್ ನಿಲ್ಲಿಸಿ ಗೇಟ್ ಹಾಕಲು ಮುಂದಾದಾಗ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಜೈಕುಮಾರ್ ಅವರ ತಲೆ ಮತ್ತು ಕೈಗೆ ಮಾರಕಾಸ್ತ್ರದಿಂದ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಜೋರಾಗಿ ಕೂಗಿಕೊಂಡಿದ್ದರಿಂದ ಮನೆಯಲ್ಲಿದ್ದ ಪತ್ನಿ ಹಾಗೂ ಅಕ್ಕಪಕ್ಕದ ನಿವಾಸಿಗಳು ಬರುತ್ತಿದ್ದಂತೆ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಜೈಕುಮಾರ್‌ಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲಿಸಲಾಗಿದೆ.

ಹಾಲ್‌ಮಾರ್ಕ್ ಹಾಕಲು ನೀಡಿದ್ದ ಚಿನ್ನಾಭರಣ ಕದ್ದಿದ್ದ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲ್‌ಮಾರ್ಕ್ ಹಾಕಲು ನೀಡಿದ್ದ ಚಿನ್ನಾಭರಣ ಕದ್ದು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನದ ಮಹಬೀರ್ ಬುರ್ಜರ್ ಹಾಗೂ ಮಣೀಶ್ ಪ್ರಜಾಪತ್ ಬಂಧಿತರು.

ಕಬ್ಬನ್‌ಪೇಟೆಯ ಹಾಲ್‌ಮಾರ್ಕ್ ಸೆಂಟರ್‌ನಲ್ಲಿ ಆರೋಪಿಗಳು ಕೆಲಸ ಮಾಡುತ್ತಿದ್ದರು. ಹಾಲ್‌ಮಾರ್ಕ್ ಹಾಕಿಸಲು ವಿವಿಧ ಅಂಗಡಿ ಮಾಲೀಕರು ಈ ಸೆಂಟರ್‌ಗೆ ಚಿನ್ನಾಭರಣ ನೀಡಿದ್ದರು. ಆ ಮಳಿಗೆಯಲ್ಲಿದ್ದ ಚಿನ್ನಾಭರಣವನ್ನು ಆರೋಪಿಗಳು ಕಳ್ಳತನ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಮಹಬೀರ್

ಮಣೀಶ್

‘ಎರಡು ತಿಂಗಳ ಅವಧಿಯಲ್ಲಿ ಹಂತ ಹಂತವಾಗಿ ಆರೋಪಿಗಳು ಚಿನ್ನವನ್ನು ಕಳ್ಳತನ ಮಾಡಿದ್ದರು. ರಾಜಸ್ಥಾನಕ್ಕೆ ತೆರಳಿ ಕದ್ದ ಚಿನ್ನವನ್ನು ಮಾರಾಟ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾರಾಟ ಮಾಡಿರುವ ಚಿನ್ನವನ್ನು ವಶಕ್ಕೆ ಪಡೆಯಲು ಕ್ರಮ ಕೈಗೊಂಡಿದ್ದೇವೆ. ಎರಡು ಕೆ.ಜಿ.ಗೂ ಹೆಚ್ಚು ಚಿನ್ನಾಭರಣ ಕಳ್ಳತನವಾಗಿರುವ ಮಾಹಿತಿ ಇದೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳ ವಿರುದ್ಧ ಹಾಲ್‌ಮಾರ್ಕ್ ಸೆಂಟರ್‌ನ ಮಾಲೀಕರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು.

ಸಿಸಿಬಿಯ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಅಳಿಸಿದ ದತ್ತಾಂಶ: ₹150 ಕೋಟಿ ನಷ್ಟ

• ಪ್ರಜ್ವಲ್ ಡಿಸೋಜ

ಬೆಂಗಳೂರು: ದತ್ತಾಂಶ ಅಳಿಸಿ ಹಾಕಿದ್ದರಿಂದ ₹150 ಕೋಟಿಯಷ್ಟು ನಷ್ಟವಾಗಿದೆ ಎಂದು ಆರೋಪಿಸಿ ಆದರ್ಶ್ ಡೆಲವಪರ್ಸ್ ನೀಡಿರುವ ದೂರನ್ನು ಆಧರಿಸಿ ಅಮೆಜಾನ್ ವೆಬ್ ಸರ್ವೀಸ್ (ಎಡಬ್ಲ್ಯುಎಸ್) ವಿರುದ್ಧ ಸಿಸಿಬಿಯ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಫೆಬ್ರುವರಿ 11ರಂದು ಆದರ್ಶ್ ಡೆವಲಪರ್ಸ್‌ನ ಶ್ರೀಧರ್ ರಾಜೇಂದ್ರನ್ ಅವರು ನೀಡಿರುವ ದೂರು ಆಧರಿಸಿ, ಅಮೆಜಾನ್ ವೆಬ್ ಸರ್ವೀಸ್, ರೆಡಿಂಗ್ಟನ್ ಗ್ರೂಪ್ ಸೇರಿದಂತೆ ಮೂರು ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘36 ವರ್ಷಗಳಿಂದ ಆದರ್ಶ್ ಡೆವಲಪರ್ಸ್ ಕಂಪನಿಯು ನಗರದಲ್ಲಿ ವಸತಿ ಕಟ್ಟಡಗಳ ನಿರ್ಮಾಣ ಹಾಗೂ ಸೌಲಭ್ಯ ನಿರ್ಮಾಣದ ಕೆಲಸದಲ್ಲಿ ತೊಡಗಿಕೊಂಡಿದೆ. ಕಂಪನಿಯ ಹಣಕಾಸು ವ್ಯವಹಾರ ಹಾಗೂ ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ಅಮೆಜಾನ್ ಕ್ಲೌಡ್ ಸರ್ವೀಸ್‌ನಲ್ಲಿ ಸಂಗ್ರಹಿಸಿ ಇಡಲಾಗಿತ್ತು. ಅದು ಅಳಿಸಿಹೋಗಿದ್ದು, ಕಂಪನಿಗೆ ನಷ್ಟವಾಗಿದೆ’ ಎಂದು ರಾಜೇಂದ್ರನ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘2023ರ ಮೇನಲ್ಲಿ ಅಮೆಜಾನ್ ಕ್ಲೌಡ್ ಸರ್ವೀಸ್‌ನ ವಾಣಿಜ್ಯ ವಿಭಾಗದ ಪ್ರತಿನಿಧಿಯೊಬ್ಬರು ಕಂಪನಿಯನ್ನು ಸಂಪರ್ಕಿಸಿ, ಕ್ಲೌಡ್ ಸರ್ವೀಸ್‌ನಲ್ಲಿ ದತ್ತಾಂಶ ಇಡುವಂತೆ ಕೋರಿದ್ದರು.

ಅಪರಾಧ ಸುದ್ದಿ

ಸೈಬರ್ ದಾಳಿ, ವಿಧ್ವಂಸಕ ಕೃತ್ಯ, ಮಿಂಚು–ಗುಡುಗು, ಭೂಕಂಪ ಹಾಗೂ ಚಂಡಮಾರುತದಂತಹ ಸಂದರ್ಭದಲ್ಲೂ ದತ್ತಾಂಶವನ್ನು ಮರಳಿ ಪಡೆಯಬಹುದು ಎಂಬುದಾಗಿ ಭರವಸೆ ನೀಡಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಅಮೆಜಾನ್ ವೆಬ್ ಸರ್ವೀಸ್ ಜತೆಗೆ 2027ರ ನವೆಂಬರ್‌ವರೆಗೆ ಒಪ್ಪಂದ ಮಾಡಿಕೊಂಡು, ದತ್ತಾಂಶವನ್ನು ಸುರಕ್ಷಿತವಾಗಿ ಇಡುವಂತೆ ಆದೇಶ ನೀಡಲಾಗಿತ್ತು. ಜಿಎಸ್‌ಟಿ ಸಹಿತ ₹88.59 ಲಕ್ಷ ಪಾವತಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು’ ಎಂದು ದೂರಿನಲ್ಲಿ ವಿವರಿಸಿದ್ದಾರೆ.

‘ದತ್ತಾಂಶ ಅಳಿಸಿಹೋಗಿದೆ ಎಂಬುದು ಜನವರಿ 9ರಂದು ಗೊತ್ತಾಗಿದೆ. ಕಂಪನಿಯ ದತ್ತಾಂಶ ಸಂಗ್ರಹಿಸಿದ್ದ ಮೂಲ ಸ್ಥಳದಲ್ಲೇ ಅಳಿಸಿ ಹಾಕಿದ್ದಾರೆ. ಅಲ್ಲದೇ ಖಾತೆಯನ್ನೂ ಡಿಲೀಟ್ ಮಾಡಿದ್ದಾರೆ. ಇದರಿಂದ ಕಂಪನಿಯ ಆರು ವರ್ಷದ ವಹಿವಾಟಿನ ಮಾಹಿತಿ, ಗ್ರಾಹಕರ ವಿವರ ಅಳಿಸಿ ಹೋಗಿದೆ. ಜ.9ರಿಂದ ಪ್ರತಿದಿನ ₹5 ಕೋಟಿಯಷ್ಟು ನಷ್ಟವಾಗಿದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ದತ್ತಾಂಶ ಮರು ಸಂಗ್ರಹಿಸಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದ್ದರೂ ಯಶಸ್ಸು ಸಿಕ್ಕಿಲ್ಲ ಎಂಬುದಾಗಿ ಅಮೆಜಾನ್ ವೆಬ್ ಸರ್ವೀಸ್‌ನ ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಅಗತ್ಯ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ರೈತರ ಮಂಡಳಿಗೆ ನಿರ್ದೇಶಕರ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ 12 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮುಂದಿನ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ಶನಿವಾರ ನಿಗದಿಯಾಗಿದ್ದ ಚುನಾವಣಾ ಪ್ರಕ್ರಿಯೆಯಲ್ಲಿ ಸ್ಪರ್ಧಿಸಿದ್ದ ಎಲ್ಲ ಅಭ್ಯರ್ಥಿಗಳು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಎಂ.ಪಿ.ಈಶ್ವರಾಚಾರಿ, ಎ.ತಿಮ್ಮರಾಯಗೌಡ, ಕೆ.ಆರ್.ಪುಟ್ಟರಾಜು, ಮಂಜುನಾಥ ಎಂ., ರಾಮಚಂದ್ರ ರೆಡ್ಡಿ ಎಸ್.ಎನ್., ಎನ್.ಶಿವಕುಮಾರ್(ಸಾಮಾನ್ಯ ಕ್ಷೇತ್ರ), ಮುನಿಯಪ್ಪ ಎನ್.ಕೂರ್ಲಪ್ಪ (ಬಿಸಿಎಂ-ಎ), ವೈ.ಕೆ.ಮುರಾರಿರಾಮು(ಬಿಸಿಎಂ-ಬಿ), ಜಿ.ಎಸ್.ಪುಷ್ಪಲತಾ, ವಾಣಿಶ್ರೀ ವಿಶ್ವನಾಥ್(ಮಹಿಳಾ ಮೀಸಲು), ಚಂದ್ರು.ಎ(ಪರಿಶಿಷ್ಟ ಜಾತಿ), ಅಮರಾವತಿ(ಪರಿಶಿಷ್ಟ ಪಂಗಡ) ಆಯ್ಕೆಯಾಗಿದ್ದಾರೆ.

ಸಿಂಗಹಳ್ಳಿ-ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ: ಸಿಂಗಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕಾಗಿ ನಡೆದಿದ್ದ ಚುನಾವಣೆಯಲ್ಲಿ 11 ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಸಾಲಗಾರರ ಕ್ಷೇತ್ರದಿಂದ-ಆರ್.ಗೋವಿಂದಪ್ಪ, ಬಿ.ಎಂ.ಜಗನ್ನಾಥ, ಬಿ.ಕೆ.ನಾರಾಯಣಸ್ವಾಮಿ, ಮುರಳಿ.ಎನ್, ಆರ್.ಹನುಮಂತಪ್ಪ (ಸಾಮಾನ್ಯ), ಸುರೇಶ್.ಕೆ(ಬಿಸಿಎಂ-ಎ), ಜಿ.ಪ್ರಶಾಂತ್ (ಬಿಸಿಎಂ-ಬಿ), ಅನಿತಾ ಕೆ., ಬಿ.ವಿ. ಭಾಗ್ಯಲಕ್ಷ್ಮಿ(ಮಹಿಳಾ ಮೀಸಲು), ಜಿ. ಪ್ರಕಾಶ್(ಪರಿಶಿಷ್ಟ ಜಾತಿ), ಮುನಿಯಪ್ಪ(ಕಾಕಣ್ಣ)(ಸಾಲಗಾರರಲ್ಲದ ಕ್ಷೇತ್ರ) ಜಯಗಳಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್.ಜಗದೀಶ್, ಸದಸ್ಯ ನವೀನ್.ಎನ್, ಬಿಜೆಪಿ ಮುಖಂಡರಾದ ಹನುಮಂತೇಗೌಡ, ರಾಜಶೇಖರ್, ಸುಬ್ರಮಣಿ, ಸಿ.ಎನ್.ನಾರಾಯಣಸ್ವಾಮಿ, ತಿಮ್ಮೇಗೌಡ ಮತ್ತಿತರರು ನೂತನ ನಿರ್ದೇಶಕರನ್ನು ಅಭಿನಂದಿಸಿದರು.

ಬಿವಿಎಸ್ ರಜತ ಮಹೋತ್ಸವದಲ್ಲಿ ಅರವಿಂದ ಮಾಲಗತ್ತಿ ಸಲಹೆ

ಅಂಬೇಡ್ಕರ್ ಚಿಂತನೆಯಲ್ಲಿ ಮೀಯಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈಗ ಗಂಗೆಯಲ್ಲಿ ಮೀಯುವುದು ಹೆಚ್ಚಾಗುತ್ತಿದೆ. ನೀವು ಅಂಬೇಡ್ಕರ್ ಚಿಂತನೆಯ ಗಂಗೆಯಲ್ಲಿ ಮೀಯಿರಿ. ವೈಚಾರಿಕ ಗಂಗೆ ಎಂದಿಗೂ ಕಲುಷಿತವಾಗುವುದಿಲ್ಲ’ ಎಂದು ಚಿಂತಕ ಅರವಿಂದ ಮಾಲಗತ್ತಿ ತಿಳಿಸಿದರು.

ಭಾರತೀಯ ವಿದ್ಯಾರ್ಥಿ ಸಂಘ ಭಾನುವಾರ ಹಮ್ಮಿಕೊಂಡಿದ್ದ ಬಿವಿಎಸ್ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಮಮಂದಿರ ಉದ್ಘಾಟನೆಯಾದಾಗ ಭಾರತಕ್ಕೆ ಸ್ವಾತಂತ್ರ್ಯ ಬಂತು ಎಂದು ಕೆಲವರು ಹೇಳುತ್ತಾರೆ. ಅಂಬೇಡ್ಕರ್ ಬದುಕು ಮತ್ತು ಬರಹಗಳ ಸಂಪುಟವನ್ನು ಮಹಾರಾಷ್ಟ್ರ ಸರ್ಕಾರ ಮೊದಲ ಬಾರಿಗೆ ಪ್ರಕಟಿಸಿದಾಗ ಭಾರತ ಬೆಳಗಿತು ಎಂದು ಹೇಳಿದರು.

1970ರ ದಶಕದಲ್ಲಿ ಡಿಎಸ್‌ಎಸ್ ಮುಕ್ತ ವಿಶ್ವವಿದ್ಯಾಲಯದಂತೆ ಕೆಲಸ ಮಾಡಿತ್ತು. ಆಗ ರಾಜ್ಯದಲ್ಲಿದ್ದ 37 ವಿಶ್ವವಿದ್ಯಾಲಯಗಳು ಬೋಧನೆ ಮಾಡಲು ಆಗದ್ದನ್ನು ಡಿಎಸ್‌ಎಸ್ ಕಲಿಸಿಕೊಟ್ಟಿತ್ತು. 2000ನೇ ಇಸವಿಯಲ್ಲಿ ಹುಟ್ಟಿಕೊಂಡ ಬಿವಿಎಸ್ ಚಿಂತನೆಯ ಪಥವನ್ನೇ ಬದಲಾಯಿಸಿಬಿಟ್ಟಿತು ಎಂದು ಎಂದು ವಿಶ್ಲೇಷಿಸಿದರು.

ಕಾರ್ಲ್‌ಮಾರ್ಕ್ಸ್, ಮಹಾತ್ಮ ಗಾಂಧೀಜಿ, ರಾಮಮನೋಹರ ಲೋಹಿಯಾ ಮತ್ತು ಅಂಬೇಡ್ಕರ್ ಈ ನಾಲ್ವರ ಚಿಂತನೆಗಳನ್ನು ಡಿಎಸ್‌ಎಸ್ ರಥದ ನಾಲ್ಕು ಗಾಲಿಗಳಂತೆ ಇಟ್ಟುಕೊಂಡಿತ್ತು. ಬಿವಿಎಸ್ ಈ ಕ್ರಮವನ್ನೇ ಒಡೆದುಹಾಕಿತು. ಅಂಬೇಡ್ಕರ್ ಅವರನ್ನೇ ಪ್ರಧಾನವಾಗಿ ಇಟ್ಟುಕೊಂಡು ಬುದ್ಧ, ಬಸವಣ್ಣ, ಫುಲೆ ದಂಪತಿ, ಶಾಹು ಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್ ಇನ್ನಿತರ ಸಮಾಜ ಸುಧಾರಕರು ಮುನ್ನೆಲೆಗೆ ಬಂದರು ಎಂದು ತಿಳಿಸಿದರು.

ಸಿದ್ಧಾಂತ ಹೇಳುವವರನ್ನು ಬದಿಗೆ ಸರಿಸಿ, ಸಿದ್ಧಾಂತಗಳನ್ನು ಪ್ರಯೋಗವಾಗಿ ಮಾಡಿಕೊಂಡು ಸುಧಾರಣೆಗೆ ಇಳಿದವರನ್ನು ಮುಂದಿಡುವ ಬದಲಾವಣೆಯನ್ನು ಬಿವಿಎಸ್ ಮಾಡಿತ್ತು. ದಲಿತೇತರರರನ್ನು ಪ್ರಶ್ನಿಸುವ ಜೊತೆಗೆ ದಲಿತ ನಾಯಕರನ್ನೂ ಪ್ರಶ್ನಿಸುವ ಕಾರ್ಯ ಆರಂಭಿಸಿತ್ತು. ದಲಿತ ಸಂಘರ್ಷ ಸಮಿತಿಯ ವೇಗದಲ್ಲಿ ಬಿವಿಎಸ್ ಬೆಳೆಯದೇ ಹೋಗಿರುವುದು ಮಾತ್ರ ಬೇಸರದ ಸಂಗತಿ ಎಂದರು.

ಬಿವಿಎಸ್ ರಜತ ಮಹೋತ್ಸವದ ಕಾರ್ಯಕ್ರಮದಲ್ಲಿ ಜ್ಯೋತಿ ಬಾಫುಲೆ, ಸಾವಿತ್ರಿಬಾಯಿ ಫುಲೆ, ರಮಾಬಾಯಿ ಮತ್ತು ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು —ಪ್ರಜಾವಾಣಿ ಚಿತ್ರ

ಆದಾಯ ತೆರಿಗೆ ಆಯುಕ್ತ ಎಂ.ಎಸ್. ನೇತ್ರಪಾಲ್ ಮಾತನಾಡಿ, ‘ದಲಿತರು, ಹಿಂದುಳಿದ ವರ್ಗದವರು ಯಾವುದೇ ಹುದ್ದೆಗೆ ಹೋದ ಕೂಡಲೇ ಅವರನ್ನು ಅರ್ಹತೆ ಇಲ್ಲದೇ ಬಂದವರು ಎಂದು ಹೀಯಾಳಿಸಲಾಗುತ್ತಿದೆ. ಕೊಳೆಗೇರಿಯಲ್ಲಿ ಇದ್ದಾಗ, ‘ಡಿ’ ದರ್ಜೆ ನೌಕರರಾದಾಗ ಸಮಸ್ಯೆ ಇರುವುದಿಲ್ಲ. ‘ಎ’ ಗುಂಪಿನ ನೌಕರರಾದಾಗ ಸ್ಥಾಪಿತ ಹಿತಾಸಕ್ತಿಗಳಿಗೆ ನೋವು ತಡೆದುಕೊಳ್ಳಲಾಗುವುದಿಲ್ಲ. ಅಪಪ್ರಚಾರ ಶುರು ಮಾಡುತ್ತಾರೆ’ ಎಂದು ಹೇಳಿದರು.

ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ನೋಡಿದರೆ ಸಾಮಾನ್ಯ ವರ್ಗದಿಂದ ಬಂದವರಿಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಡಗಳ ಮೀಸಲಾತಿ ವರ್ಗದಲ್ಲಿ ಆಯ್ಕೆಯಾದವರಿಗೂ ಶೇ 2ರಷ್ಟು ಅಂಕವಷ್ಟೇ ವ್ಯತ್ಯಾಸ ಇದೆ. ಆದರೆ, ಸಾಮಾನ್ಯ ವರ್ಗದವರು ಶೇ 80ಕ್ಕೂ ಅಧಿಕ ಅಂಕ ತೆಗೆದರೂ ಆಯ್ಕೆಯಾಗುವುದಿಲ್ಲ. ಶೇ 40 ಅಂಕ ಪಡೆದವರು ಮೀಸಲಾತಿ ಮೂಲಕ ಆಯ್ಕೆಯಾಗುತ್ತಿದ್ದಾರೆ ಎಂಬ ಸಂಕಥನವನ್ನು ಹರಿಯಬಿಡುತ್ತಿದ್ದಾರೆ ಎಂದು ಎಚ್ಚರಿಸಿದರು.

ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಶಿವಕುಮಾರ ಅಧ್ಯಕ್ಷತೆ ವಹಿಸಿದ್ದರು. ಟಿ. ನರಸೀಪುರ ನಳಂದ ಬುದ್ಧ ವಿಹಾರದ ಭಂತೆ ಬೋಧಿರತ್ನ ಸಾನ್ನಿಧ್ಯ ವಹಿಸಿದ್ದರು. ‘ಪರಿವರ್ತನೆಯ ಸಾರಥಿ ಬಿವಿಎಸ್’, ‘ಪ್ರಬುದ್ಧ ಭಾರತ ತುಡಿತ’, ‘ಸಂವಿಧಾನದ ಅರಿವು’, ‘ಮೈತ್ರಿಯೆಡೆಗೆ’ ಕೃತಿಗಳನ್ನು ಡಿಎಸ್‌ಎಸ್ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಬಿಡುಗಡೆ ಮಾಡಿದರು.

ಲೇಖಕಿ ಅತ್ರಾಡಿ ಅಮೃತ ಡೀಕಯ್ಯ, ಲೇಖಕ ಯೋಗೇಶ್ ಮಾಸ್ಟರ್, ಬಿವಿಎಸ್ ಅಧ್ಯಕ್ಷ ಹರಿರಾಂ ಎ., ನಾಗ ಮಾರ್ಷಲ್ ಆರ್ಟ್ಸ್‌ನ ಸೋಸಲೆ ಸಿದ್ಧರಾಜು, ಬಿವಿಎಸ್ ರಾಜ್ಯ ಸಂಯೋಜಕ ಶ್ರೀನಿವಾಸ್ ಜಿ. ಉಪಸ್ಥಿತರಿದ್ದರು. ಕೊಕ್ಕೊ ಕ್ರೀಡೆಯಲ್ಲಿ ಸಾಧನೆ ಮಾಡಿರುವ ಚೈತ್ರಾ ಬಿ., ಗೌತಮ್ ಎಂ.ಕೆ. ಅವರನ್ನು ಸನ್ಮಾನಿಸಲಾಯಿತು. ವಿವಿಧ ಸಾಧಕರನ್ನು ಗೌರವಿಸಲಾಯಿತು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ದೂಳು ತಿನ್ನುತ್ತಿರುವ ಆಂಬುಲೆನ್ಸ್

ದೂಳು ತಿನ್ನುತ್ತಿರುವ ಆಂಬುಲೆನ್ಸ್

ತುರ್ತು ಸಂದರ್ಭದಲ್ಲಿ ಜನರ ಬಳಕೆಗೆ ಸಿಗಬೇಕಾದ ಆಂಬುಲೆನ್ಸ್ ಎನ್.ಆರ್. ಕಾಲೊನಿ ಹೆರಿಗೆ ಆಸ್ಪತ್ರೆ ಎದುರು ಎರಡು ಮೂರು ತಿಂಗಳಿಂದ ನಿಂತಲ್ಲೇ ನಿಂತಿದೆ. ದೂಳು, ಮಣ್ಣು ಹಿಡಿದು ತುಕ್ಕು ಹಿಡಿಯುವಂತಾಗಿದೆ. ರೋಗಿಗಳಿಗೆ ಉಪಕಾರ ಆಗಬೇಕಾದ ಈ ಆಂಬುಲೆನ್ಸ್ ನಿರುಪಯುಕ್ತ ಆಗಿ ನಿಂತಿರುವುದು ಆಡಳಿತ ಯಂತ್ರದ ವಿಫಲತೆಗೆ ಸಾಕ್ಷಿ.

ಶಿವರಾಜ್, ಎನ್.ಆರ್. ಕಾಲೊನಿ ನಿವಾಸಿ

ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ

ಬಿಬಿಎಂಪಿ ಕೇಂದ್ರ ಕಚೇರಿಯ ಮುಂದೆಯೇ ಪಾದಚಾರಿ ಮಾರ್ಗ ಕುಸಿದಿದ್ದು, ಕಸ ಹಾಕುವ ತಾಣವಾಗಿದೆ

ಬಿಬಿಎಂಪಿ ಕೇಂದ್ರ ಕಚೇರಿಯ ಪೂರ್ವಾಭಿಮುಖದ ಗೇಟ್ ಮುಂಭಾಗದಲ್ಲಿನ, ದೇವಾಂಗ ಸಂಘದ ಕಡೆಗೆ ಹೋಗುವ ಮುಖ್ಯ ವೃತ್ತದ ಪಾದಚಾರಿ ಮಾರ್ಗ ಸಂಪೂರ್ಣ ಹದಗೆಟ್ಟಿದೆ. ಅಲ್ಲೇ ತ್ಯಾಜ್ಯ ಸುರಿಯುತ್ತಿರುವುದರಿಂದ ಹೊಲಸುಮಯವಾಗಿದೆ. ಇದರ ಮುಂಭಾಗದಲ್ಲಿಯೇ ಸಿಂಗರಿಸಿದ ಗೋಪುರ ಮತ್ತು ಕಣ್ಣು ಕುಕ್ಕುವ ವಿದ್ಯುತ್ ಅಲಂಕಾರದಿಂದ ವಿಜೃಂಭಿಸುತ್ತಿದೆ. ಪಾಲಿಕೆ ಕೇಂದ್ರ ಕಚೇರಿಯ ಮುಂಭಾಗದಲ್ಲಿಯೇ ಇಷ್ಟೊಂದು ಅವ್ಯವಸ್ಥೆ ತಾಂಡವವಾಡುತ್ತಿದೆ. ಕೊಳೆತು ನಾರುವ ರಾಶಿ ತ್ಯಾಜ್ಯ ಮತ್ತು ಗಬ್ಬು ವಾಸನೆ ಹಾಗೂ ಕುಸಿತವಾಗಿರುವ ಪಾದಚಾರಿ ಮಾರ್ಗದ ಅವಸ್ಥೆ ಅಧಿಕಾರಿಗಳ ಕಣ್ಣಿಗೆ ಬೀಳದೆ ಇರುವುದು ವಿಪರ್ಯಾಸವೇ ಸರಿ.

ಶಿವಪ್ರಸಾದ್, ಕೆಂಪೇಗೌಡ ರಸ್ತೆ ಬಡಾವಣೆ

ವಿದ್ಯುತ್ ದೀಪ ಅಳವಡಿಸಿ

ಕತ್ತಲೆಯಲ್ಲಿರುವ ಸೋರಟ್ ಅಶ್ವಥ್ ಉದ್ಯಾನ

ಕತ್ತರಿಗುಪ್ಪೆಯ ಕಾಮಾಕ್ಯ ಚಿತ್ರಮಂದಿರದ ಬಳಿ ಇರುವ ಸೋರಟ್ ಅಶ್ವಥ್ ಉದ್ಯಾನವನದಲ್ಲಿ ಹಾವು, ಇಲಿ, ಹೆಗ್ಗಣಗಳ ಕಾಟ ಅಧಿಕವಿದೆ. ಇಲ್ಲಿ ವಿದ್ಯುದ್ದೀಪಗಳನ್ನು ಅಳವಡಿಸಿಲ್ಲ. ಇದರಿಂದ, ಸೂರ್ಯಾಸ್ತದ ನಂತರ ನಡಿಗೆ ಮಾಡುವವರಿಗೆ ಬಹಳ ಕಷ್ಟವಾಗಿದೆ. ಪಾರ್ಕ್ ಒಳಗಡೆ ಕೂಡಲೇ ವಿದ್ಯುದ್ದೀಪಗಳನ್ನು ಅಳವಡಿಸಬೇಕು.

ತಿಪ್ಪೂರು ಪುಟ್ಟೇಗೌಡ, ಬನಶಂಕರಿ

ಖಾಲಿ ನಿವೇಶನದಲ್ಲಿ ಕಸದ ರಾಶಿ

ಯಶವಂತಪುರ ವಿಧಾನಸಭಾ ಕ್ಷೇತ್ರದ ಕಲ್ಯಾಣ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಲೇಔಟ್‌ಗೆ ಹೊಂದಿಕೊಂಡಂತಿರುವ ದೊಡ್ಡಬಸ್ತಿ ಮುಖ್ಯರಸ್ತೆಯ ಖಾಲಿ ನಿವೇಶನದಲ್ಲಿ ಕಸ ತಂದು ರಾಶಿ ಹಾಕುತ್ತಿದ್ದಾರೆ. ನೊಣ, ಸೊಳ್ಳೆಗಳು ಹೆಚ್ಚಾಗಿವೆ. ಗಬ್ಬು ವಾಸನೆಯಿಂದಾಗಿ ಸುತ್ತಲಿನ ಮನೆಗಳ ನಿವಾಸಿಗಳಿಗೆ ತೀವ್ರ ತೊಂದರೆಯಾಗಿದೆ. ಪಕ್ಕದಲ್ಲಿ ಬಿಬಿಎಂಪಿ ಕಚೇರಿ ಇದ್ದರೂ ಇತ್ತ ಗಮನಹರಿಸಿಲ್ಲ.

ಹನುಮಂತೇಗೌಡ, ಕೆ.ಸಿ.ಎಚ್.ಎಸ್. ಲೇಔಟ್

ಖಾಲಿ ನಿವೇಶನದಲ್ಲಿ ರಾಶಿ ಬಿದ್ದಿರುವ ಕಸ

ಕುಸಿಯುತ್ತಿದೆ ಕಬ್ಬನ್ ಪಾರ್ಕ್ ಕಾಂಪೌಂಡ್

ನಗರದ ಪ್ರತಿಷ್ಠಿತ ಉದ್ಯಾನಗಳಲ್ಲಿ ಒಂದಾದ ಕಬ್ಬನ್ ಪಾರ್ಕ್‌ನ ಬಾಲಭವನಕ್ಕೆ ಹೊಂದಿಕೊಂಡಿರುವ ಪುಟಾಣಿ ರೈಲು ಹಳಿ ಪಕ್ಕದಲ್ಲಿನ ಬೃಹತ್ ಮರ ಒಂದು ಭಾರಿ ಗಾತ್ರವಾಗಿ ಬೆಳೆದ ಕಾರಣ ಕಾಂಪೌಂಡ್ ಮೇಲೆ ವಾಲಿದೆ. ಪರಿಣಾಮವಾಗಿ ಕಾಂಪೌಂಡ್ ಇಂದೋ, ನಾಳೆಯೊ ಉರುಳಿ ಬೀಳುವ ಸ್ಥಿತಿಗೆ ತಲುಪಿದೆ. ವಾಯುವಿಹಾರಕ್ಕೆ ಬರುವವರಿಗೂ ಅಪಾಯ ಉಂಟಾಗಲಿದೆ. ಅಪಾಯ ಉಂಟಾಗುವ ಮೊದಲು ಸಂಬಂಧಪಟ್ಟವರು ಎಚ್ಚೆತ್ತುಕೊಂಡು ಪರಿಹಾರ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ವಾಯು ವಿಹಾರಿ



ಬಿರುಕು ಬಿಟ್ಟಿರುವ ಕಬ್ಬನ್ ಪಾರ್ಕ್ ಕಾಂಪೌಂಡ್

ವಕೀಲರ ಸಂಘದ ಅಧ್ಯಕ್ಷರಾಗಿ ವಿವೇಕ್ ರೆಡ್ಡಿ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ವಿವೇಕ್ ರೆಡ್ಡಿ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಹೈಕೋರ್ಟ್ ವಕೀಲ ಎಚ್.ವಿ.ಪ್ರವೀಣ್ ಗೌಡ ಆಯ್ಕೆಯಾಗಿದ್ದಾರೆ.

ಮೆಯೊ ಹಾಲ್, ಮ್ಯಾಜಿಸ್ಟ್ರೇಟ್ ಕೋರ್ಟ್, ಸಿಟಿ ಸಿವಿಲ್ ಮತ್ತು ಹೈಕೋರ್ಟ್ ಸೇರಿದಂತೆ ನಾಲ್ಕೂ ಘಟಕಗಳ ಕಾರ್ಯಕಾರಿ ಸಮಿತಿಯ ನೂತನ ಪದಾಧಿಕಾರಿಗಳ ಆಯ್ಕೆಗೆ ಭಾನುವಾರ ಚುನಾವಣೆ ನಡೆಯಿತು. ಪೂರ್ಣ ಪ್ರಮಾಣದ ಫಲಿತಾಂಶ ಇನ್ನಷ್ಟೇ ಅಧಿಕೃತವಾಗಿ ಪ್ರಕಟವಾಗಬೇಕಿದೆ.

ವಿವೇಕ ರೆಡ್ಡಿ

ಎಚ್.ವಿ. ಪ್ರವೀಣ್ ಗೌಡ

ಸಿ.ಎಸ್.ಗಿರೀಶ್ ಕುಮಾರ್

ಶ್ವೇತಾ ರವಿಶಂಕರ್

ಒಗ್ಗಟ್ಟಿನ ಮಂತ್ರ ಜಪಿಸಿದ ಕಾಂಗ್ರೆಸ್ ನಾಯಕರು

‘ಶಾಸಕ ಎಸ್ ಆರ್ ವಿಶ್ವನಾಥ್ ಬ್ರಹ್ಮ ರಾಕ್ಷಸ’

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ‘ಯಲಹಂಕ ಕ್ಷೇತ್ರದಲ್ಲಿ 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಹಿಡಿಯಬೇಕಾದರೆ ಮುಖಂಡರು ಮತ್ತು ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಬೇಕು. ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಲು ಜನ ಸಿದ್ಧರಿದ್ದಾರೆ. ಈ ಅವಕಾಶವನ್ನು ಬಳಸಿಕೊಳ್ಳಬೇಕು’ ಎಂದು ರಾಜ್ಯಸಭಾ ಸದಸ್ಯ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ ಚಂದ್ರಶೇಖರ್ ಹೇಳಿದರು.

ಹೆಸರಘಟ್ಟದಲ್ಲಿ ಭಾನುವಾರ ನಡೆದ ‘ಜನಮಾನಸ’ ಸಮಾವೇಶದಲ್ಲಿ ಮಾತನಾಡಿದ ಅವರು, ‘ಮುಂದಿನ ದಿನಗಳಲ್ಲಿ ಯಲಹಂಕ ಕ್ಷೇತ್ರದಲ್ಲಿ ಒಬ್ಬ ಬ್ರಹ್ಮ ರಾಕ್ಷಸನ ವಧೆ ಮಾಡಬೇಕಿದೆ. ದೊಡ್ಡ ತಿಮಿಂಗಿಲವನ್ನು ಮಣಿಸಬೇಕು. ಯುದ್ಧ ಮಾಡಬೇಕೆಂದರೆ ಸೈನ್ಯ ಸದೃಢವಾಗಿರಬೇಕು. ಈ ನಿಟ್ಟಿನಲ್ಲಿ ಶಾಸಕರು ಮಾಡಿರುವ ಅವ್ಯವಹಾರ, ಅನ್ಯಾಯ, ಭೂ ಹಗರಣಗಳನ್ನು ಬಯಲು ಮಾಡಬೇಕು’ ಎಂದು ಶಾಸಕ ಎಸ್ ಆರ್ ವಿಶ್ವನಾಥ್ ವಿರುದ್ಧ ಹರಿಹಾಯ್ದರು.

ನಗಾರಿ ಬಾರಿಸುವ ಮೂಲಕ ಜನಮಾನಸ ಸಮಾವೇಶಕ್ಕೆ ಚಾಲನೆ ನೀಡಲಾಯಿತು

ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಯಾರಿಗೂ ಅಂಜದೆ, ಎದೆಗುಂದದೆ ಸ್ವಾಭಿಮಾನದಿಂದ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಈ ಭಾಗದಲ್ಲಿ ಹೊಂದಾಣಿಕೆ ರಾಜಕೀಯವನ್ನು ಇನ್ನು ಮುಂದೆ ಸಹಿಸುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಶಾಸಕರನ್ನು ಬದಲಾವಣೆ ಮಾಡಲು ಈ ಸಮಾವೇಶ ನಾಂದಿಯಾಗಲಿದೆ ಎಂದರು.

ಸಮಾವೇಶದಲ್ಲಿ ಪಕ್ಷದ ವಿವಿಧ ವಿಭಾಗಗಳಿಗೆ ನೇಮಕಗೊಂಡ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಲಾಯಿತು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಹಲವು ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಯಲಹಂಕ ಕಾಂಗ್ರೆಸ್ ಮುಖಂಡ ಬಿ.ಕೇಶವ ರಾಜಣ್ಣ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಬ್ದುಲ್ ವಾಜಿದ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಮಂಜುನಾಥ್ ಅದ್ದೆ, ಶ್ರೀನಿವಾಸ್, ಎಚ್. ಮೂರ್ತಿ , ಯಲಹಂಕ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷೆ ಪ್ರೇಮಲತಾ ಬಸವರಾಜು, ವೀಣಾ ರಮೇಶ್, ಮುಖಂಡರಾದ ಕೇಶವಮೂರ್ತಿ, ಲಕ್ಷ್ಮಣಮೂರ್ತಿ ಮತ್ತಿತರರಿದ್ದರು.

ಮಾಂಬಾಡಿ ಸುಬ್ರಹ್ಮಣ್ಯ ಭಟ್‌ಗೆ ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಖಾದರ್ ಹೇಳಿಕೆ

‘ಯಕ್ಷಗಾನ– ಕಂಬಳ ಕರಾವಳಿಯ ಕಣ್ಣುಗಳು’

ಪ್ರಜಾವಾಣಿ ವಾರ್ತೆ

ಉಡುಪಿ: ಯಕ್ಷಗಾನ ಮತ್ತು ಕಂಬಳವು ಕರಾವಳಿಯ ಎರಡು ಕಣ್ಣುಗಳಿದ್ದಂತೆ. ಅವುಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸ್ಪೀಕರ್ ಯು.ಟಿ. ಖಾದರ್ ಭಾನುವಾರ ಹೇಳಿದರು.

ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಯಕ್ಷಗಾನ ಕಲೆಯ ಮಹತ್ವವನ್ನು ಮಕ್ಕಳ ಪೋಷಕರಿಗೆ ತಿಳಿಸಿ ಕೊಡುವ ಕೆಲಸವಾಗಬೇಕು. ಅದರಿಂದ ಅವರು ತಮ್ಮ ಮಕ್ಕಳನ್ನು ಈ ಕ್ಷೇತ್ರಕ್ಕೆ ಕಳುಹಿಸುವ ಸಾಧ್ಯತೆ ಇದೆ. ಇಂದು ಪಾಶ್ಚಾತ್ಯ ಸಂಸ್ಕೃತಿ ಎಷ್ಟೇ ಬೆಳೆದರೂ ಕರಾವಳಿಯ ಸಂಸ್ಕೃತಿಯನ್ನು ಮೆಟ್ಟಿ ಹೋಗಲು ಸಾಧ್ಯವಿಲ್ಲ ಎಂದು ಹೇಳಿದರು.

ಯಕ್ಷಗಾನ ಹಿಮ್ಮೇಳ ವಾದಕ ಬಂಟ್ವಾಳದ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಅವರಿಗೆ 2024ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿಯನ್ನು ಇಲ್ಲಿನ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ.

ಯಕ್ಷಗಾನ ತೆಂಕುತಿಟ್ಟು ಕಲಾವಿದರಾದ ಬೆಳ್ತಂಗಡಿಯ ಕೊಳ್ತಿಗೆ ನಾರಾಯಣ ಗೌಡ, ಕಾಸರಗೋಡಿನ ಸುಬ್ರಾಯ ಹೊಳ್ಳ, ಬಡಗುತಿಟ್ಟು ಕಲಾವಿದ ಕುಂದಾಪುರದ ಕೋಡಿ ವಿಶ್ವನಾಥ ಗಾಣಿಗ, ಪ್ರಸಾಧನ ಕಲಾವಿದ ಬಂಟ್ವಾಳದ ರಾಘವ ದಾಸ್, ಮೂಡಲಪಾಯ ಯಕ್ಷಗಾನ ಕಲಾವಿದ ತುಮಕೂರಿನ ಕಾಂತರಾಜು ಅವರಿಗೆ 2024ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿ ತಲಾ ₹50 ಸಾವಿರ ನಗದು ಒಳಗೊಂಡಿದೆ.

ತೆಂಕುತಿಟ್ಟು ಅರ್ಥಧಾರಿ ಕಾಸರಗೋಡಿನ ಅಡ್ಕ ಗೋಪಾಲಕೃಷ್ಣ ಭಟ್, ಹಾಸ್ಯಗಾರ ಕಾಸರಗೋಡಿನ ಮವ್ವಾರು ಬಾಲಕೃಷ್ಣ ಮಣಿಯಾಣಿ, ಬಣ್ಣದ ವೇಷಧಾರಿ ಮಂಗಳೂರಿನ ಉಮೇಶ್ ಕುಪ್ಪೆಪದವು, ಸ್ತ್ರೀ ವೇಷಧಾರಿ ಮಂಗಳೂರಿನ ಸುರೇಂದ್ರ ಮಲ್ಲಿ, ಬಡಗುತಿಟ್ಟು ಕಲಾವಿದ ಉಡುಪಿಯ ಜಗನ್ನಾಥ ಆಚಾರ್ಯ ಎಳ್ಳಂಪಳ್ಳಿ, ಸ್ತ್ರೀ ವೇಷಧಾರಿ ಶಿವಮೊಗ್ಗದ ಶಿವಾನಂದ ಗೀಜಗಾರು, ಸ್ತ್ರೀ ವೇಷಧಾರಿ ಹೊನ್ನಾವರದ ಮುಗ್ವಾ ಗಣೇಶ್ ನಾಯ್ಕ, ಭಾಗವತ ಮಂಗಳೂರಿನ ಅಂಡಾಲ ದೇವಿಪ್ರಸಾದ ಶೆಟ್ಟಿ, ತೆಂಕುತಿಟ್ಟು ಮತ್ತು ಬಡಗುತಿಟ್ಟು ಕಲಾವಿದರಾದ ಚಿಕ್ಕಮಗಳೂರಿನ ಹಳುವಳ್ಳಿ ಜ್ಯೋತಿ, ಮೂಡಲಪಾಯ ಕಲಾವಿದ ಬೆಂಗಳೂರು ಗ್ರಾಮಾಂತರದ ಕೃಷ್ಣಪ್ಪ ಅವರಿಗೆ 2024ನೇ ಸಾಲಿನ ಯಕ್ಷಸಿರಿ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದು ₹25 ಸಾವಿರ ನಗದು ಒಳಗೊಂಡಿದೆ.

₹25 ಸಾವಿರ ನಗದು ಒಳಗೊಂಡಿರುವ ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ದತ್ತಿನಿಧಿ ಪ್ರಶಸ್ತಿಯನ್ನು ತೆಂಕುತಿಟ್ಟು ಕಲಾವಿದ ಬಂಟ್ವಾಳದ ಕರ್ಗಲ್ಲು ವಿಶ್ವೇಶ್ವರ ಭಟ್ಟ ಅವರಿಗೆ ಪ್ರದಾನ ಮಾಡಲಾಯಿತು.

ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ನಗರಸಭೆಯ ಅಧ್ಯಕ್ಷ ಪ್ರಭಾಕರ ಪೂಜಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ, ಯಕ್ಷಗಾನ ಕಲಾರಂಗ ಅಧ್ಯಕ್ಷ ಎಂ. ಗಂಗಾಧರ ರಾವ್, ಜನಾರ್ದನ ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ನಿ.ಬೀ. ವಿಜಯ ಬಲ್ಲಾಳ್, ಮಣಿಪಾಲ ಮಾಹೆಯ ಸಹ ಕುಲಪತಿ ಡಾ.ನಾರಾಯಣ ಸಭಾಹಿತ್ ಉಪಸ್ಥಿತರಿದ್ದರು.

ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ ಎನ್. ಸ್ವಾಗತಿಸಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ 2024ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿ ಹಾಗೂ ಇತರ ಪ್ರಶಸ್ತಿಗಳನ್ನು ಭಾನುವಾರ ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು

ನನಗೆ ಸಿಕ್ಕಿರುವ ಪಾರ್ತಿಸುಬ್ಬ ಪ್ರಶಸ್ತಿಯು ಹಲವಾರು ವರ್ಷಗಳಿಂದ ಶಿಕ್ಷಕರಾಗಿ ದುಡಿದಿರುವ ಮಾಂಬಾಡಿ ಪರಂಪರೆಗೆ ಸಂದ ಗೌರವ
ಮಾಂಬಾಡಿ ಸುಬ್ರಹ್ಮಣ್ಯ ಭಟ್
ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತ ಕಲಾವಿದ

ಸ್ಪೀಕರ್‌ಗಾಗಿ ಕಾದ ಆಯೋಜಕರು

ಪ್ರಶಸ್ತಿ ಪ್ರದಾನ ಸಮಾರಂಭವು 4 ಗಂಟೆಗೆ ನಿಗದಿಯಾಗಿದ್ದರೂ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಬರುತ್ತಾರೆಂದು 5.15ರ ವರೆಗೂ ಕಾದು ಬಳಿಕ ಕಾರ್ಯಕ್ರಮ ಆರಂಭಿಸಲಾಗಿತ್ತು. ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಿ ಮುಗಿದರೂ ಖಾದರ್ ಬರಲೇ ಇಲ್ಲ. ಅವರು ಬರುವಾಗ ರಾತ್ರಿ 7.45 ಆಗಿತ್ತು.

ಮಾಂಬಾಡಿ ಮಾತು ಅರ್ಧಕ್ಕೆ ಮೊಟಕು: ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಅವರು ಮಾತನಾಡುತ್ತಿರುವಾಗಲೇ ಮುಖ್ಯ ಅತಿಥಿಯೊಬ್ಬರು ಬಂದರು. ನಿರೂಪಕರು ಅವರನ್ನು ಸ್ವಾಗತಿಸಿದರು. ಮಾಂಬಾಡಿಯವರ ಮಾತು ಅರ್ಧಕ್ಕೆ ಮೊಟಕುಗೊಂಡಿತು.

ಪಿಸ್ತೂಲ್‌ನಲ್ಲಿ ಆಟವಾಡುವಾಗ ಗುಂಡು ಹಾರಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ದೊಂದೇಮಾದಹಳ್ಳಿಯ ನರಸಿಂಹಮೂರ್ತಿ ಎಂಬುವರಿಗೆ ಸೇರಿದ ಕೋಳಿ ಫಾರಂನ ಕಾರ್ಮಿಕರ ಮನೆಯಲ್ಲಿ ಇಟ್ಟಿದ್ದ ಪಿಸ್ತೂಲ್ ಅನ್ನು ತೆಗೆದುಕೊಂಡು ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಗುಂಡು ಹಾರಿ ನಾಲ್ಕು ವರ್ಷದ ಬಾಲಕ ಮೃತಪಟ್ಟಿದ್ದಾನೆ.

ಕೋಳಿ ಫಾರಂನಲ್ಲಿ ಕೆಲಸಕ್ಕಾಗಿ ಪಶ್ಚಿಮ ಬಂಗಾಳದಿಂದ ವಲಸೆ ಬಂದಿದ್ದ ಶಶಾಂಕ್ ಎಂಬುವರ ಮಗ ಅಭಿಜಿತ್ (4) ಮೃತ ಬಾಲಕ. ಅಭಿಜಿತ್ ಹಾಗೂ ಮತ್ತೊಬ್ಬ ಬಾಲಕ ಭಾನುವಾರ ಸಂಜೆ ಕಾರ್ಮಿಕರ ಮನೆಯಲ್ಲಿಟ್ಟಿದ್ದ ಪಿಸ್ತೂಲ್ ಅನ್ನು ಯಾರ ಗಮನಕ್ಕೂ ಬರದಂತೆ ತೆಗೆದುಕೊಂಡು ಆಟವಾಡುತ್ತಿದ್ದಾಗ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಚಲುವರಾಜು ಸ್ಥಳಕ್ಕೆ ಭೇಟಿ ನೀಡಿದ್ದರು. ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೀದಿ ನಾಯಿ ದಾಳಿ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಬಾವನ ಸೌಂದತ್ತಿ ಗ್ರಾಮದ ದಿಗ್ಗೇವಾಡಿ ರಸ್ತೆ ಬದಿ, ಬೀದಿ ನಾಯಿಗಳ ದಾಳಿಗೆ ಸಿಲುಕಿ ಕಟ್ಟಡ ಕಾರ್ಮಿಕ ಶಿವಾನಂದ ಕುಂಬಾರ (35) ಭಾನುವಾರ ಮೃತಪಟ್ಟಿದ್ದಾರೆ.

‘ಶನಿವಾರ ರಾತ್ರಿ 1.30ರ ಸುಮಾರಿಗೆ ಈ ಘಟನೆ ನಡೆದಿದೆ. ಮದ್ಯದ ಅಮಲಿನಲ್ಲಿ ಬಿದ್ದಿದ್ದ ಇವರ ಮೇಲೆ 4-5 ಬೀದಿ ನಾಯಿಗಳು ದಾಳಿ ಮಾಡಿ ಮನಸೋ ಇಚ್ಛೆ ಕಚ್ಚಿ ಗಂಭೀರ ಗಾಯ ಮಾಡಿದ್ದವು. ಬಳಿಕ ಚಿಕಿತ್ಸೆಗಾಗಿ ಕುಟುಂಬಸ್ಥರು ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದು, ರಾಯಬಾಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ) ವರದಿ: ಪಟ್ಟಣದ ಕಿಲ್ಲೆ ಓಣಿ ಹಾಗೂ ಶಿರಸಿ ರಸ್ತೆ ಬದಿ ಮನೆಯಂಗಳದಲ್ಲಿ ಭಾನುವಾರ ಆಟವಾಡುತ್ತಿದ್ದ ಮೂವರು ಪುಟ್ಟ ಮಕ್ಕಳ ಮೇಲೆ ಬೀದಿ ನಾಯಿಯೊಂದು ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದೆ.

ನಿಮ್ಮ 75ನೇ ಹುಟ್ಟುಹಬ್ಬ

ಶ್ರೀ. ಓಂಪ್ರಕಾಶ್ ಶಂಕರಾನಂದ ಕಣಗಲಿ
(ಮಾಜಿ ಸಚಿವರು, ಕರ್ನಾಟಕ ಸರ್ಕಾರ)
17ನೇ ಫೆಬ್ರವರಿ 1950 – 6ನೇ ನವೆಂಬರ್ 2018

ಸಮೃದ್ಧ ಬದುಕು ನಿಮ್ಮದಾಗಿದ್ದರೂ ನಿಮ್ಮ ಜೀವನ ಶೈಲಿ ತುಂಬಾ ಸರಳವಾಗಿತ್ತು
ಹೃದಯ ವೈಶಾಲ್ಯತೆಯಲ್ಲಿ ನಿಮ್ಮನ್ನು ಮೀರಿಸುವವರೇ ಇಲ್ಲವೆಂಬಂತೆ ಇದ್ದಿರಿ.
ಅಪ್ಪ ನಿಮ್ಮ ಆ ನಗು ಇನ್ನೂ ಮಾಸಿಲ್ಲ, ಪ್ರಜ್ವಲಿಸುವ ಆ ನಿಮ್ಮ ನಗುವೇ ನಮ್ಮ ಮನೆಯ ಬೆಳಕು.
ನೀವು ಪ್ರತಿ ಕ್ಷಣವೂ ನಮ್ಮ ನೆನಪಿನಲ್ಲಿ ಇದ್ದೀರಿ, ಮುಂದೆಯೂ ಇರುತ್ತೀರಿ.
ನೀವು ನಮ್ಮಿಂದ ದೂರವಾದರೂ ನೀವು ಹಾಕಿಕೊಟ್ಟ ದಾರಿಯಲ್ಲೇ ನಡೆಯುತ್ತಿದ್ದೇವೆ,
ನಿಮ್ಮ ಧೈರ್ಯ ಮತ್ತು ಸ್ಥೈರ್ಯ, ಚಿಂತನೆಗಳು ನಮಗೆ ದಾರಿದೀಪ.
ನಿಮ್ಮ ಪರಂಪರೆಯನ್ನು ಮುಂದುವರಿಸುತ್ತಿದ್ದೇವೆ, ನಿಮ್ಮದೇ ಸಮಗ್ರ ದಾರಿಯಲ್ಲಿ ನಡೆಯುತ್ತಿದ್ದೇವೆ.
ನೀವು ನಮ್ಮ ಜೊತೆ ಇಲ್ಲದಿದ್ದರೂ, ನಿಮ್ಮ ದಿವ್ಯ ಚೇತನ ನಮಗೂ ಸ್ಫೂರ್ತಿಯಾಗಿ ಉಳಿದಿದೆ.
ನೀವು ನಮಗೆ ತಂದೆ, ಮಾರ್ಗದರ್ಶಕ, ಆತ್ಮೀಯ ಸ್ನೇಹಿತ ಆಗಿದ್ದಿರಿ.
ನಮ್ಮ ಹೃದಯದಲ್ಲಿ ನೀವು ಶಾಶ್ವತವಾಗಿ ಉಳಿದಿದ್ದೀರಿ.

ಶ್ರೀಮತಿ ವಿದ್ಯಾ ಓಂಪ್ರಕಾಶ್ ಕಣಗಲಿ
ಆಕಾಶ್, ಅನಿಕಾ, ಅಮೃತಾ, ಶ್ರೀಧರ್, ಅನಘಾ ಮತ್ತು ಅಂಜಲಿ

ಇ.ಡಿ ಅಧಿಕಾರಿಗಳ ಸೋಗಿನಲ್ಲಿ ಬೀಡಿ ಉದ್ಯಮಿಯ ದರೋಡೆ

ಎಎಸ್‌ಐ ಸೇರಿ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ



ಶಫೀರ್ ಬಾಬು



ಮೊಹಮ್ಮದ್ ಅನ್ಸರ್

ಸಿರಾಜುದ್ದೀನ್

ಮೊಹಮ್ಮದ್ ಇಕ್ಬಾಲ್

ವಿಟ್ಲ (ದಕ್ಷಿಣಕನ್ನಡ): ಕೊಳ್ನಾಡು ಗ್ರಾಮದ ಬೋಳಂತೂರು ನಾರ್ಶ ಎಂಬಲ್ಲಿ ಬೀಡಿ ಉದ್ಯಮಿ ಸುಲೇಮಾನ್ ಅವರ ಮನೆಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಸೋಗಿನಲ್ಲಿ ತೆರಳಿ ಸುಮಾರು ₹30 ಲಕ್ಷ ದರೋಡೆ ಮಾಡಿದ ಪ್ರಕರಣದ ಸೂತ್ರಧಾರನಾಗಿರುವ ಪೊಲೀಸ್ ಅಧಿಕಾರಿ ಸೇರಿದಂತೆ ನಾಲ್ವರು ಆರೋಪಿಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಕೇರಳದ ತ್ರಿಶ್ಶೂರ್ ಜಿಲ್ಲೆಯ ಕೊಡುಂಗಲ್ಲೂರು ಪೊಲೀಸ್ ಠಾಣೆಯ ಎಎಸ್‌ಐ ಶಫೀರ್ ಬಾಬು (48), ಬಂಟ್ವಾಳ ತಾಲ್ಲೂಕಿನ ಕೊಳ್ನಾಡು ನಿವಾಸಿ ಸಿರಾಜುದ್ದೀನ್ (37), ಬಂಟ್ವಾಳ ನಿವಾಸಿ ಮೊಹಮ್ಮದ್ ಇಕ್ಬಾಲ್ (38) ಹಾಗೂ ಮಂಗಳೂರಿನ ಪಡೀಲ್ ನಿವಾಸಿ ಮೊಹಮ್ಮದ್ ಅನ್ಸಾರ್ (27) ಬಂಧಿತರು. ಈ ನಾಲ್ವರು ಆರೋಪಿಗಳನ್ನು ಶನಿವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಸುಲೇಮಾನ್ ಅವರ ಬೀಡಿ ಉದ್ಯಮದಲ್ಲಿ ಆರೋಪಿ ಸಿರಾಜುದ್ದೀನ್ ಈ ಹಿಂದೆ ವಾಹನ ಚಾಲಕನಾಗಿ ಕೆಲಸಕ್ಕಿದ್ದ. ಆತನಿಗೆ ಅವರ ವ್ಯವಹಾರಗಳ ಬಗ್ಗೆ ಮಾಹಿತಿ ಇತ್ತು. ಆತನೇ ಕೊಲ್ಲಂನ ದರೋಡೆಕೋರರ ತಂಡಕ್ಕೆ ಉದ್ಯಮಿಯ ಪೂರ್ವಾಪರಗಳ ಬಗ್ಗೆ ಮಾಹಿತಿ ಒದಗಿಸಿದ್ದ. ಆತ ನೀಡಿದ್ದ ಮಾಹಿತಿ ಆಧಾರದಲ್ಲಿ ಎಎಸ್‌ಐ ಶಫೀರ್ ಬಾಬು ದರೋಡೆ ಕೃತ್ಯದ ರೂಪುರೇಷೆ ತಯಾರಿಸಿದ್ದ. ಅದನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ಬಂಟ್ವಾಳದ ಮೊಹಮ್ಮದ್ ಇಕ್ಬಾಲ್ ಹಾಗೂ ಮೊಹಮ್ಮದ್ ಅನ್ಸಾರ್ ಹಾಗೂ ಈ ಮೊದಲೇ ಬಂಧಿತರಾಗಿರುವ ಅನಿಲ್ ಫರ್ನಾಂಡಿಸ್, ಸಚಿನ್ ಟಿ.ಎಸ್. ಹಾಗೂ ಶಬಿನ್ ಸಹಕರಿಸಿದ್ದರು’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಕೊಳ್ನಾಡು ಗ್ರಾಮದ ಬೋಳಂತೂರು ನಾರ್ಶದಲ್ಲಿರುವ ಬೀಡಿ ಉದ್ಯಮಿ ಸುಲೇಮಾನ್ ಮನೆಗೆ ಜ.3ರಂದು ಕಾರಿನಲ್ಲಿ ತೆರಳಿದ್ದ ಆರೋಪಿಗಳು, ತಮ್ಮನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳೆಂದು ಪರಿಚಯಿಸಿಕೊಂಡಿದ್ದರು. ಮನೆಯಲ್ಲಿರುವ ದಾಖಲೆ ಪತ್ರಗಳನ್ನು ಪರಿಶೀಲನೆ ನಡೆಸುವ ನೆಪದಲ್ಲಿ ಸುಮಾರು ₹30 ಲಕ್ಷ ನಗದನ್ನು ದೋಚಿ ಪರಾರಿಯಾಗಿದ್ದರು. ಅವರು ತೆರಳಿದ ಬಳಿಕ ಸಂದೇಹ ಬಂದಿದ್ದರಿಂದ ಉದ್ಯಮಿ ಸುಲೇಮಾನ್ ಮನೆಯವರು ವಿಟ್ಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕೇರಳದ ಕೊಲ್ಲಂ ಜಿಲ್ಲೆಯ ಪೆರಿನಾಡ್, ತ್ರಿಕ್ಕಡವೂರಿನ ಅನಿಲ್ ಫರ್ನಾಂಡಿಸ್ (49) ಎಂಬುವನನ್ನು ಪೊಲೀಸರು ಮೊದಲು ಬಂಧಿಸಿದ್ದರು. ಕೃತ್ಯಕ್ಕೆ ಬಳಸಿದ್ದ ಕೇರಳ ನೋಂದಣಿಯ ಎರ್ಟಿಗಾ ಕಾರು ಹಾಗೂ ಕೃತ್ಯ ನಡೆಸುವಾಗ ಆ ಕಾರಿಗೆ ಅಳವಡಿಸಿದ್ದ ನಕಲಿ ನಂಬರ್ ಪ್ಲೇಟ್ ಹಾಗೂ ₹5 ಲಕ್ಷ ನಗದನ್ನು ಆತನಿಂದ ವಶಪಡಿಸಿಕೊಂಡಿದ್ದರು. ಆತ ನೀಡಿದ ಮಾಹಿತಿ ಆಧಾರದಲ್ಲಿ ಇನ್ನಿಬ್ಬರು ಆರೋಪಿಗಳಾದ ಕೇರಳ ಕೊಲ್ಲಂನ ಶಬಿನ್ ಮತ್ತು ಸಚಿನ್‌ನನ್ನು ಬಂಧಿಸಿದ್ದರು. ವಿದೇಶಕ್ಕೆ ಪರಾರಿಯಾಗಲು ಯತ್ನಿಸಿದ್ದ ಶಬಿನ್‌ನನ್ನು ತಿರುವನಂತಪುರದ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಈ ಮೂವರು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಈ ಪ್ರಕರಣವನ್ನು ಬೇಧಿಸುವ ಸಲುವಾಗಿ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಅಪರಾಧ ಕೃತ್ಯಗಳ ತನಿಖೆಯಲ್ಲಿ ಪರಿಣಿತರಾದ ಅಧಿಕಾರಿ ಹಾಗೂ ಸಿಬ್ಬಂದಿ ಒಳಗೊಂಡ ನಾಲ್ಕು ತಂಡಗಳನ್ನು ಜಿಲ್ಲಾ ಪೊಲೀಸ್ ವರಿಷ್ಠರು ರಚಿಸಿದ್ದರು.

‘ಸಿಕ್ಕಿದ್ದು ₹ 5 ಲಕ್ಷ’

‘ಈ ಪ್ರಕರಣದಲ್ಲಿ ಒಟ್ಟು ಏಳು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣದ ತನಿಖೆ ಮುಂದುವರಿದಿದೆ. ಈ ಕೃತ್ಯದಲ್ಲಿ ₹ 30 ಲಕ್ಷ ದರೋಡೆಯಾದ ಬಗ್ಗೆ ದೂರು ನೀಡಲಾಗಿದೆ. ಸದ್ಯಕ್ಕೆ ₹ 5 ಲಕ್ಷವನ್ನು ಮಾತ್ರ ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ಅವರು ತಿಳಿಸಿದರು.

ಬೆಂಕಿ ಅವಘಡ: 6 ಹಸುಗಳ ಸಜೀವ ದಹನ

ರಟ್ಟೀಹಳ್ಳಿ (ಹಾವೇರಿ): ತಾಲ್ಲೂಕಿನ ಕಡೂರು ಗ್ರಾಮದಲ್ಲಿ ಶನಿವಾರ ಮಧ್ಯ ರಾತ್ರಿ ಕೊಟ್ಟಿಗೆಯಲ್ಲಿ ಬೆಂಕಿ ಅವಘಡ ಸಂಭವಿಸಿ, ಆರು ಹಸುಗಳು ಸಜೀವ ದಹನಗೊಂಡಿವೆ.

‘ಗ್ರಾಮದ ನಾಗಪ್ಪ ಫಕ್ಕೀರಪ್ಪ ಅಸುಂಡಿ ಅವರ ನಾಲ್ಕು ಆಕಳು ಹಾಗೂ ಹನುಮಂತಪ್ಪ ಶೇಖಪ್ಪ ಅಸುಂಡಿ ಅವರ ಎರಡು ಆಕಳು, ಕೊಟ್ಟಿಗೆಯಲ್ಲಿದ್ದ ಪಶು ಆಹಾರದ ಚೀಲಗಳು ಸೇರಿ ದನದ ಕೊಟ್ಟಿಗೆ ಸಂಪೂರ್ಣ ಸುಟ್ಟುಹೋಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಮುಂದಾದರೂ ಸಾಧ್ಯವಾಗಲಿಲ್ಲ’ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಶಾಸಕ ಯು.ಬಿ. ಬಣಕಾರ, ತಹಶೀಲ್ದಾರ್ ಮತ್ತಿತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848, E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ವಿವಿಧ ಸರಕುಗಳನ್ನು ಖರೀದಿಸುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನೊಳಗೊಂಡ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಸರಕುಗಳ ವಿವರ	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply of Agro Based Briquettes on Annual Rate Contract basis	KMF/2024-25/IND1266	ದಿನಾಂಕ: 17.02.2025 ರಿಂದ 04.03.2025 ರವರೆಗೆ
02	Supply of Fodder Maize and Hybrid Jowar	KMF/2024-25/IND1268	

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು(ಆಡಳಿತ/ಖರೀದಿ–ಮೊ.ಸಂ:7760968421) ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಮೇ 3ರಂದು ಧರ್ಮಸ್ಥಳದಲ್ಲಿ ಸಾಮೂಹಿಕ ವಿವಾಹ

ಉಜಿರೆ: ಧರ್ಮಸ್ಥಳದಲ್ಲಿ 53ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಮೇ 3ರಂದು ನಡೆಯಲಿದೆ. ವಿವಾಹದ ವೆಚ್ಚವನ್ನು ಧರ್ಮೋತ್ಥಾನ ಟ್ರಸ್ಟ್ ವಹಿಸಲಿದ್ದು, ಮದುವೆಯಾಗಲು ಇಚ್ಛಿಸುವವರು ಏ. 25ರ ಒಳಗೆ ಹೆಸರು ನೋಂದಾಯಿಸಬೇಕು. ಮಾಹಿತಿಗೆ 0825626644/9663464648/8147263422 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವಾಹ ನೋಂದಣಿ ಕಚೇರಿಯನ್ನು ಪ್ರವಚನ ಮಂಟಪದಲ್ಲಿ ಎಸ್‌ಡಿಎಂ ಧರ್ಮೋತ್ಥಾನ ಟ್ರಸ್ಟ್ ಕಾರ್ಯದರ್ಶಿ ಎ.ವಿ. ಶೆಟ್ಟಿ ಮತ್ತು ದೇವಳ ಪಾರುಪತ್ಯಗಾರ ಲಕ್ಷ್ಮೀ ನಾರಾಯಣ ರಾವ್ ಭಾನುವಾರ ಉದ್ಘಾಟಿಸಿದರು. ಧರ್ಮಸ್ಥಳ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶ್ರೀನಿವಾಸ ರಾವ್, ಅನ್ನಪೂರ್ಣ ಛತ್ರದ ವ್ಯವಸ್ಥಾಪಕ ಸುಬ್ರಹ್ಮಣ್ಯಪ್ರಸಾದ್, ನಿವೃತ್ತ ಮುಖ್ಯ ಶಿಕ್ಷಕ ಧರ್ಣಪ್ಪ ಮಾಸ್ಟರ್, ಸಂತೋಷ್ ಗೌಡ, ಶಿವರಾಮ್, ಪವಿತ್ರಾ, ಭವಾನಿ, ಮಂಜುಳಾ ಪಾಲ್ಗೊಂಡಿದ್ದರು.

ಬೆಂಗಳೂರಿನ ವಿದ್ಯಾರ್ಥಿ ಸಾವು

ಸೋನಿಪತ್ (ಪಿಟಿಐ): ಹರಿಯಾಣದ ಅಶೋಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದ ಬೆಂಗಳೂರು ಮತ್ತು ತೆಲಂಗಾಣ ಮೂಲದ ಇಬ್ಬರು ಪ್ರತ್ಯೇಕ ಘಟನೆಗಳಲ್ಲಿ ಮೃತಪಟ್ಟಿದ್ದಾರೆ. ಎರಡು ಘಟನೆಗಳು ಶುಕ್ರವಾರ ರಾತ್ರಿ ನಡೆದಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಬೆಂಗಳೂರು ಮೂಲದ 21 ವರ್ಷದ ವಿದ್ಯಾರ್ಥಿಯೊಬ್ಬ ವಸತಿನಿಲಯದ ಮಹಡಿಯಿಂದ ಜಿಗಿದು ಮೃತಪಟ್ಟಿರುವ ಶಂಕೆ ಇದೆ. ತೆಲಂಗಾಣ ಮೂಲದ ವಿದ್ಯಾರ್ಥಿಯೊಬ್ಬ ವಿಶ್ವವಿದ್ಯಾಲಯದ ಗೇಟ್ ಬಳಿ ಬಿದ್ದಿದ್ದ. ಆತ ಹೃದಯ ಸಂಬಂಧಿ ಸಮಸ್ಯೆಯಿಂದ ಮೃತಪಟ್ಟಿರುವ ಶಂಕೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ನಗರಸಭಾ ಕಾರ್ಯಾಲಯ, ಸಾಗರ – 577401
Web: www.sagaracity.mrc.gov.in Ph: 08183-226021
Email: ka.sagar.cmc@gmail.com
E-121502:CMCSGR/ADMOEST1/26/2025-26 ದಿನಾಂಕ:13.02.2025

ಅಂತಿಮ ತಿಳುವಳಿಕೆ

ವಿಷಯ:– ಕರ್ತವ್ಯಕ್ಕೆ ಹಾಜರಾಗುವ ಬಗ್ಗೆ
ಉಲ್ಲೇಖ:–.ನಿಮಗೆ ನೀಡಿದ ನೋಟಿಸ್ ದಿನಾಂಕ:01–12–2022, 01–12–2022 ಮತ್ತು 03–03–2023.

ನೀವು ಸಾಗರ ನಗರಸಭೆ ಕಛೇರಿಯಲ್ಲಿ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವುದು ಸರಿಯಷ್ಟೇ, ದಿನಾಂಕ:20.10.2022 ರಿಂದ ಇದುವರೆವಿಗೂ ಕರ್ತವ್ಯಕ್ಕೆ ಹಾಜರಾಗದೇ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ. ಈಗಾಗಲೇ ನಿಮಗೆ 3 ನೋಟಿಸ್ ಜಾರಿ ಮಾಡಿದ್ದರೂ ಕೂಡ ಇದುವರೆವಿಗೂ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಕಾರಣ ಈ ಅಂತಿಮ ನೋಟಿಸ್ ನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಪ್ರಕಟಣೆ ನೀಡಿದ ಒಂದು ವಾರದೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ ಕೆ.ಸಿ.ಎಸ್.ಆರ್. ನಿಯಮದಡಿ ಶಿಸ್ತು ಕ್ರಮಕ್ಕಾಗಿ ಮೇಲಾಧಿಕಾರಗಳಿಗೆ ವರದಿ ಸಲ್ಲಿಸಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ ಸಾಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/113/02/1671

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯ ನೀರು ನಿರ್ವಹಣೆ–ಪಶ್ಚಿಮ)
6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.
ನಂ. ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂ.ಸ–02/1605/2024–25 ದಿನಾಂಕ: 13.02.2025

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಮೇಡಹಳ್ಳಿಯ ಗಣಪತಿ ದೇವಸ್ಥಾನ, ಪಾರ್ವತಿನಗರದಿಂದ ರಾ.ಹೆ. – 75 ಸರ್ವಿಸ್ ರಸ್ತೆಯುದ್ದಕ್ಕೂ ಮೇಡಹಳ್ಳಿಯ ತ್ಯಾಜ್ಯ ನೀರು ಶುದ್ಧೀಕರಣ ಘಟಕದವರೆಗೆ 600ಮಿಮೀ/450ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ–3 ದರ್ಜೆಯ ಒಳಚರಂಡಿ ಕೊಳವೆ ಮಾರ್ಗಗಳನ್ನು ಒದಗಿಸುವ ಮತ್ತು ಅಳವಡಿಸುವ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ: ರೂ. 241.65 ಲಕ್ಷಗಳು. ಇಎಂಡಿ: ರೂ. 3.62 ಲಕ್ಷಗಳು.
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 03.03.2025ರ ಮಧ್ಯಾಹ್ನ 3.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 04.03.2025 ರಂದು ಸಂಜೆ 4.30 ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
DIPR/CP/MIA/5084/2024-25 ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)

ಅಟಲ್ ಭೂಜಲ ಯೋಜನೆ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಯೋಜನಾ ನಿರ್ದೇಶಕರ ಕಛೇರಿ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (SPMU), ನಂ1/1, 2ನೇ ಮಹಡಿ, ಕೆಎಸ್‌ಎಫ್‌ಸಿ ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು–560 052.
No: ABHY/SPMU/PROC/29/2024-25 Date: 15.02.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಎಸ್.ಪಿ.ಎಂ.ಯು, ಅಟಲ್ ಭುಜಲ್ ಯೋಜನೆ, ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ "Construction of wire screen filter injection well for artificial recharge of groundwater along with 2 year operation and maintenance in Atal Bhujal Yojana, Karnataka in 05 Packages" ಇಲ್ಲಿಗೆ ಸೇವೆಯನ್ನು ಒದಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆ ಮತ್ತು ಇತರ ವಿವರಗಳಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು https://kppp.karnataka.gov.in ಗೆ ಲಾಗ್ ಇನ್ ಮಾಡುವ ಮೂಲಕ ಪಡೆಯಬಹುದು. ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: 17.02.2025 ರಿಂದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 25.02.2025 ರ 17.00 ಗಂಟೆಗಳು ಆಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಗಳವರೆಗೆ ಪಡೆಯಬಹುದು.
ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
DIPR/CP/AAPL/RO5073/24-25 ಎಸ್.ಪಿ.ಎಂ.ಯು, ಅಟಲ್ ಜಲ್, ಕರ್ನಾಟಕ

ಕಾಯಂ ಸಿಬ್ಬಂದಿ ಕೊರತೆ ಸಂಶೋಧನೆಗೆ ಹಿನ್ನಡೆ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕೆ ಕಾಯಂ ಪ್ರಾಧ್ಯಾಪಕರು ಇಲ್ಲದೇ, ಪಿಎಚ್.ಡಿ ಸೇರಿ ವಿವಿಧ ಸಂಶೋಧನಾ ಚಟುವಟಿಕೆಗಳಿಗೆ ತೀವ್ರ ಹಿನ್ನಡೆ ಉಂಟಾಗಿದೆ.

2017-18ನೇ ಶೈಕ್ಷಣಿಕ ಸಾಲಿನಲ್ಲಿ ಸ್ಥಾಪಿತವಾದ ಈ ವಿಶ್ವವಿದ್ಯಾಲಯಕ್ಕೆ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಪ್ರಾರಂಭದಿಂದಲೂ ಎಲ್ಲ ಸರ್ಕಾರಗಳು ವಿಶ್ವವಿದ್ಯಾಲಯದ ಭೌತಿಕ ಅಭಿವೃದ್ಧಿಗೆ ಬೇಕಾದ ಅನುದಾನ ನೀಡುತ್ತಿವೆ. ಆದರೆ, ಕಾಯಂ ಸಿಬ್ಬಂದಿ ನೇಮಕಾತಿಗೆ ಕ್ರಮ ವಹಿಸಿಲ್ಲ. ಇದರ ಪರಿಣಾಮ ಇಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಪಿಎಚ್.ಡಿಗಾಗಿ ರಾಜ್ಯದ ಇತರೆ ವಿಶ್ವವಿದ್ಯಾಲಯಗಳನ್ನು ಅವಲಂಬಿಸಬೇಕಿದೆ.

‘ವಿಶ್ವವಿದ್ಯಾಲಯವು ಪ್ರಗತಿ ಸಾಧಿಸಲು ವಿಪುಲ ಅವಕಾಶಗಳಿವೆ. ಆದರೆ, ಪೂರಕ ಪ್ರಯತ್ನಗಳು ನಡೆದಿಲ್ಲ. ಕುಲಪತಿ ನಿವೃತ್ತರಾಗಿ ಹತ್ತು ತಿಂಗಳಾದರೂ ಹೊಸ ಕುಲಪತಿಯ ನೇಮಕ ಆಗಿಲ್ಲ. ಕಾಯಂ ಸಿಬ್ಬಂದಿ ನೇಮಕಾತಿಗೂ ರಾಜ್ಯ ಸರ್ಕಾರ ಆಸಕ್ತಿ ತೋರುತ್ತಿಲ್ಲ’ ಎಂದು ಶಿಕ್ಷಣ ತಜ್ಞರು ಹೇಳುತ್ತಾರೆ.

‘ವಿಶ್ವವಿದ್ಯಾಲಯದಲ್ಲಿ ಕಾಯಂ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಇಲ್ಲ. ಅವರಿಲ್ಲದೇ ಸಂಶೋಧನಾ ಚಟುವಟಿಕೆಗೆ ಸಮಸ್ಯೆಯಾಗಿದೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಆಗದು. ಕಾಯಂ ಪ್ರಾಧ್ಯಾಪಕರು ನೇಮಕಗೊಂಡರೆ ಮಾತ್ರ ಸಂಶೋಧನಾ ಚಟುವಟಿಕೆಗಳು ನಡೆಯಲು ಸಾಧ್ಯ’ ಎಂದು ಪ್ರಭಾರ ಕುಲಪತಿ ಪ್ರೊ. ಎಸ್.ವಿ.ನಾಡಗೌಡರ ತಿಳಿಸಿದರು.

ವಿ.ವಿಗೆ ಭೌತಿಕ ಸೌಲಭ್ಯಗಳ ಜತೆಗೆ ಮಾನವ ಸಂಪನ್ಮೂಲ ಅವಶ್ಯಕ. ಎಲ್ಲ ಹಂತದಲ್ಲಿ ನುರಿತ ಪ್ರಾಧ್ಯಾಪಕರು ಬೇಕು. ಕಾಯಂ ಸಿಬ್ಬಂದಿ ನೇಮಕಕ್ಕೆ ಸರ್ಕಾರ ಕ್ರಮವಹಿಸಬೇಕು
ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ,
ವಿಶ್ರಾಂತ ಕುಲಪತಿ

ಕುಲಸಚಿವರ ಜೊತೆಗೆ ನಾಲ್ಕು ಪಿಡಿಒಗಳು ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾರೆ. ಒಬ್ಬ ಎಂಜಿನಿಯರ್ ಇದ್ದಾರೆ. ಉಳಿದವರು ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಇದ್ದಾರೆ
ಪ್ರೊ. ಎಸ್.ವಿ.ನಾಡಗೌಡರ
ಪ್ರಭಾರ ಕುಲಪತಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/4096/2024–25, ದಿನಾಂಕ: 14.02.2025 (3ನೇ ಕರೆ)	1	ರೂ.47,71,061/– / ರೂ.95,450/–	24.02.2025ರ ಸಂಜೆ 4:00 ಗಂಟೆಯವರೆಗೆ	25.02.2025ರ ಸಂಜೆ 5:00 ಗಂಟೆಯ ನಂತರ
2			2	ರೂ.37,96,640/– / ರೂ.76,000/–		
3		ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/4096/2024–25, ದಿನಾಂಕ: 14.02.2025 (4ನೇ ಕರೆ)	3	ರೂ.64,46,206/– / ರೂ.1,28,930/–		
4			4	ರೂ.57,44,679/– / ರೂ.1,15,000/–		
5			5	ರೂ.81,71,287/– / ರೂ.1,63,430/–		
6		ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/4096/2024–25, ದಿನಾಂಕ: 14.02.2025 (5ನೇ ಕರೆ)	6	ರೂ.68,64,424/– / ರೂ.1,37,300/–		
7			7	ರೂ.43,84,731/– / ರೂ.87,700/–		
8			8	ರೂ.40,87,811/– / ರೂ.81,800/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/5088/2024-25

KARNATAKA INDUSTRIAL AREAS DEVELOPMENT BOARD
(A Government of Karnataka Undertaking)
49, East Wing, 4th & 5th Floor, Khanija Bhavan Race Course Road
Bengaluru – 560 001. Phone: 080-22265383
Website: www.kiadb.in email: Email: ceoem@kiadb.in

No. KIADB/COF/C-Audit/20099/2024-25 Dated: 17.02.2025

Short term Tender notification inviting bids for appointment of Auditors in KIADB for conducting Pre-Audit and Concurrent Audit.

The Karnataka Industrial Areas Development Board (KIADB) invite proposals/offers through Karnataka Public Procurement Portal https://kppp.karnataka.gov.in from Chartered Accountant (CA) Firms/ Cost Accountants (CMA) Firms/Companies/ Associates/Institute of Public Auditors of India (IPAI) / Karnataka Institute of Public Auditors (KIPA) for appointment of Auditors in KIADB for conducting Pre Audit and Concurrent Audit of Head Office as well its unit/zonal offices for one year (F.Y 2025-26) to be extended on mutual consent and also on performance basis for another two years. The aspiring Chartered Accounts Firms/Cost Accountants Firms/Companies/Associates/Institute of Public Auditors of India (IPAI) /Karnataka Institute of Public Auditors (KIPA) who have not registered in Karnataka Public Procurement Portal should register before participating through the website https://kppp.karnataka.gov.in. The copies of the Tender documents can be downloaded from Karnataka Public Procurement Portal consisting of qualification criteria along with terms and conditions of contract to be complied with.
The bids shall to be uploaded through Karnataka Public Procurement Portal only. Last date for submission of bids is on or before 03rd March 2025 up to 16.00 hrs. For details, viz registration, e-payment, user manual for bid submission, visit Karnataka Public Procurement Portal website https://kppp.karnataka.gov.in or contact e-procurement Help Desk No.080-46010000/ 080-68948777.

Sd/-
DIPR/CP/5074/Zen/2024-25 Controller of Finance, KIADB

ಶಿಕ್ಷಣ

ಕಲಿಕೆಗೊಂದು ಹಬ್ಬ

ಭಾರತಿ ಎ.ಕೊಪ್ಪ

ಕಲಿತ ಪಾಠಗಳನ್ನೇ ವಿಭಿನ್ನವಾಗಿ ಸ್ಪರ್ಧಾತ್ಮಕ ಚಟುವಟಿಕೆಗಳ ಮೂಲಕ ಹೇಳಿಕೊಟ್ಟರೆ ಕಲಿಕೆಯೇ ಒಂದು ಹಬ್ಬವಾಗುತ್ತದೆ. ಸಮಗ್ರ ಶಿಕ್ಷಣ ಕರ್ನಾಟಕದಿಂದ 1 ರಿಂದ 5ನೇ ತರಗತಿ ಮಕ್ಕಳಿಗೆ ಫೆಬ್ರುವರಿಯಲ್ಲಿ 'ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ' ಚಟುವಟಿಕೆಗಳ ಬಲವರ್ಧನೆಗೆ 'ಕಲಿಕಾ ಹಬ್ಬ' ನಡೆಯುತ್ತಿದೆ.

ಸರ್ವಶಿಕ್ಷಣ ಅಭಿಯಾನದಡಿ 2013-14ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ 'ಕಲಿಕೋತ್ಸವ' ಎಂಬ ವಿನೂತನ ಯೋಜನೆ ಜಾರಿಗೆ ತರಲಾಗಿತ್ತು. 1ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಕಲಿಕೆಯಲ್ಲಿ ಉತ್ಸಾಹ ಹೆಚ್ಚಿಸುವ ಪ್ರಯತ್ನ ನಡೆಸಲಾಗಿತ್ತು. ಕೋವಿಡ್ ಕಾರಣಗಳಿಂದ ಇಂಥ ಚಟುವಟಿಕೆಗಳು ಸ್ತಬ್ಧಗೊಂಡಿದ್ದವು. ನಂತರ 2022–23ರಲ್ಲಿ ಈ ಹಬ್ಬ ನಡೆಯಿತು. 'ಪ್ರಶ್ನೆಯು ಪ್ರಜ್ಞೆಯಾಗಲಿ' ಎಂಬ ಧ್ಯೇಯದೊಂದಿಗೆ ನಡೆದ ಕಾರ್ಯಕ್ರಮದಲ್ಲಿ 4 ರಿಂದ 9ನೇ ತರಗತಿ ಮಕ್ಕಳು ಭಾಗವಹಿಸಿದ್ದರು.

ಹಬ್ಬದಲ್ಲಿ ಏನೇನಿರುತ್ತೆ?

ಗಟ್ಟಿಯಾಗಿ ಓದುವುದು, ಕಥೆ ಹೇಳುವುದು, ಕೈಬರಹ ಮತ್ತು ಕ್ಯಾಲಿಗ್ರಫಿ, ಸಂತೋಷದಾಯಕ ಗಣಿತ, ಟ್ರಷರ್ ಹಂಟ್ ಅಥವಾ ಮೆಮೊರಿ ಪರೀಕ್ಷೆ, ರಸಪ್ರಶ್ನೆ, ಸಣ್ಣ ಸಣ್ಣ ಕಥೆ ಕಟ್ಟುವುದು ಸೇರಿ ಹಲವು ಸ್ಪರ್ಧಾ ಚಟುವಟಿಕೆಗಳು ನಡೆಯುತ್ತವೆ. ಸ್ಪರ್ಧೆ ವೈಯಕ್ತಿಕ ಮತ್ತು ಕ್ಲಸ್ಟರ್ ಹಂತಗಳಲ್ಲಿ ಶಾಲೆಗಳ ನಡುವೆ ನಡೆಯುತ್ತವೆ. ಪಠ್ಯೇತರ ಪುಸ್ತಕಗಳ ಓದಿನ ಜತೆಗೆ ಕನ್ನಡ-ಇಂಗ್ಲಿಷ್ ಹಾಗೂ ಮಾತೃಭಾಷೆಯಲ್ಲೂ ವಿದ್ಯಾರ್ಥಿಗಳಿಗೆ ಕಥೆ ಹೇಳುವ ಅವಕಾಶ ನೀಡಲಾಗಿದೆ. ಇದರಿಂದ ಮಕ್ಕಳ ಮೌಖಿಕ ಅಭಿವ್ಯಕ್ತಿಯ ಕೌಶಲವನ್ನು ಒರೆಗೆ ಹಚ್ಚಬಹುದು. ಚಂದದ ಕೈಬರಹಗಳ ಸ್ಪರ್ಧೆ ನಡೆಯಲಿದೆ. ಕೈಬರಹದ ಶೈಲಿ ಮತ್ತು ತಪ್ಪಿಲ್ಲದ ಬರಹದ ಪ್ರದರ್ಶನವೂ ಇರಲಿದೆ. ಮೋಜಿನ ಆಟಗಳ ಮೂಲಕ ಕಬ್ಬಿಣದ ಕಡಲೆ ಎಂದೆನಿಸಿಕೊಂಡಿರುವ ಗಣಿತದ ಕಲಿಕೆಯನ್ನು ಸಂತಸದಾಯಕವಾಗಿಸಬಹುದು. ಕ್ರಿಯಾಶೀಲತೆಯನ್ನು ಗುರುತಿಸಲು ಟ್ರಷರ್ ಹಂಟ್ ಮತ್ತು ಮೆಮೊರಿ ಪರೀಕ್ಷೆಗಳ ಆಟಗಳಿವೆ.

ತರಗತಿಯ ಕಲಿಕಾ ವಿಷಯಗಳನ್ನಾಧರಿಸಿದ ರಸಪ್ರಶ್ನೆಯು ಮಕ್ಕಳ ಜ್ಞಾನಕ್ಕೆ ಸಾಣೆ ಹಿಡಿಯುತ್ತದೆ. ಶಿಕ್ಷಕರು ಮತ್ತು ಮಕ್ಕಳ ಸಹಯೋಗದೊಂದಿಗೆ ಕಥೆಗಳನ್ನು ಬರೆಯುವುದು, ಪೋಷಕರು ಮತ್ತು ಮಕ್ಕಳು ಒಟ್ಟಿಗೆ ಸೇರಿ ಸಣ್ಣ ಕಥೆಗಳನ್ನು ಕಟ್ಟುವ ಸ್ಪರ್ಧೆಯಿಂದ ಪೋಷಕರು ಮತ್ತು ಮಕ್ಕಳ ಸಂಬಂಧ ಬಲಗೊಳ್ಳುತ್ತದೆ.

ಮಕ್ಕಳ ಉತ್ಸಾಹ

ಕಲಿಕಾ ಹಬ್ಬದ ಚಟುವಟಿಕೆಗಳು ಸರ್ಕಾರಿ ಶಾಲಾ ಮಕ್ಕಳಿಗೆ ಮಾತ್ರ ನಡೆಯುತ್ತವೆ. ಸರ್ಕಾರಿ ಶಾಲೆಯ ಕಿರಿಯ ಪ್ರಾಥಮಿಕ ಹಂತದ ಮಕ್ಕಳ ಕಲಿಕೆಯ ಬಗ್ಗೆ ಸಮುದಾಯದ ಗಮನ ಸೆಳೆಯುವಲ್ಲಿ ಈ ಕಲಿಕಾ ಹಬ್ಬ ಸಹಕಾರಿಯಾಗಿದೆ.

ಪ್ರತಿಭಾ ಕಾರಂಜಿಯಲ್ಲಿ ಸಾಂಸ್ಕೃತಿಕ ಆಯಾಮದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಮಕ್ಕಳಿಗೆ, ಕಲಿಕೆಯ ಸಾಫಲ್ಯತೆಯನ್ನು ಪ್ರದರ್ಶಿಸುವ ಅವಕಾಶವಾಗಿ ಈ ಕಲಿಕಾ ಹಬ್ಬ ರೂಪುಗೊಂಡಿದೆ. ಕ್ಲಸ್ಟರ್ ಹಂತದಲ್ಲಿ ಇತರ ಶಾಲೆಗಳಿಗಿಂತ ತನ್ನ ಶಾಲೆಯು ಕಲಿಕಾ ಮಟ್ಟದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿ ಸಾಗುತ್ತಿದೆಯೆಂದು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಿಳಿಯಲೂ ಈ ಕಲಿಕಾ ಹಬ್ಬ ಉತ್ತಮ ವೇದಿಕೆಯಾಗಿದೆ.

'ವಿಫಲತೆಗಳ ಬಗ್ಗೆ ಚಿಂತಿಸದಿರು'ಎಂಬಂತೆ ಸೋಲು-ಗೆಲುವುಗಳ ಸಮಾನ ಸ್ವೀಕಾರದ ಮನೋಭಾವವನ್ನು ಎಳೆಯ ಮಕ್ಕಳಲ್ಲಿ ಬೆಳೆಸಲು ಇಂತಹ ಚಟುವಟಿಕೆಗಳು ಬೇಕು.

ಸರ್ಕಾರಿ ಶಾಲೆಗಳ ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುವ, ದಾಖಲಾತಿಯನ್ನು ಸುಧಾರಿಸುವ, ಸಮುದಾಯದ ಜತೆಗೆ ಬಾಂಧವ್ಯ ವೃದ್ಧಿಸುವ ಸೇತುವಾಗಿ ಈ ಕಾರ್ಯಕ್ರಮವನ್ನು ನಾವೆಲ್ಲರೂ ಯಶಸ್ವಿಗೊಳಿಸೋಣವೆ?

ಮಂಕಾದ ಮಗುವಿನಲ್ಲಿ ನಗು ಅರಳಿಸಿ



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

• ನನಗೆ ಈ ವರ್ಷ ವಿಚ್ಛೇದನವಾಗಿದೆ. ಮಗಳ ಕಸ್ಟಡಿ ತಾಯಿಗೆ ದೊರೆತಿದೆ. ವಾರಕ್ಕೆ ಒಮ್ಮೆ ಭೇಟಿಯ ಅವಕಾಶ ನೀಡಲಾಗಿದೆ. ಮಗು ಮಂಕಾದಂತೆ ಅನಿಸುತ್ತಿದೆ. ಅವಳ ಬೆಳವಣಿಗೆಗೆ ತೊಂದರೆಯಾಗದಂತೆ ಹೇಗೆ ನೋಡಿಕೊಳ್ಳಬೇಕು? ಮಗಳ ವಯಸ್ಸು 11.

ಪಾಲಕರ ಇಂಥ ನಿರ್ಧಾರಗಳಿಂದ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮಗಳಾಗುತ್ತವೆ ಎನ್ನುವುದು ನಿಜ. ಸ್ನೇಹಿತರ ಎದುರಿಗೆ ಅವರಿಗೆ ಅವಮಾನವಾಗುತ್ತದೆ. ಅವರು ನಿರುತ್ತರಿಗಳಾಗುತ್ತಾರೆ. ಕುಗ್ಗುತ್ತಾರೆ. ತಮ್ಮದಲ್ಲದ ತಪ್ಪಿಗೆ ಅವರು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಇರಲಿ.

ಮಕ್ಕಳ ಮನಸ್ಥಿತಿಯನ್ನು ಅರಿತುಕೊಂಡು ವ್ಯವಧಾನದಿಂದ ವ್ಯವಹರಿಸುವ ಪಾಲಕರು ಕಡಿಮೆ. ಹಿರಿಯರಿಲ್ಲದ ಮನೆಯಲ್ಲಿ ನಿಜಕ್ಕೂ ತೊಂದರೆಯಾಗುವುದು ಪುಟ್ಟ ಮಕ್ಕಳಿಗೆ. ಮನೆತುಂಬಾ ಜನರಿರುವ ಸಂಸಾರದಲ್ಲಿ ಮಕ್ಕಳು ಆಡೋಡಿಕೊಂಡು ಬೆಳೆದುಬಿಡುತ್ತಾರೆ. ಅಜ್ಜ ಅಜ್ಜಿಯರಿಗೆ ಮಕ್ಕಳನ್ನು ಬೆಳೆಸುವ ವಿಷಯದಲ್ಲಿ ಸಾಕಷ್ಟು ಅನುಭವಗಳಾಗಿರುತ್ತವೆ. ಅದರ ಪ್ರಯೋಜನವು ಮೊಮ್ಮಕ್ಕಳಿಗೆ ಆಗುತ್ತದೆ.

ಸೋಜಿಗದ ವಿಷಯವೇನೆಂದರೆ, ಜೀವ ಜಗತ್ತಿನಲ್ಲಿ ಮನುಷ್ಯನನ್ನು ಬಿಟ್ಟು ಉಳಿದ ಎಲ್ಲಾ ಪ್ರಾಣಿಗಳಿಗೂ ತೀರಾ ಸಹಜವಾಗಿಯೇ ಪೇರೆಂಟಿಂಗ್ ಗೊತ್ತಿದೆ. ನಮಗೆ ಮಾತ್ರ ಸರಿಯಾದ ಪೇರೆಂಟಿಂಗ್ ಹೇಗೆನ್ನುವುದು ಗೊತ್ತಿಲ್ಲ. ಅದರ ಪರಿಣಾಮದಿಂದಾಗಿಯೇ ಇವತ್ತಿನ ಸಮಾಜ ಹೀಗಿದೆ.

ಪರಸ್ಪರ ಪ್ರೀತಿ ವಿಶ್ವಾಸದಿಂದ ಇರುವ ಪಾಲಕರ ನಡುವೆ ಬೆಳೆದ ಮಕ್ಕಳ ಮಾನಸಿಕ ಬೆಳವಣಿಗೆ ಹೆಚ್ಚು ಸಹಜವಾಗಿರುತ್ತದೆ. ಜಗಳಾವಾಡುವ, ಬಡಿದಾಡುವ, ದುರಭ್ಯಾಸವಿರುವ ಪಾಲಕರ ನಡುವೆ ಬೆಳೆದ ಮಕ್ಕಳ ಮನಸ್ಥಿತಿ ಗಾಸಿಗೊಂಡಿರುತ್ತದೆ. ಅವರು ಹೆಚ್ಚು ಅಸಮತೋಲನ ಮನಸ್ಥಿತಿಯನ್ನು ಹೊಂದಿರುತ್ತಾರೆ. ಯಾವಾಗಲೂ ಬದಲಾಗುತ್ತಿರುವ ಕಾಲವೂ ಈಗೀಗ ಹೆಚ್ಚು ಅವರಸರದಲ್ಲಿರುವಂತೆ ಕಾಣುತ್ತದೆ. ಬದಲಾವಣೆಗಳು ಯಾವಾಗಲೂ ಧನಾತ್ಮಕವಾಗಿಯೇ ಇರಬೇಕಂತಿಲ್ಲ. ಅವಘಡಗಳೂ ಬದಲಾವಣೆಯ ಭಾಗವೇ ಆಗಿವೆ.

ಮಗಳು ಮಂಕಾಗಿರುವುದಕ್ಕೆ ನೀವು ಬೇರೆಯಾಗಿದ್ದು ಮಾತ್ರವೇ ಕಾರಣವಾಗಿರಲಾರದು. ಅವಳಿಗೂ ವಯೋಸಹಜವಾದ ಆತಂಕಗಳಿರಬಹುದು. ಅವಳೂ ತನ್ನನ್ನು ತಾನು ಸಂತೈಸಿಕೊಂಡು ಬದುಕುವುದಕ್ಕೆ ಮೌನವಾಗಿ ಪ್ರಯತ್ನಿಸುತ್ತಿರಬಹುದು.

ಮಗಳನ್ನು ಭೇಟಿಯಾದಾಗ ಏನು ಮಾಡಬಹುದು?:

ಮಗಳನ್ನು ವಾರಕೊಮ್ಮೆ ಭೇಟಿ ನೀಡುವ ಅವಕಾಶ ಸಿಕ್ಕಿದೆ. ಸಾಧ್ಯವಾದಷ್ಟೂ ಸಹನೆಯಿಂದ, ಪ್ರೀತಿಯಿಂದ ನಡೆದುಕೊಳ್ಳಿ. ಅವಳ ತಾಯಿಯ ಬಗ್ಗೆ ಏನನ್ನೂ ಕೆಟ್ಟದ್ದಾಗಿ ಹೇಳಬೇಡಿ. ಆಕೆಯ ಬಗ್ಗೆ ಸಂಶಯದಿಂದಲೋ, ಅಸೂಯೆಯಿಂದಲೋ ಏನನ್ನೂ ವಿಚಾರಿಸಬೇಡಿ. ನಿಮ್ಮ ಹೆಂಡತಿ ನಿಮ್ಮ ಬಗ್ಗೆ ಏನನ್ನಾದರೂ ಕೆಟ್ಟದ್ದಾಗಿ ಮಗಳಿಗೆ ಹೇಳಿದ್ದಿರಬಹುದೇನೋ ಎನ್ನುವುದನ್ನೂ ವಿಚಾರಿಸಬೇಡಿ. ಮಗಳ ಮನಸ್ಸಿನ ಧಾವಂತಕ್ಕೆ ಸಾಂತ್ವನದ ಮಾತಾಡಿ. ಅಗತ್ಯವೆನಿಸಿದರೆ ಆಪ್ತಸಮಾಲೋಚಕರ ಬಳಿಗೆ ಕರೆದುಕೊಂಡು ಹೋಗಿ. ಅವಳ ಆಸೆ, ಅನಿಸಿಕೆಗಳನ್ನು ತಿಳಿದುಕೊಳ್ಳಿ. ಎಂಥದ್ದೇ ಸಂದರ್ಭದಲ್ಲಿಯೂ, ನೀವು ಅವಳಿಗೆ ನೆರಳಾಗಿ ಇರುತ್ತೀರಿ ಎನ್ನುವುದನ್ನು ಅವಳಿಗೆ ಮನದಟ್ಟು ಮಾಡಿ. ಅವಳ ಗೆಳೆಯರ ಬಗ್ಗೆ ತಿಳಿದುಕೊಳ್ಳಿ.

ಬದುಕಿನಲ್ಲಿ ಭರವಸೆ ಬರುವಂತೆ, ಆಕೆ ಏನನ್ನಾದರೂ ಸಾಧಿಸುವ ಸಾಧ್ಯತೆಗಳ ಬಗ್ಗೆ ತಿಳಿಸಿ ಹೇಳಿ. ಅವಳ ಕನಸುಗಳು ನನಸಾಗಲಿಕ್ಕೆ ನೀವು ಸಹಾಯಮಾಡುವುದಾಗಿ ಹೇಳಿ. ಅದರಂತೆ ನಡೆದುಕೊಳ್ಳಿ. ಅಪ್ಪಿತಪ್ಪಿಯೂ ಮನಸ್ಸಿಗೆ ನೋವಾಗುವ ಹಾಗೆ ಹಂಗಿಸಿ ಮಾತನಾಡಬೇಡಿ. ಆಗಾಗ ಉಪಯುಕ್ತವಾದ ಉಡುಗೊರೆಗಳನ್ನು ಕೊಡಲು ಪ್ರಯತ್ನಿಸಿ.

ಯಾವತ್ತಿದ್ದರೂ ಅವಳು ನಿಮ್ಮ ಬದುಕಿನ ಮೊದಲ ರಾಜಕುಮಾರಿ ಎನ್ನುವ ಹಾಗೆ ಅವಳೊಂದಿಗೆ ಅಭಿಮಾನದಿಂದ ಇರಿ. ಅವಳಿಗೆ ಅಗತ್ಯಕ್ಕಿಂತ ಹೆಚ್ಚು ಹಣವನ್ನು ಕೊಡಬೇಡಿ. ಅವಳ ಆಸೆ, ಅಭಿರುಚಿಗಳಿಗೆ, ಅವಳ ಸಾಧನೆಗೆ ಶಕ್ತಿಯಾಗಿ ಇರಿ. ಅವಳು ಕರೆದಲ್ಲೆಲ್ಲಾ ಜೊತೆಗೆ ಹೋಗಿ. ಅವಳಿಗೆ ಇರುಸು ಮುರುಸು ಆಗುವ ಕಡೆಗಳಿಗೆ ಹೋಗಬೇಡಿ.

ಒಟ್ಟಿನಲ್ಲಿ ನಿಮ್ಮ ಮಗಳು ಒಬ್ಬ ಒಳ್ಳೆಯ ವ್ಯಕ್ತಿಯಾಗಿ ರೂಪುಗೊಳ್ಳುವುದಕ್ಕೆ ನಿಮ್ಮಿಂದ ಏನೇನು ಸಾಧ್ಯವೋ ಅವೆಲ್ಲವನ್ನೂ ಮಾಡಿ. ಸಂಬಂಧಗಳ ಬಗ್ಗೆ ನಂಬಿಕೆ ಬರುವಂತೆ ಸಹಜವಾಗಿ ನಡೆದುಕೊಳ್ಳಿ. ಒಳ್ಳೆಯದಾಗಲಿ.

ವಿದ್ಯಾರ್ಥಿ ವೇತನ ಕೈಪಿಡಿ

ವೆಲ್ಸ್ ಮೌಂಟನ್ ಫೌಂಡೇಷನ್ ಸ್ಕಾಲರ್‌ಷಿಪ್

ಪದವಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡುವ ಅವಕಾಶ ಇದಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲು ಆರ್ಥಿಕ ಸಹಾಯ ನೀಡಲಿದೆ.

ಅರ್ಹತೆ: ಅಭ್ಯರ್ಥಿಗಳು 2025ರ ಆಗಸ್ಟ್ 1ಕ್ಕೆ 35 ವರ್ಷ ವಯೋಮಿತಿಯಲ್ಲಿರಬೇಕು. ಅಂತಿಮ ವರ್ಷದಲ್ಲಿ ಸರಾಸರಿಗಿಂತ ಹೆಚ್ಚಿನ ಶ್ರೇಣಿಗಳನ್ನು ಪಡೆದುಕೊಂಡಿರಬೇಕು. ಪದವಿ ಕೋರ್ಸ್‌ಗೆ ಈಗಾಗಲೇ ದಾಖಲಾಗಿರಬೇಕು. ಪದವಿಯ ಬಳಿಕ ತಮ್ಮ ತಾಯ್ನಾಡಿನಲ್ಲಿಯೇ ನೆಲೆಸಿ ಕೆಲಸ ಮಾಡಲು ಯೋಜಿಸಿರಬೇಕು. ಅಧ್ಯಯನಕ್ಕೆ ಬದ್ಧವಾಗಿರಬೇಕು.

ಆರ್ಥಿಕ ಸಹಾಯ: ವಾರ್ಷಿಕ ಯುಎಸ್‌ಡಿ $3,000ವರೆಗಿನ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 01-03-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/pjvi/WMFS1

ಸೌತ್ ಏಷಿಯಾ ಅಂಡರ್‌ಗ್ರಾಜುಯೇಟ್

ಯುನಿವರ್ಸಿಟಿ ಆಫ್ ನೈಟಿಂಗ್‌ಹ್ಯಾಮ್ ನೀಡುವ ಅವಕಾಶವಾಗಿದೆ.

ಅರ್ಹತೆ: ಅಭ್ಯರ್ಥಿಗಳು 'ಸಾಗರೋತ್ತರ' ವಿದ್ಯಾರ್ಥಿಗಳಾಗಿರಬೇಕು. 2025ರ ಸೆಪ್ಟೆಂಬರ್‌ಗೆ ಯಾವುದಾದರೂ ಪೂರ್ಣಾವಧಿಯ ಪದವಿ ಕೋರ್ಸ್‌ಗೆ ದಾಖಲಾಗಬೇಕು. ಇಂಗ್ಲಿಷ್ ಭಾಷೆಯ ಸರಿಯಾದ ಬಳಕೆಯ ಜ್ಞಾನವನ್ನು ಹೊಂದಿರುವವರಾಗಿರಬೇಕು.

ಆರ್ಥಿಕ ಸಹಾಯ: ಬೋಧನಾ ಶುಲ್ಕಗಳಿಗಾಗಿ ಮೊದಲ ವರ್ಷದಲ್ಲಿ 6,000 ಜಿಬಿಪಿ.

ಅರ್ಜಿ ಸಲ್ಲಿಸಲು ಕೊನೆ ದಿನ:19-03-2025

ಅರ್ಜಿ ಸಲ್ಲಿಸುವ ವಿಧಾನ:ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/pjvi/NUES1

ಇಂಡಿಯಾ ಹೈ ಫ್ಲೈಯರ್ಸ್

ಇದು ಬರ್ಮಿಂಗ್‌ಹ್ಯಾಮ್ ಯುನಿವರ್ಸಿಟಿ ಒದಗಿಸುವ ಅವಕಾಶವಾಗಿದೆ. 2025-26ರ ಶೈಕ್ಷಣಿಕ ವರ್ಷಕ್ಕೆ ಒಟ್ಟು 20 ಸ್ಕಾಲರ್‌ಷಿಪ್‌ಗಳು ಲಭ್ಯವಿರುತ್ತವೆ.

ಅರ್ಹತೆ: ಅಭ್ಯರ್ಥಿಗಳು ಭಾರತದ ಕಾಯಂ ನಿವಾಸಿಯಾಗಿದ್ದು , ಪೂರ್ಣಾವಧಿಯ ಪದವಿ ಕೋರ್ಸ್‌ಗೆ ಸೇರುವ ಪ್ರಸ್ತಾವವನ್ನು ಸಲ್ಲಿಸಬೇಕು. ಸಾಗರೋತ್ತರ ಶುಲ್ಕ ಪಾವತಿಸುವ ವಿದ್ಯಾರ್ಥಿ ಎಂದು ವರ್ಗೀಕರಿಸಲ್ಪಟ್ಟಿರಬೇಕು.

ಆರ್ಥಿಕ ಸಹಾಯ: ಪದವಿ ಅಧ್ಯಯನದ ಮೊದಲನೆ ವರ್ಷಕ್ಕೆ ಜಿಬಿಪಿ 5,000 ಮೊತ್ತವನ್ನು ಒದಗಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 31-05-2025

ಅರ್ಜಿ ಸಲ್ಲಿಸುವ ವಿಧಾನ: ಅರ್ಜಿಗಳನ್ನು ಸ್ಥಳೀಯ ಪ್ರತಿನಿಧಿಗಳು, ಪಾಲುದಾರ ಶಾಲೆಗಳ ಮೂಲಕ ಸಲ್ಲಿಸಬಹುದು.

ಮಾಹಿತಿಗೆ: Short Url: www.b4s.in/pjvi/IHFS1

ಕ್ವಾಡ್ ಫೆಲೋಷಿಪ್

ಕ್ವಾಡ್ ಫೆಲೋಷಿಪ್ 2025ಅನ್ನು ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಅಮೆರಿಕ ಸರ್ಕಾರಗಳು ಪ್ರಾರಂಭಿಸಿದ್ದು, ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಜುಕೇಷನ್ (ಐಐಇ) ಇದನ್ನು ನಿರ್ವಹಿಸುತ್ತದೆ. ಈ ಕ್ವಾಡ್ ದೇಶಗಳ ಮತ್ತು ಹತ್ತು ಅಸಿಯಾನ್ (ಎಎಸ್‌ಇಎಎನ್) ಸದಸ್ಯ ರಾಷ್ಟ್ರಗಳ ಭವಿಷ್ಯದ ವಿಜ್ಞಾನಿಗಳು ಮತ್ತು ತಂತ್ರಜ್ಞರನ್ನು ಸಂಪರ್ಕಿಸುವ ಗುರಿಯನ್ನು ಇದು ಹೊಂದಿದೆ.

ಅರ್ಹತೆ: ಭಾರತ ಸೇರಿದಂತೆ ನಿರ್ದಿಷ್ಟ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಪೌರತ್ವ ಪಡೆದಿರಬೇಕು. ಕನಿಷ್ಠ 18 ವಯಸ್ಸಿನವರಾಗಿರಬೇಕು. 2025ರ ಆಗಸ್ಟ್‌ನೊಳಗೆ ಸ್ಟೆಮ್ ಕ್ಷೇತ್ರದಲ್ಲಿ ಪದವಿ ಅಥವಾ ತತ್ಸಮಾನ ಪದವಿಯನ್ನು ಪಡೆದಿರಬೇಕು.

ಆರ್ಥಿಕ ಸಹಾಯ: $40,000ದ ಒಂದು-ಬಾರಿಯ ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳನ್ನು ಫೆಲೋಷಿಪ್ ಒದಗಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ: 03-03-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ

ಮಾಹಿತಿಗೆ: Short Url:www.b4s.in/pjvi/QUFD1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

17) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?

ಉತ್ತರ:– ಸೂರತ್

18)ಯಾವ ಯಾವ ರಾಜ್ಯದಲ್ಲಿ ಕೃಷಿಗಾಗಿ ದೊರೆಯದ ಹೆಚ್ಚು ಭೂಮಿ ಇದೆ?

ಉತ್ತರ:– ಕೃಷಿಗಾಗಿ ದೊರೆಯದ ಹೆಚ್ಚು ಭೂಮಿ ಹೆಚ್ಚಾಗಿ ಅಸ್ಸಾಂ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಕಂಡುಬರುವುದು.

19) ಭಾರತವು ಸುಮಾರು ಎಷ್ಟು ಬಿಲಿಯನ್ ಕಿಲೋವ್ಯಾಟ್ಸ್ ಜಲ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆಯೆಂದು ಅಂದಾಜು ಮಾಡಲಾಗಿದೆ.?

ಉತ್ತರ:– 410 ಬಿಲಿಯನ್ ಕಿಲೋವ್ಯಾಟ್ಸ್

20) ಅನಿಬೆಸೆಂಟ್ ಅವರು 1916ರ ಆರಂಭಿಸಿದ ಚಳವಳಿ ಯಾವುದು?

ಉತ್ತರ:– ಅನಿಬೆಸೆಂಟ್ ಅವರು 1916ರಲ್ಲಿ ಮದರಾಸು ಪ್ರಾಂತ್ಯದಲ್ಲಿ ಹೋಮ್ ರೂಲ್ ಲೀಗ್‌ನ್ನು ಪ್ರಾರಂಭಿಸಿದರು

21) ಉಷ್ಣ ವಲಯದ ನಿತ್ಯ ಹರಿದ್ವರ್ಣದ ಅರಣ್ಯಗಳು ಎಲ್ಲಿ ಕಂಡುಬರುತ್ತವೆ?

ಉತ್ತರ : ಈ ವಿಧದ ಅರಣ್ಯಗಳು 250 ಸೆಂ.ಮೀ. ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ

22) ನಮ್ಮ ದೇಶದಲ್ಲಿ ದೊರೆಯುವ ಒಟ್ಟು ಜಲ ಸಂಪನ್ಮೂಲನವನ್ನು ಬಳಸಿ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ನೀಡಬಹುದು?

ಉತ್ತರ:– 140 ದಶಲಕ್ಷ ಹೆಕ್ಟೇರ್ ಪ್ರದೇಶ

23) ರಾಜಾರಾಮ ಮೋಹನ ರಾಯರು ಯಾವೆಲ್ಲಾ ಸಂಸ್ಥೆಗಳನ್ನು ಆರಂಭಿಸಿದರು?

ಉತ್ತರ:– ರಾಜಾರಾಮ ಮೋಹನ ರಾಯರು ತಮ್ಮ ಸ್ನೇಹಿತರೊಡಗೂಡಿ ಕಲ್ಕತ್ತಾದಲ್ಲಿ 'ಆತ್ಮೀಯ ಸಭಾ' ಪ್ರಾರಂಭಿಸಿದರು. ಈ ಸಭೆಯ ಪ್ರಮುಖ ಆಶಯಗಳೆಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗೊಳಿಸುವುದು. 1828ರಲ್ಲಿ ಬ್ರಹ್ಮ ಸಮಾಜವನ್ನು ಪ್ರಾರಂಭಿಸಿದರು

24) ಸತಿ ನಿಷೇಧದ ಕುರಿತು ಬರೆಯಿರಿ

ಉತ್ತರ:– ರಾಜಾರಾಮ್ ಮೋಹನರಾಯರ ಪ್ರಯತ್ನದಿಂದ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿ ಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.

25) 'ಅಮರ ಸುಳ್ಯ' ಬಂಡಾಯದ ಕೇಂದ್ರಗಳು ಯಾವುವು?

ಉತ್ತರ:– ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು.

26) ಸ್ವಾತಂತ್ರ್ಯ ನಂತರ ಭಾರತದ ಸರಕಾರವು ರಚಿಸಿದ ಯೋಜನಾ ಆಯೋಗದ ಅಧ್ಯಕ್ಷರು ಯಾರಾಗಿರುತ್ತಿದ್ದರು?

ಉತ್ತರ:– ಪ್ರಧಾನ ಮಂತ್ರಿ

27) 1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ

ಉತ್ತರ:– 1935ರ ಭಾರತ ಸರ್ಕಾರದ ಕಾಯ್ದೆ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.

2. ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು (Dyarchy) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

28) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ

ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು),
ಬ) ಹಿಮಾಚಲ (ಮಧ್ಯ ಹಿಮಾಲಯ),
ಕ) ಮಹಾಹಿಮಾಲಯ (ಹಿಮಾದ್ರಿ)

29) ಚಾಲ್ತಿ ಖಾತೆ ಕುರಿತು ಬರೆಯಿರಿ

ಉತ್ತರ: ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ (Contra) ವ್ಯವಹಾರದ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯ, ಹಣವನ್ನು ದಿನದಲ್ಲಿ ಎಷ್ಟು ಬಾರಿಯಾದರೂ ತೆಗೆಯಬಹುದು ಹಾಗೂ ಎಷ್ಟು ಬಾರಿಯಾದರೂ ಖಾತೆಗೆ ತುಂಬಬಹುದು, ಈ ಖಾತೆಯಲ್ಲಿರುವ ಹಣಕ್ಕೆ ಬಡ್ಡಿಯನ್ನು ಕೊಡುವುದಿಲ್ಲ. ಆದರೆ ಸೇವೆಗೆ ಸೇವಾ ಶುಲ್ಕವನ್ನು ವಸೂಲು ಮಾಡಲಾಗುತ್ತದೆ.

30) ಪ್ಲಾಸಿ ಕದನದ ಪರಿಣಾಮಗಳೇನು?

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

PUC MATHS

REVISION : MODEL QUESTIONS

43. Solve the following system of equations by matrix method: $x + y + z = 6$ $y = 3z = 11$ $x - 2y + z = 0$.

Soln:- *(……Contd)*

$$adj\,A = \begin{bmatrix} 7 & 3 & -1 \\ -3 & 0 & 3 \\ 2 & -3 & 1 \end{bmatrix} \Rightarrow A^{-1} = \frac{adj\,A}{|A|}$$

$$X = A^{-1}B$$

$$\Rightarrow \frac{1}{9}\begin{bmatrix} 7 & 3 & -1 \\ -3 & 0 & 3 \\ 2 & -3 & 1 \end{bmatrix}\begin{bmatrix} 6 \\ 11 \\ 0 \end{bmatrix} \Rightarrow \frac{1}{9}\begin{bmatrix} 9 \\ 18 \\ 27 \end{bmatrix}$$

$$\Rightarrow x = 1, \quad y = 2, \quad z = 3$$

44. If $y = 5\cos(\log x) + 7\sin(\log x)$, show that $x^2y_2 + xy_1 + y = 0$.

Ans:- Consider, $y = 5\cos(\log x) + 7\sin(\log x)$

D. w. r. to x

$y_1 = 5(-\sin(\log x)\,1/x + 7\cos(\log x))\,1/x$

$\Rightarrow xy_1 = 5[-\sin(\log x) + 7\cos(\log x)]$ D. w.r.t x

$\Rightarrow xy_2 + xy_1 = 5[-\cos(\log x)1/x + 7(-\sin(\log x)\,1/x)]$

$\Rightarrow x^2y_2 + xy_1 = -(5\cos(\log x) + 7\sin(\log x))$

$\Rightarrow x^2y_2 + xy_1 = -y \Rightarrow x^2y_2 + xy_1 + y = 0$

45. The length of x of a rectangle is decreasing at the rate of 3 cm/min & width y is increasing at the rate of 2 cm/min when x = 10 cm and y = 6 cm. Find the rates of change of –
i) the perimeter and ii) the area of the rectangle.

Ans :– Given $\frac{dx}{dt} = -3$; $\frac{dy}{dt} = 2$

Perimeter, $P = 2(x + y)$ d. w.r.t. t

$$\frac{dp}{dt} = 2\left(\frac{dx}{dt} + \frac{dy}{dt}\right)$$

$$\frac{dp}{dt} = 2(-3 + 2) = -2\ cm/min$$

∴ Perimeter of rectangle is decreasing at the rate of 2 cm/min

$$d.w.r.t.x\ \frac{dA}{dt} = x\frac{dy}{dt} + y\frac{dx}{dt}$$

$$\frac{dA}{dt} = 10(2) + 6(-3) = 2\ cm/min$$

∴ Area is increasing at 2cm / min

46. Using integration find the area of the region bounded by the triangle whose vertices are (-1, 0) (1, 3) & (3, 2)

Ans:-



Equation of $A(-1,0); B(1,3) = \frac{y_2 - y_1}{x_2 - x_1} = \frac{y - y_1}{x - x_1}$

$$= \frac{3-0}{1-(-1)} = \frac{y-0}{x-(-1)} = \frac{3(x+1)}{2} = y$$

$$y = \frac{3x+3}{2}$$

||ly eqn of AC is $y = \frac{-x+7}{2}$ & eqn of BC is $y = \frac{x+1}{2}$

Required area of triangle ABC

$$= \int_{-1}^{1}\frac{3x+3}{2}dx + \int_{1}^{3}\frac{-x+7}{2}dx - \int_{-1}^{3}\frac{x+1}{2}dx$$

$$\Rightarrow \frac{3}{2}\left[\frac{x^2}{2} + x\right]_{-1}^{1} + \left[\frac{-x^2}{4} + \frac{7x}{2}\right]_{1}^{3} - \left[\frac{x^2}{4} + \frac{1}{2}x\right]_{-1}^{3}$$

$$\Rightarrow \frac{3}{2}(2) + \frac{20}{4} - 4 = 4\ sq\ units$$

47.

Show that

(i) $\sin^{-1}(2x\sqrt{1-x^2}) = 2\sin^{-1}x$

Soln:- LHS

$\sin^{-1}(2x\sqrt{1-x^2})$

Putting $x = \sin\theta$

$= \sin^{-1}(2\sin\theta\sqrt{1-\sin^2\theta})$

$= \sin^{-1}(2\sin\theta\sqrt{\cos^2\theta})$ *(As $1 - \sin^2\theta = \cos^2\theta$)*

$= \sin^{-1}(2\sin\theta\cos\theta)$

$= \sin^{-1}(\sin 2\theta)$ *(Using $\sin 2x = 2\sin x\cos x$)*

48. Find $\int\frac{dx}{\sqrt{a^2-x^2}}$ hence evaluate $\int\frac{dx}{7-6x-x^2}$

Ans:- Let $x = a\sin\theta \Rightarrow dx = a\cos\theta\,d\theta$

$\theta = \sin^{-1}\frac{x}{a}$

$$\int\frac{a\cos\theta\,d\theta}{\sqrt{a^2-a^2\sin^2\theta}} = \frac{a}{a}\int\frac{\cos\theta\,d\theta}{\sqrt{1-\sin^2\theta}} = \int d\theta = \theta + c = \sin^{-1}\frac{x}{a} + c$$

$$\int\frac{dx}{\sqrt{7-6x-x^2}} = \int\frac{dx}{\sqrt{16-(x+3)^2}} = \sin^{-1}\left(\frac{x+3}{4}\right) + c$$

49. For the given curve: $y = 5x - 2x^3$, when x increases at the rate of 2 units/sec, then how fast is the slope of curve changes when x = 3?

Ans: Given that, $y = 5x - 2x^3$

Then, the slope of the curve, $dy/dx = 5 - 6x^2$

$\Rightarrow d/dt\,[dy/dx] = -12x.\ dx/dt$

$= -12(3)(2)$

$= -72$ units per second

Hence, the slope of the curve is decreasing at the rate of 72 units per second when x is increasing at the rate of 2 units per second.

50. The probability of solving the specific problem independently by the persons' A and B are 1/2 and 1/3 respectively. In case, if both the persons try to solve the problem independently, then calculate the probability that the problem is solved. *(Contd...)*

‘ಚಿಯರ್ ಲೀಡರ್‌ನಂತೆ ಗೌಡರ ವರ್ತನೆ’

ಜೆಡಿಎಸ್ ವರಿಷ್ಠರ ವಿರುದ್ಧ ಸಿ.ಎಂ ಸಿದ್ದರಾಮಯ್ಯ ವಾಗ್ದಾಳಿ • ರಾಜ್ಯದ ಹಿತರಕ್ಷಣೆಗೆ ಸಂಸತ್‌ನಲ್ಲಿ ದನಿ ಎತ್ತಲು ಆಗ್ರಹ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಕೇಂದ್ರದಲ್ಲಿ ಯಾವ ಪಕ್ಷದ ಸರ್ಕಾರ ಇದ್ದರೂ ಕರ್ನಾಟಕದ ಹಿತಾಸಕ್ತಿಯ ರಕ್ಷಣೆಯ ಪ್ರಶ್ನೆ ಎದುರಾದಾಗ ಮುಲಾಜಿಗೆ ಬೀಳದೆ ದನಿ ಎತ್ತುತ್ತಾ ಬಂದ ನೀವು, ಈಗ ಬಿಜೆಪಿ ಮತ್ತು ನರೇಂದ್ರ ಮೋದಿಯವರ ‘ಚಿಯರ್ ಲೀಡರ್’ ರೀತಿ ವರ್ತಿಸುತ್ತಿದ್ದೀರಿ’ ಎಂದು ಜೆಡಿಎಸ್ ರಾಷ್ಟ್ರೀಯ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಉದ್ದೇಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಗೋದಾವರಿ–ಕಾವೇರಿ ನದಿ ಜೋಡಣೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ರಾಜ್ಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಪಕ್ಷಾತೀತವಾಗಿ ಹೋರಾಡಲು ಸಿದ್ಧ’ ಎಂಬ ದೇವೇಗೌಡರ ಹೇಳಿಕೆಗೆ ಮಾಧ್ಯಮ ಪ್ರಕಟಣೆಯ ಮೂಲಕ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ನೀರಾವರಿ ಯೋಜನೆಯ ಬಗ್ಗೆ ನಿಮ್ಮ ಕಳಕಳಿಗೆ ನಮ್ಮ ಸಂಪೂರ್ಣ ಸಹಕಾರ ಇದೆ. ಈ ವಿಷಯದಲ್ಲಿ ನೀವು ನಡೆಸುವ ಹೋರಾಟಕ್ಕೆ ನಾನು ಮತ್ತು ಡಿ.ಕೆ. ಶಿವಕುಮಾರ್ ಮಾತ್ರವಲ್ಲ ಇಡೀ ಕರ್ನಾಟಕ ನಿಮ್ಮ ಜೊತೆ ಇರುತ್ತದೆ. ಆದರೆ, ಹೊಸ ನೀರಾವರಿ ಯೋಜನೆಗಳನ್ನು ಆರಂಭಿಸುವ ಮೊದಲು ಅಪೂರ್ಣ ಸ್ಥಿತಿಯಲ್ಲಿರುವ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ನಿಮ್ಮ ಸಹಕಾರ ಇರಲಿ’ ಎಂದು ದೇವೇಗೌಡರಿಗೆ ಮನವಿ ಮಾಡಿದ್ದಾರೆ.

‘ರಾಜ್ಯದ ಹಿತಾಸಕ್ತಿ ರಕ್ಷಣೆಯ ಪ್ರಶ್ನೆ ಎದುರಾದ ಸಂದರ್ಭದಲ್ಲೆಲ್ಲ ಒಬ್ಬ ಮುತ್ಸದ್ದಿಯಾಗಿ, ಹೆಮ್ಮೆಯ ಕನ್ನಡಿಗನಾಗಿ ಹೋರಾಟ ನಡೆಸಿದ್ದನ್ನು ಜನರು ಗಮನಿಸಿದ್ದಾರೆ. ಆದರೆ, ಇತ್ತೀಚೆಗೆ ನೀವು ಮತ್ತು ನಿಮ್ಮ ಪಕ್ಷ ಕೇಂದ್ರ ಸರ್ಕಾರದ ವಕ್ತಾರರಂತೆ ಪಕ್ಷಪಾತಿಯಾಗಿ ವರ್ತಿಸುತ್ತಿರುವುದನ್ನು ಕೂಡಾ ನನ್ನನ್ನೂ ಸೇರಿದಂತೆ ಏಳುಕೋಟಿ ಕನ್ನಡಿಗರು ಗಮನಿಸುತ್ತಿದ್ದಾರೆ. ಕೇಂದ್ರ ಸಂಪುಟದಲ್ಲಿ ಮಗನನ್ನು ಸಚಿವನನ್ನಾಗಿ ಮಾಡಲು ಗೌಡರು ಇಷ್ಟೊಂದು ರಾಜಿ ಮಾಡಿಕೊಳ್ಳುವ ಅಗತ್ಯ ಇತ್ತಾ ಎಂದು ಜನ ಪ್ರಶ್ನಿಸುತ್ತಿದ್ದಾರೆ’ ಎಂದಿದ್ದಾರೆ.

‘ನೀರಾವರಿ ವಿಚಾರದಲ್ಲಿ ನ್ಯಾಯ ಪಕ್ಷಪಾತಿಯಾಗಿ ಕರ್ನಾಟಕದ ಹಿತಾಸಕ್ತಿಯ ರಕ್ಷಣೆ ಮಾಡಬೇಕಾಗಿದ್ದ ಕೇಂದ್ರದ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಸತತವಾಗಿ ಕನ್ನಡಿಗರ ಹಿತವನ್ನು ಬಲಿಗೊಡಲು ಹೊರಟಿರುವುದನ್ನು ನಿಮಗೆ ನಾನು ಬಿಡಿಸಿ ಹೇಳಬೇಕಾಗಿಲ್ಲ. ಇನ್ನು ತೆರಿಗೆ ಹಂಚಿಕೆ, ಪ್ರಕೃತಿ ವಿಕೋಪ ಪರಿಹಾರ, ಕುಡಿಯುವ ನೀರು ಪೂರೈಕೆ, ರೈಲ್ವೆ ಯೋಜನೆಗಳ ವಿಚಾರದಲ್ಲಿಯೂ ಕೇಂದ್ರ ಸರ್ಕಾರ ಕರ್ನಾಟಕವನ್ನು ಶತ್ರು ರಾಜ್ಯದಂತೆ ನಡೆಸಿಕೊಳ್ಳುತ್ತಿದೆ. ಈ ವಿಚಾರಗಳು ಕೂಡಾ ನಿಮಗೆ ಗೊತ್ತಿರುವುದರಿಂದ ಸಂಸತ್‌ನಲ್ಲಿ ಈ ಬಗ್ಗೆ ನೀವು ದನಿ ಎತ್ತುತ್ತೀರಿ ಎಂದು ರಾಜ್ಯದ ಜನರು ನಿರೀಕ್ಷಿಸಿದ್ದರು’ ಎಂದೂ ಹೇಳಿದ್ದಾರೆ.

‘ದೈಹಿಕವಾಗಿ ಸ್ವಲ್ಪ ಕುಗ್ಗಿದಂತೆ ಕಂಡರೂ ಮಾನಸಿಕವಾಗಿ ನೀವಿನ್ನೂ ದೃಢವಾಗಿದ್ದೀರಿ. ದಯವಿಟ್ಟು ಈಗಲಾದರೂ ಪಕ್ಷ ರಾಜಕಾರಣವನ್ನು ಮೀರಿ ಒಬ್ಬ ಮುತ್ಸದ್ದಿ ನಾಯಕನ ರೀತಿಯಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕದ ಹಿತರಕ್ಷಣೆಗೆ ಮುಂದಾಗಬೇಕು’ ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

‘ಅಧಿಕಾರದಲ್ಲಿದ್ದು ಹೋರಾಟ ಯಾಕೆ?’

‘ರಾಜ್ಯದ ನೆಲ, ಜಲ ಹಿತಕ್ಕಾಗಿ ನಾವು ಬದ್ಧವಾಗಿದ್ದೇವೆ. ಅವರು ಅಧಿಕಾರದಲ್ಲಿ ಇರುವಾಗ ಹೋರಾಟ ಯಾಕೆ ಮಾಡಬೇಕು’ ಎಂದು ಎಚ್.ಡಿ. ದೇವೇಗೌಡರನ್ನು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, ‘ಮೇಕೆದಾಟು ಯೋಜನೆಗೆ ಒಂದೇ ದಿನದಲ್ಲಿ ಸಹಿ ಹಾಕಿಸುವುದಾಗಿ ದೇವೇಗೌಡರು ಹೇಳಿದ್ದರು. ಮಹದಾಯಿ ವಿಚಾರವಾಗಿ ನಾವು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೆವು. ನೀರಾವರಿ ಯೋಜನೆಗಳ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ, ನಮಗೆ ಅದರ ಅಗತ್ಯವಿಲ್ಲ. ಅವರಿಗೆ ರಾಜಕಾರಣ ಮಾಡಿ ರೂಢಿ ಇರಬಹುದು’ ಎಂದು ಅವರು ತಿಳಿಸಿದರು.

‘ಭದ್ರಾ ಮೇಲ್ದಂಡೆ ಯೋಜನೆಗೆ ₹ 5 ಸಾವಿರ ಕೋಟಿ ಘೋಷಣೆ ಮಾಡಿದ್ದೀರಿ. ಅದನ್ನು ಕೊಟ್ಟಿಲ್ಲ ಎಂದು ಸಂಸತ್ತಿನಲ್ಲಿ ಎಂದಾದರೂ ಪ್ರಶ್ನೆ ಮಾಡಿದ್ದಾರಾ? ದೇವೇಗೌಡರು, ಕುಮಾರಸ್ವಾಮಿ, ಕೇಂದ್ರ ಸಚಿವರು, ಸಂಸದರು ಈ ಬಗ್ಗೆ ಧ್ವನಿ ಎತ್ತುತ್ತಾರೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೆ. ಆ ಕೆಲಸದಲ್ಲೂ ವಿಫಲರಾಗಿದ್ದಾರೆ. ಮೊದಲು ಈ ಕೆಲಸ ಮಾಡಲಿ’ ಎಂದರು.

ಮಸ್ತಕಾಭಿಷೇಕ

ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಭಂಡಾರ ಬಸದಿಯ ಚವ್ವೀಸ ತೀರ್ಥಂಕರರ ಸನ್ನಿಧಿಯ ಪ್ರಾಂಗಣದಲ್ಲಿ 11.5 ಅಡಿ ಎತ್ತರದ ಚಿಕ್ಕ ಬಾಹುಬಲಿಯ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದು, ಭಾನುವಾರ ಪ್ರಥಮ ಮಸ್ತಕಾಭಿಷೇಕ ನಡೆಯಿತು. ವಿಂಧ್ಯಗಿರಿ ಮೆಟ್ಟಿಲುಗಳನ್ನು ಹತ್ತಲಾಗದ ಭಕ್ತರು ನಿರಾಸೆಯಿಂದ ಮರಳಬಾರದು ಎಂಬ ಉದ್ದೇಶದಿಂದ ಈ ಮೂರ್ತಿ ಪ್ರತಿಷ್ಠಾಪಿಸಲಾಗಿದೆ.

ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಭಾನುವಾರ ಚಿತ್ರನಟ ಡಾಲಿ ಧನಂಜಯ ಅವರು ವೈದ್ಯೆ ಧನ್ಯತಾ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ

‘ಸಿದ್ದರಾಮಯ್ಯ ನಮ್ಮ ಪಕ್ಷದ ನಾಯಕರು’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಸಿದ್ದರಾಮಯ್ಯ ನಮ್ಮ ಪಕ್ಷದ ನಾಯಕರು. ಅದರಲ್ಲಿ ಯಾವುದೇ ಪ್ರಶ್ನೆ ಇಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆ ಮೂಲಕ ಸಿದ್ದರಾಮಯ್ಯ ಪರ ಕೂಗೆಬ್ಬಿಸುತ್ತಿರುವ ಸಚಿವರು, ಶಾಸಕರನ್ನು ಮೌನವಾಗಿರುವಂತೆ ಪರೋಕ್ಷವಾಗಿ ಸಂದೇಶ ರವಾನಿಸಿದ್ದಾರೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ದಿನಬೆಳಗಾದರೆ ಸಿದ್ದರಾಮಯ್ಯ ಅವರ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವುದು ಬೇಡ’ ಎಂದರು.

‘ಸಿದ್ದರಾಮಯ್ಯ ಅವರು ಪಕ್ಷಕ್ಕೆ ಅನಿವಾರ್ಯ’ ಎಂಬ ಹೇಳಿಕೆ ಬಗ್ಗೆ ಕೇಳಿದಾಗ, ‘ಸಿದ್ದರಾಮಯ್ಯ ಅವರು ಎಲ್ಲ ಚುನಾವಣೆಗಳಿಗೂ ಬೇಕು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ವಿಧಾನ ಸಭೆ, ಸಂಸತ್ ಚುನಾವಣೆ ಎಲ್ಲದಕ್ಕೂ ಬೇಕು. ಅವರನ್ನು ಪಕ್ಷ ಎರಡು ಬಾರಿ ಮುಖ್ಯಮಂತ್ರಿ ಮಾಡಿದೆ. ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಉತ್ತಮ ಕೆಲಸ ಮಾಡುತ್ತಿರುವ ಅವರ ಹೆಸರು ಮಾಧ್ಯಮಗಳಿಗೆ ಆಹಾರವಾಗುವಂತೆ ಗೊಂದಲದ ಹೇಳಿಕೆ ನೀಡುವುದು ಬೇಡ’ ಎಂದರು.

‘ಪಕ್ಷದಲ್ಲಿ ಗೊಂದಲದ ಹೇಳಿಕೆ ಯಾಕೆ’ ಎಂದು ಕೇಳಿದಾಗ, ‘ಯಾವುದೇ ಗೊಂದಲ ಇಲ್ಲ. ಕಾಂಗ್ರೆಸ್ ಪಕ್ಷ ದಿನ ನಿತ್ಯ ಎಲ್ಲವನ್ನೂ ಗಮನಿಸುತ್ತಿದೆ’ ಎಂದು ತಿಳಿಸಿದರು.

‘ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗಿ’

‘ಯಾವುದೇ ಕ್ಷಣದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬಹುದು. ಹೀಗಾಗಿ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಸಜ್ಜಾಗಬೇಕು’ ಎಂದು ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಎಎಪಿ ತ್ಯಜಿಸಿದ್ದ ಬ್ರಿಜೇಶ್ ಕಾಳಪ್ಪ ಮತ್ತು ಮಾಜಿ ಸಂಸದ ಜೆಡಿಎಸ್‌ನ ಎಲ್.ಆರ್. ಶಿವರಾಮೇಗೌಡ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಶಿವಕುಮಾರ್, ‘ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಹಲವು ನಾಯಕರು ಹಂತ ಹಂತವಾಗಿ ಕಾಂಗ್ರೆಸ್ ಪಕ್ಷ ಸೇರಲಿದ್ದಾರೆ’ ಎಂದರು.

‘ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಸದ್ಯದಲ್ಲಿ ಸೂಚನೆ ಬರುವ ಸಾಧ್ಯತೆ ಇದೆ. ಬಿಬಿಎಂಪಿ ಚುನಾವಣೆ ಕೂಡಾ ನಡೆಸಬೇಕಾಗಿದ್ದು ಗ್ರೇಟರ್ ಬೆಂಗಳೂರು ವಿಚಾರವಾಗಿ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ’ ಎಂದರು.

‘ಈ ಚುನಾವಣೆಗಳ ಸಿದ್ಧತೆಗಾಗಿ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಉಪಾಧ್ಯಕ್ಷರುಗಳನ್ನು ಸೇರಿಸಿಕೊಂಡು ವಿಭಾಗವಾರು ಸಮಿತಿ ರಚಿಸಲಾಗುವುದು. ಈ ಸಮಿತಿ ಮಾರ್ಚ್ ಒಳಗಾಗಿ ರಾಜ್ಯ ಪ್ರವಾಸ ಮಾಡಿ ನಾಯಕರ ಮಧ್ಯೆ ಹೊಂದಾಣಿಕೆ ಸಾಧಿಸಿ, ಶೇ 50ರಷ್ಟು ಮಹಿಳಾ ಅಭ್ಯರ್ಥಿಗಳನ್ನು ತಯಾರು ಮಾಡುವ ಬಗ್ಗೆ ವರದಿ ಸಲ್ಲಿಸಬೇಕು’ ಎಂದರು.

ಪಕ್ಷದ ಕಚೇರಿ ಶಂಕುಸ್ಥಾಪನೆ: ‘100 ಕಾಂಗ್ರೆಸ್ ಕಚೇರಿ ನಿರ್ಮಿಸುವ ಹಿನ್ನೆಲೆಯಲ್ಲಿ ಅವುಗಳ ಶಂಕುಸ್ಥಾಪನೆ ನೆರವೇರಿಸಲು ದಿನ ನಿಗದಿ ಮಾಡುವಂತೆ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿಗೆ ಮನವಿ ಮಾಡಿದ್ದೇನೆ. ಈ ಕಾರ್ಯಕ್ಕೆ ನಾಲ್ಕು ವಿಭಾಗಗಳಲ್ಲಿ ಸಮಿತಿ ರಚಿಸಲಾಗಿದೆ’ ಎಂದರು.

‘ಕಚೇರಿ ಕಟ್ಟಡ ನಿರ್ಮಾಣ ಮಾಡುವ ಜಾಗ ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ನೋಂದಣಿ ಆಗದಿದ್ದರೆ ಅಲ್ಲಿ ಶಂಕುಸ್ಥಾಪನೆ ಮಾಡಿಸುವುದಿಲ್ಲ. ಈ ಕಟ್ಟಡ ನಿರ್ಮಾಣದ ಜಾಗ ವೈಯಕ್ತಿಕ ಹೆಸರು, ಬೇರೆ ಟ್ರಸ್ಟ್ ಹೆಸರಿನಲ್ಲಿ ಇರುವಂತಿಲ್ಲ’ ಎಂದರು.

ಪಹಣಿ–ಆಧಾರ್ ಜೋಡಣೆಗೆ ಸಂಭಾವನೆ

ಬೆಂಗಳೂರು: ‘ಪಹಣಿಗಳಿಗೆ ಆಧಾರ್ ಜೋಡಣೆ ಕಾರ್ಯವನ್ನು ಸಾಧ್ಯವಾಗಿಸಿದ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಗ್ರಾಮ ಸಹಾಯಕರಿಗೆ ಸಂಭಾವನೆ ನೀಡಲಾಗುತ್ತದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

ಈ ಸಂಬಂಧ ಭಾನುವಾರ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ‘ಸರ್ಕಾರದ ಯೋಜನೆಗಳನ್ನು ರೈತರ ಮನೆಬಾಗಿಲಿಗೆ ತಲುಪಿಸಲು ಮತ್ತು ಪೌತಿ ಖಾತೆ ನೀಡುವ ಸೇವೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಆಧಾರ್ ಜೋಡಣೆಯ ಪಾತ್ರ ಮಹತ್ವದ್ದು’ ಎಂದಿದ್ದಾರೆ.

‘ಪ್ರತಿ ಪಹಣಿ– ಆಧಾರ್ ಜೋಡಣೆಗೆ ₹1 ಸಂಭಾವನೆ ನೀಡಲು ನಿರ್ಧರಿಸಲಾಗಿದೆ. ಭೂ ಸುರಕ್ಷಾ ಯೋಜನೆ ಅಡಿ ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ಅನುದಾನದಲ್ಲಿ ₹4.4 ಕೋಟಿಯನ್ನು ಸಿಬ್ಬಂದಿಯ ಖಾತೆಗೆ ವರ್ಗಾಯಿಸುವಂತೆ ಸೂಚಿಸಿದ್ದೇನೆ’ ಎಂದು ಸಚಿವರು ತಿಳಿಸಿದ್ದಾರೆ.

ಬಿ.ವೈ. ವಿಜಯೇಂದ್ರ ಸುಳಿವು

ಯಾವಾಗ ಬೇಕಾದರೂ ಕೇಂದ್ರ ವರಿಷ್ಠರು ರಾಜ್ಯಕ್ಕೆ ಭೇಟಿ ನೀಡಬಹುದು. ಶಾಸಕರ ಜತೆ ಸಮಾಲೋಚನೆ ನಡೆಸಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ

ಇದೇ 20ರೊಳಗೆ ಬಿಜೆಪಿ ರಾಜ್ಯ ಅಧ್ಯಕ್ಷರ ಆಯ್ಕೆ

ತುಮಕೂರು: ಇದೇ 20ರ ಒಳಗಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ನಡೆಯಲಿದೆ. ಇದಕ್ಕೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸುಳಿವು ನೀಡಿದ್ದಾರೆ.

ಬಿ.ವೈ.ವಿಜಯೇಂದ್ರ

ತಾಲ್ಲೂಕಿನ ಬೆಳ್ಳಾವಿಯಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಅನುದಾನ ಕೊರತೆಯಿಂದ ಕೆಲವು ವಿಶ್ವವಿದ್ಯಾಲಯಗಳನ್ನು ಮುಚ್ಚುವ ಸರ್ಕಾರದ ತೀರ್ಮಾನ ದುರದೃಷ್ಟಕರ. ಇದು ಸರ್ಕಾರಕ್ಕೆ ಶೋಭೆ ತರುವುದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಅನುದಾನ ಕೊರತೆ ನೆಪವೊಡ್ಡಿ ಕಾಂಗ್ರೆಸ್ ಸರ್ಕಾರವು ಬಿಜೆಪಿ ಸರ್ಕಾರದಲ್ಲಿ ಆರಂಭಿಸಿದ್ದ ವಿ.ವಿಗಳನ್ನು ಮುಚ್ಚಲು ಮುಂದಾಗಿದೆ. ₹400 ಕೋಟಿ ಅನುದಾನ ನೀಡಲು ಆಗದೆ ವಿಶ್ವವಿದ್ಯಾಲಯ ಮುಚ್ಚಲು ಸರ್ಕಾರ ತೀರ್ಮಾನಿಸಿರುವುದು ದುರದೃಷ್ಟಕರ. ಸರ್ಕಾರ ಕೂಡಲೇ ಈ ನಿರ್ಧಾರದಿಂದ ಹಿಂದಕ್ಕೆ ಸರಿಯಬೇಕು’ ಎಂದು ಆಗ್ರಹಿಸಿದರು.

ಇಂದಿನ ಸಮಾಜಕ್ಕೆ ಬೇಕಿರುವುದು ವಿಶ್ವವಿದ್ಯಾಲಯ ನೀಡುವ ಪದವಿಗಳಲ್ಲ, ಸಮಾನತೆಯ ಮನಸ್ಥಿತಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ತಿರುಗೇಟು ನೀಡಿದ್ದಾರೆ. ಜನರಿಗೆ ಬೇಕಿರುವುದು ವಿಶ್ವವಿದ್ಯಾಲಯ ನೀಡುವ ಪದವಿ, ಎಂ.ಎಸ್‌ಸಿ, ಎಂ.ಎ, ಪಿಎಚ್.ಡಿ ಪದವಿಗಳಲ್ಲ. ಶಾಂತಿ, ನೆಮ್ಮದಿ, ಸಮಾನತೆ, ಸಹಬಾಳ್ವೆ ಎಂದು ಅವರು ಹೇಳಿದರು.

ಏರ್ ಆಂಬುಲೆನ್ಸ್‌ನಲ್ಲಿ ಬೆಂಗಳೂರಿಗೆ ರೈತ ಮುಖಂಡ ಕುರುಬೂರು

ಬೆಂಗಳೂರು: ಪಂಜಾಬಿನ ಪಟಿಯಾಲ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಏರ್ ಆಂಬುಲೆನ್ಸ್ ಮೂಲಕ ಭಾನುವಾರ ಬೆಂಗಳೂರಿಗೆ ಕರೆ ತರಲಾಗಿದೆ.

ಪ್ರತಿಭಟನಾ ನಿರತ ರೈತರಿಗೆ ಬೆಂಬಲ ಸೂಚಿಸಲು ರಾಜ್ಯದ ಹಲವು ರೈತ ಮುಖಂಡರು ಈಚೆಗೆ ಪಂಜಾಬ್‌ಗೆ ತೆರಳಿದ್ದರು. ಈ ವೇಳೆ ರಸ್ತೆ ಅಪಘಾತ ಸಂಭವಿಸಿ, ಕುರುಬೂರು ಶಾಂತಕುಮಾರ್ ಗಾಯಗೊಂಡಿದ್ದರು.

ಮೂರು ದಿನಗಳ ಹಿಂದೆಯೇ ಅಪಘಾತ ಸಂಭವಿಸಿದ್ದು, ಶಾಂತ ಕುಮಾರ್ ಅವರಿಗೆ ಪಟಿಯಾಲಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಏರ್ ಆಂಬುಲೆನ್ಸ್ ಮೂಲಕ ಅವರನ್ನು ಬೆಂಗಳೂರಿಗೆ ಕರೆತನ್ನಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದರು. ಭಾನುವಾರ ಆಂಬುಲೆನ್ಸ್ ವಿಮಾದಲ್ಲಿ ವೈದ್ಯರು ಮತ್ತು ಸಹಾಯಕರು ಜತೆಗಿದ್ದರು. ನಂತರ ಚಿಕಿತ್ಸೆಗಾಗಿ ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವಾದದ ಗೂಡಾದ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ • ಹೈಕೋರ್ಟ್ ಮೆಟ್ಟಿಲೇರಿದ ನಿರ್ಮಾಪಕರು

ಚಲನಚಿತ್ರಗಳ ನೋಡದೆ ಆಯ್ಕೆ: ತೀವ್ರ ಆಕ್ರೋಶ

• ವಿನಾಯಕ ಕೆ.ಎಸ್

ಬೆಂಗಳೂರು: 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಸಿನಿಮಾಗಳನ್ನು ನೋಡದೆಯೇ ಆಯ್ಕೆ ಮಾಡಲಾಗಿದೆ ಎಂದು ಅನೇಕ ಚಿತ್ರ ನಿರ್ಮಾಪಕರು ಗಂಭೀರವಾಗಿ ಆರೋಪಿಸಿದ್ದು, ಈ ವಿವಾದ ಹೈಕೋರ್ಟ್ ಮೆಟ್ಟಿಲೇರಿದೆ.

ಚಿತ್ರಗಳ ಆಯ್ಕೆ ಸಮಿತಿಗೆ ಚಿತ್ರರಂಗವನ್ನು ಪ್ರತಿನಿಧಿಸುವ ಅಂಗಸಂಸ್ಥೆಗಳಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು, ನಂತರ ಉಳಿದ ಕೆಲಸ ಮಾಡಬೇಕೆಂಬ ನಿಯಮವಿದೆ. ಆದರೆ, ಚಿತ್ರೋತ್ಸವದ ಆಯೋಜಕರು ಹಾಗೂ ಚಲನಚಿತ್ರ ಅಕಾಡೆಮಿ ಅಧ್ಯಕ್ಷರು ಏಕಪಕ್ಷೀಯ ನಿರ್ಧಾರ ತೆಗೆದುಕೊಂಡು ಆಯ್ಕೆ ಸಮಿತಿ ರಚಿಸಿದ್ದಾರೆ. ಸ್ಪರ್ಧೆಗೆ ಕಳುಹಿಸಿದ ಚಿತ್ರಗಳನ್ನು ಪೂರ್ತಿ ವೀಕ್ಷಿಸದೇ ಚಿತ್ರಗಳ ಆಯ್ಕೆ ಪ್ರಕ್ರಿಯೆ ನಡೆದಿದೆ ಎಂದು 20ಕ್ಕೂ ಅಧಿಕ ನಿರ್ಮಾಪಕರು ಶನಿವಾರ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಬುಧವಾರ (ಫೆ.19) ಈ ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆಯಿದೆ.



ಟೇಕ್ವಾಂಡೊ ಗರ್ಲ್ ಚಿತ್ರದ ತಂಡದ ಪೋಸ್ಟ್

‘ಈ ಸಲದ ಬೆಂಗಳೂರು ಚಿತ್ರೋತ್ಸವಕ್ಕಾಗಿ ನಮ್ಮ ‘ನಾಳೆ ರಜ ಕೋಳಿ ಮಜ’ ಚಿತ್ರವನ್ನು ಕನ್ನಡ, ಭಾರತ ಮತ್ತು ಏಷ್ಯನ್ ಮೂರು ವಿಭಾಗಗಳಿಗೂ ಕಳುಹಿಸಿದ್ದೆ. ‘ಸಿನಿಸೆಂಡ್’ ಡಿಜಿಟಲ್ ಮಾಧ್ಯಮದಲ್ಲಿ ಪ್ರತ್ಯೇಕ ಸ್ಕ್ರೀನರ್ ಮಾಡಿದ್ದೆ. ಇದುವರೆಗೆ ಒಂದೇ ವ್ಯೂ ಆಗಿತ್ತು. ಉಳಿದೆರಡು ವಿಭಾಗಗಳಿಗೆ ಶುಲ್ಕ ಕಟ್ಟಿಸಿಕೊಂಡು ಚಿತ್ರವನ್ನೇ ನೋಡಿರಲಿಲ್ಲ. ಚಿತ್ರೋತ್ಸವದ ಆಯೋಜಕರಿಂದ ಸ್ಪಷ್ಟೀಕರಣ ಕೇಳಿದರೂ ಉತ್ತರ ಬರಲಿಲ್ಲ. ಉಳಿದ ಚಿತ್ರತಂಡಗಳು ಕೂಡ ಈ ಬಗ್ಗೆ ಗಮನಹರಿಸಿದಾಗ, 20ಕ್ಕೂ ಹೆಚ್ಚು ಸಿನಿಮಾಗಳನ್ನು ನೋಡದೇ ಇರುವುದು ಬೆಳಕಿಗೆ ಬಂದಿದೆ’ ಎನ್ನುತ್ತಾರೆ ನಿರ್ದೇಶಕ ಅಭಿಲಾಷ್ ಶೆಟ್ಟಿ.

ಮಾರ್ಚ್ 1ರಿಂದ ಚಿತ್ರೋತ್ಸವ ಪ್ರಾರಂಭವಾಗಲಿದೆ.

‘ಸಾಮಾನ್ಯವಾಗಿ ವಿಮಿಯೊ ಅಥವಾ ಸಿನಿಸೆಂಡ್ ಮೂಲಕ ಸಿನಿಮಾಗಳನ್ನು ಕಳುಹಿಸುತ್ತಾರೆ. ಇದರಿಂದ ಡೌನ್‌ಲೋಡ್ ಮಾಡಿ ಚಿತ್ರ ನೋಡುವುದು ಈಗ ಕಷ್ಟವಿದೆ. ಕಾನೂನಿನ ಪ್ರಕಾರ ಚಿತ್ರವನ್ನು ಡೌನ್‌ಲೋಡ್ ಮಾಡಿ ನೋಡುವಂತಿಲ್ಲ. ತಾಂತ್ರಿಕ ಕಾರಣದಿಂದಾಗಿ ಚಿತ್ರ ನೋಡಿದ್ದು ನಿಮ್ಮ ಸ್ಕ್ರೀನರ್‌ನಲ್ಲಿ ಕಾಣಿಸಿಲ್ಲ ಎಂದು ಸಬೂಬು ಹೇಳುವುದು ಹಾಸ್ಯಾಸ್ಪದ. ಅನುಮತಿ ಇಲ್ಲದೆ ಡೌನ್‌ಲೋಡ್ ಮಾಡುವುದು ಪೈರಸಿಗೆ ಸಮ. ವಿಮಿಯೊ ದೊಡ್ಡ ಕಂಪನಿ. ಈ ರೀತಿ ತಾಂತ್ರಿಕ ಅಡಚಣೆಗೆ ಆಸ್ಪದ ನೀಡುವುದಿಲ್ಲ. 20–30 ಸಿನಿಮಾಗಳಿಗೂ ತಾಂತ್ರಿಕ ತೊಂದರೆಯ ನೆಪ ಹೇಳಿದರೆ ನಂಬುವುದು ಹೇಗೆ? ಕೆಲವು ಚಿತ್ರಗಳನ್ನು 9–10 ನಿಮಿಷ ಮಾತ್ರ ನೋಡಿದ್ದಾರೆ. ಇದೂ ಗೊತ್ತಾಗುತ್ತದೆ’ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ, ಈ ಹಿಂದೆ ಚಿತ್ರೋತ್ಸವದ ಭಾಗವೇ ಆಗಿದ್ದ ವ್ಯಕ್ತಿಯೊಬ್ಬರು.

‘ಇದು ಎಂಕ, ನಾಣಿ, ಸೀನನ ಚಿತ್ರೋತ್ಸವ. ಪ್ರತಿ ವರ್ಷ ಆಯ್ಕೆಯಲ್ಲಿ ಕೆಲವು ಹಿತಾಸಕ್ತಿಗಳು ಕೆಲಸ ಮಾಡುವುದು ಸಹಜ. ಚಿತ್ರವನ್ನು ನೋಡದೆಯೇ ಆಯ್ಕೆ ನಿರ್ಧರಿಸಿದ್ದು ತಪ್ಪು. ಹೊಸ ಪ್ರತಿಭೆಗಳಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ಕೆಲವು ಚಿತ್ರತಂಡದವರು ಹೈಕೋರ್ಟ್ ಮೆಟ್ಟಿಲು ಏರಿದ್ದೇವೆ. ವಾರ್ತಾ ಇಲಾಖೆ, ಮುಖ್ಯಮಂತ್ರಿ ಗಮನಕ್ಕೂ ಈ ವಿಷಯವನ್ನು ತರುತ್ತೇವೆ’ ಎನ್ನುತ್ತಾರೆ ನಿರ್ಮಾಪಕ ನಾಗೇಶ್ ಕುಮಾರ್ ಯು.ಎಸ್.

‘136 ಸಿನಿಮಾಗಳು ಬಂದಿದ್ದವು. ಆಯ್ಕೆ ಸಮಿತಿ ಸದಸ್ಯರು ಎಲ್ಲ ಸಿನಿಮಾಗಳನ್ನೂ ಪೂರ್ತಿಯಾಗಿ ನೋಡಿದ್ದಾರೆ. ಅದಕ್ಕೆ ಬೇಕಾದ ಎಲ್ಲ ಸಾಕ್ಷ್ಯಗಳಿವೆ. ನ್ಯಾಯಾಲಯದಲ್ಲಿ ನಾವು ಎಲ್ಲ ದಾಖಲೆಗಳನ್ನು ಒದಗಿಸುತ್ತೇವೆ’ ಎಂದು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ವಿದ್ಯಾಶಂಕರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅತ್ಯುತ್ತಮ ಚಿತ್ರಗಳಿಗೂ ಸಿಗದ ಅವಕಾಶ

ಪಿ.ಶೇಷಾದ್ರಿ ನಿರ್ದೇಶನದ ‘ಮೋಹನದಾಸ’, ನಟೇಶ್ ಹೆಗಡೆಯವರ ‘ಪೆದ್ರೊ’, ಪೃಥ್ವಿ ಕೊಣನೂರು ನಿರ್ದೇಶನದ ‘ರೈಲ್ವೆ ಚಿಲ್ಡ್ರನ್’ಗಳಂತಹ ಚಿತ್ರಗಳು ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿದ್ದರೂ ಬೆಂಗಳೂರು ಚಿತ್ರೋತ್ಸವದಲ್ಲಿ ಈ ಹಿಂದೆ ಜಾಗ ಸಿಕ್ಕಿರಲಿಲ್ಲ. ಪ್ರತಿಷ್ಠಿತ ಚಿತ್ರೋತ್ಸವಗಳಿಗೆ ಆಯ್ಕೆಗೊಂಡಿದ್ದ ‘ಬಾರಾ ಬೈ ಬಾರಾ’, ಕೊಂಕಣಿ ಚಿತ್ರ ‘ಜುಜೆ’, ಕನ್ನಡದ ‘ಗಂಟುಮೂಟೆ’ಯಂತಹ ಚಿತ್ರವೂ ಇಲ್ಲಿ ಪ್ರದರ್ಶನಗೊಂಡಿರಲಿಲ್ಲ.

‘ಲಾಬಿಯಿಂದ ದೂರವಿಡಿ’

‘ಆಯ್ಕೆಯಲ್ಲಿ ರಾಜಕೀಯ, ಲಾಬಿ ಇರುವುದು ಹೊಸ ವಿಷಯವಲ್ಲ. ಸಿನಿಮಾ ಚೆನ್ನಾಗಿದ್ದರೆ ಆಯ್ಕೆಯಾಗಬೇಕು. ಫೋನ್ ಕರೆಗಳ ಮೂಲಕ ಚಿತ್ರ ಆಯ್ಕೆಯಾಗಬಾರದು. ಬೆಂಗಳೂರು ಚಿತ್ರೋತ್ಸವದ ಕುರಿತು ಬೇರೆ ಕಡೆಗಳಲ್ಲಿಯೂ ಒಳ್ಳೆ ಅಭಿಪ್ರಾಯವಿಲ್ಲ. ಲಾಬಿಯೇ ಮಾಡುವುದಾದರೆ ತೀರ್ಪುಗಾರರ ಮಂಡಳಿ ಯಾಕೆ ಬೇಕು? ಹೀಗಾದಲ್ಲಿ ಇಲ್ಲಿ ಸಿಗುವ ಪ್ರಶಸ್ತಿಗೆ ಮೂರು ಕಾಸಿನ ಬೆಲೆಯೂ ಇರದು. ಪುಣೆ ಚಿತ್ರೋತ್ಸವದಂತೆ ಇಲ್ಲಿಯೂ ಯಾರ ಫೋನ್ ಕರೆಗಳಿಗೂ ಸ್ಪಂದಿಸದ, ಲಾಬಿಗೆ ಮಣಿಯದ ತೀರ್ಪುಗಾರರನ್ನು ನೇಮಕ ಮಾಡಿಕೊಳ್ಳಬೇಕು’ –

ಪೃಥ್ವಿ ಕೊಣನೂರು, ನಿರ್ದೇಶಕ, ನಿರ್ಮಾಪಕ

‘ಉದಯಗಿರಿ ಪ್ರಕರಣ: ಬಿಜೆಪಿ, ಆರ್‌ಎಸ್‌ಎಸ್ ಕೃಪಾಪೋಷಿತ ಕುಕೃತ್ಯ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಮೈಸೂರಿನ ಉದಯಗಿರಿ ಗಲಾಟೆ ಪ್ರಕರಣವು ಬಿಜೆಪಿ ಮತ್ತು ಸಂಘ ಪರಿವಾರದ ಕೃಪಾಪೋಷಿತ ಕುಕೃತ್ಯ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ವಿಜಯಪುರದಲ್ಲಿ ಪಾಕಿಸ್ತಾನದ ಬಾವುಟ ಹಾರಿಸಿ, ಅಲ್ಪಸಂಖ್ಯಾತರ ಮೇಲೆ ಗೂಬೆ ಕೂರಿಸಲು ಪ್ರಯತ್ನ ಮಾಡಿದ್ದರು. ಕೃತ್ಯ ಮಾಡಿದವರನ್ನು ಹಿಡಿದಾಗ ಸಂಘ ಪರಿವಾರದವರು ಎಂಬುದು ಗೊತ್ತಾಗಿತ್ತು. ಅದೇ ರೀತಿ ಇಲ್ಲಿಯೂ ಸಂಘ ಪರಿವಾರವಿದೆ’ ಎಂದು ದೂರಿದರು.

‘ಕೆಲವು ಕಡೆ ಬುರ್ಖಾ ಹಾಕಿಕೊಂಡು ಗಲಾಟೆ ಮಾಡಲು ಹೋಗುತ್ತಾರೆ. ಇದೇನು ಅವರಿಗೆ ಹೊಸದಲ್ಲ. ಬಿಜೆಪಿಯ ಪಿತೃಪಕ್ಷವಾದ ಸಂಘ ಪರಿವಾರಕ್ಕೆ ಈಗ 100 ವರ್ಷಗಳು ತುಂಬುತ್ತಿದೆ. ಅವರ ಎಲ್ಲ ರೀತಿಯ ಚಿಂತನೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಅದು ಸಾಧ್ಯವಾಗಲ್ಲ. ಶಾಂತಿ ಕದಡಲೂ ನಾವು ಬಿಡುವುದಿಲ್ಲ’ ಎಂದು ತಿಳಿಸಿದರು.

ಕೆಪಿಎಸ್‌ಸಿ ಪರೀಕ್ಷೆ ಭಾರಿ ಅಕ್ರಮ

ಒಂದನೇ ಪುಟದಿಂದ...

ಎಇಇ (ಗ್ರೇಡ್-1) 24 ಹುದ್ದೆಗಳಿಗೆ (ಈ ಪೈಕಿ 7 ಹುದ್ದೆಗಳು ಹೈಕ) ಕೆಪಿಎಸ್‌ಸಿ 2023ರ ಜುಲೈ 1 ಮತ್ತು 2ರಂದು ಪರೀಕ್ಷೆ ನಡೆಸಿ, ಅದೇ ವರ್ಷ ಸೆ. 22ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು. ಆ ಪಟ್ಟಿಗೆ ಆಕ್ಷೇಪಣೆ ವ್ಯಕ್ತಪಡಿಸಿ ಮತ್ತು ಅಕ್ರಮ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿ ಪಟ್ಟಿಯಲ್ಲಿಲ್ಲದ ಅಭ್ಯರ್ಥಿಯೊಬ್ಬರು ದೂರು ಸಲ್ಲಿಸಿದ್ದರು. ಆ ದೂರಿನಲ್ಲಿದ್ದ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಕೆಪಿಎಸ್‌ಸಿ ತನಿಖೆಗೆ ಆಂತರಿಕ ಸಮಿತಿ ರಚಿಸಿತ್ತು. ಈ ಸಮಿತಿಯು ಆಯೋಗಕ್ಕೆ ಸಲ್ಲಿಸಿರುವ 500ಕ್ಕೂ ಹೆಚ್ಚು ಪುಟಗಳ ತನಿಖಾ ವರದಿಯಲ್ಲಿ ಪರೀಕ್ಷಾ ಅಕ್ರಮ ನಡೆದಿರುವುದನ್ನು ಸಾಕ್ಷ್ಯಗಳ ಸಹಿತ ಉಲ್ಲೇಖಿಸಿದೆ.

ತನಿಖಾ ಸಮಿತಿಯ ವರದಿಯನ್ನು ಸ್ವೀಕರಿಸಿರುವ ಆಯೋಗವು, ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲದೆ, ನೇಮಕಾತಿ ಆದೇಶ ಪಡೆದು ಹುದ್ದೆಯಲ್ಲಿರುವ 10 ಕಳಂಕಿತ ಅಭ್ಯರ್ಥಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದೂ ಮನವಿ ಮಾಡಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ತನಿಖೆಗಾಗಿ ರಚಿಸಿದ್ದ ಆಂತರಿಕ ಸಮಿತಿಯು 2023ರ ಮಾರ್ಚ್ 13ರಂದು ಮೊದಲ ಸಭೆ ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಬಂದಿದ್ದ ಎಲ್ಲ ಆಕ್ಷೇಪಣೆಗಳನ್ನು ಪರಿಶೀಲಿಸಿತ್ತು. ಅಲ್ಲದೆ, ಪರೀಕ್ಷಾ ಅಕ್ರಮ ನಡೆಸಿ ಆಯ್ಕೆ ಆಗಿದ್ದಾರೆಂಬ 10 ಅಭ್ಯರ್ಥಿಗಳ ಮೇಲಿನ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಆ ಅಭ್ಯರ್ಥಿಗಳ ನೈಜ ಒಎಂಆರ್ ಶೀಟ್, ಪ್ರಶ್ನೆ ಪತ್ರಿಕೆ, ಸರಿ ಉತ್ತರ, ನೋಂದಣಿ ಸಂಖ್ಯೆ, ಪರೀಕ್ಷೆಯಲ್ಲಿ ಗಳಿಸಿದ್ದ ಅಂಕ ಹಾಗೂ ಆ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದ ಕೇಂದ್ರದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಆಯೋಗದ ಅಧಿಕಾರಿಗಳಿಂದ ಪಡೆದು ಪರಿಶೀಲನೆ ನಡೆಸಿತ್ತು. ಒಎಂಆರ್ ಶೀಟ್‌ನ ಕಾರ್ಬನ್ ಪ್ರತಿಯನ್ನು ಹಾಜರುಪಡಿಸುವಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಎಲ್ಲ 24 ಅಭ್ಯರ್ಥಿಗಳಿಗೆ ತನಿಖಾ ಸಮಿತಿ ಸೂಚಿಸಿತ್ತು. ಆ ಪೈಕಿ, 20 ಅಭ್ಯರ್ಥಿಗಳು ಹಾಜರುಪಡಿಸಿದ್ದರು. ಆದರೆ, ಕಾರ್ಬನ್ ಪ್ರತಿ ಕಳೆದು ಹೋಗಿದೆ ಎಂದು ನಾಲ್ವರು ಅಭ್ಯರ್ಥಿಗಳು ಲಿಖಿತವಾಗಿ ತಿಳಿಸಿದ್ದರು.

ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳ ವಿಡಿಯೊ ತುಣುಕುಗಳ ವೀಕ್ಷಣೆ, ನೈಜ ಒಎಂಆರ್ ಶೀಟ್ ಮತ್ತು ಕಾರ್ಬನ್ ಪ್ರತಿಯನ್ನು ಹೋಲಿಕೆ ಮಾಡಿದ್ದ ಸಮಿತಿಯು, ಕೆಲವು ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಿದ್ದ ಸಂದರ್ಭದಲ್ಲಿನ ಚಲನವಲನ ಮತ್ತು ನೈಜ ಒಎಂಆರ್ ಶೀಟು ಮತ್ತು ಕಾರ್ಬನ್ ಪ್ರತಿಯಲ್ಲಿ ಕೆಲವು ನ್ಯೂನತೆಗಳನ್ನು ಇರುವುದನ್ನು ಪಟ್ಟಿ ಮಾಡಿತ್ತು.

ಈ ಲೋಪಗಳ ಕುರಿತು ಹೆಚ್ಚಿನ ಪರಿಶೀಲನೆಗೆ ವಿಡಿಯೊ ತುಣುಕುಗಳು ಮತ್ತು ನೈಜ ಒಎಂಆರ್ ಶೀಟ್ ಮತ್ತು ಕಾರ್ಬನ್ ಪ್ರತಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಸಮಿತಿಯು ಕಳುಹಿಸಿತ್ತು. ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಪಡೆದ ವರದಿ ಮತ್ತು ಆ ವರದಿ ಆಧರಿಸಿ ಪರೀಕ್ಷಾ ಅಕ್ರಮ ನಡೆದಿರುವುದನ್ನು ಖಚಿತಪಡಿಸಿದ್ದ ಸಮಿತಿಯು, ಆರೋಪಿತ ಅಭ್ಯರ್ಥಿಗಳನ್ನು ವಿಚಾರಣೆಗೆ ಒಳಪಡಿಸಿತ್ತು. ಎಲ್ಲ ಅಂಶಗಳನ್ನು ಪರಿಗಣಿಸಿ ಪರೀಕ್ಷಾ ಅಕ್ರಮ ನಡೆದಿರುವುದನ್ನು ತನ್ನ ತನಿಖಾ ವರದಿಯಲ್ಲಿ ತನಿಖಾ ಸಮಿತಿಯು ಉಲ್ಲೇಖಿಸಿದೆ.

ಬಣಗುಡುತ್ತಿವೆ ಗ್ರಾಮದ ರಸ್ತೆಗಳು; ಯಾರೇ ಬಂದರೂ ಸಾಲದವರೇ ಎಂಬ ಅನುಮಾನ

ವಸೂಲಿಗಾರರ ಭೀತಿ: ಜನರ ಸಾಮೂಹಿಕ ಗುಳೆ

• ಸಂತೋಷ ಈ. ಚಿನಗುಡಿ

ಗಜಮಿನಾಳ (ಬೆಳಗಾವಿ ಜಿಲ್ಲೆ): ‘ನೀವು ಸಂಘದವರೇನ್ರಿ? ಅವರ ಮನ್ಯಾಗ್ ಯಾರೂ ಇಲ್ರಿ’

ಬೈಲಹೊಂಗಲ ತಾಲ್ಲೂಕಿನ ಗಜಮಿನಾಳ ಗ್ರಾಮದಲ್ಲಿ ಹೊಸ ಮುಖ ಕಂಡ ಕೂಡಲೇ ಜನರು ಮಾತಿಗಿಳಿಯುವುದೇ ಹೀಗೆ. ಯಾವುದೋ ಸಂಘದವರು ಸಾಲ ವಸೂಲಿಗೆ ಬಂದಿದ್ದಾರೆ ಎಂದು ಭಾವಿಸಿ, ಜನ ಬೆಚ್ಚಿ ಬೀಳುತ್ತಾರೆ. ದೂರ ಉಳಿಯಲು ಬಯಸುತ್ತಾರೆ. ಅಷ್ಟರ ಮಟ್ಟಿಗೆ ಅಲ್ಲಿನ ಜನರಲ್ಲಿ ‘ಸಾಲ’ ಭೀತಿ ಉಂಟು ಮಾಡಿದೆ.

ಸುಮಾರು 400 ಕುಟುಂಬಗಳಿರುವ ಗಜಮಿನಾಳದಲ್ಲಿ 150ಕ್ಕೂ ಹೆಚ್ಚು ಕುಟುಂಬದವರು ಗ್ರಾಮ ತೊರೆದಿದ್ದಾರೆ. ಸಾಲದ ಹೊರೆ ಇಳಿಸಿಕೊಳ್ಳಲು ಗೋವಾ, ಮಹಾರಾಷ್ಟ್ರದ ವಿವಿಧ ನಗರಗಳಿಗೆ ದುಡಿಯಲು ಹೋಗಿದ್ದಾರೆ. ಕೆಲವರು ಮನೆಗೆ ಬೀಗ ಜಡಿದು, ಬೇರೆ ಊರಿಗೆ ಹೋಗಿದ್ದಾರೆ. ದ್ಯಾಮವ್ವನ ಗುಡಿ ಇರುವ ಓಣಿಯಲ್ಲಿ ಬಹುತೇಕ ಜನ ಗ್ರಾಮ ತೊರೆದಿದ್ದಾರೆ. ಇನ್ನೂ ಕೆಲ ಮನೆಗಳಲ್ಲಿ ವಯಸ್ಸಾದವರು ಮತ್ತು ಪುಟಾಣಿ ಮಕ್ಕಳು ಮಾತ್ರ ಇದ್ದಾರೆ.

ಊರಿನ ಶೇ 70ರಷ್ಟು ಮನೆಯವರು ವಿವಿಧ ಫೈನಾನ್ಸ್‌ಗಳಿಂದ ಸಾಲ ಪಡೆದಿದ್ದಾರೆ. ವಿವಿಧ ಸಂಘಗಳ ಹೆಸರಿನಲ್ಲಿ ಏಜೆಂಟರು ಆಮಿಷ ತೋರಿಸಿ, ಸಾಲ ಕೊಡಿಸಿದ್ದಾರೆ. ಈಗ ಕೊಡಿಸಿದ ಸಾಲ ವಸೂಲಾತಿಗೆ ಸಂಘದವರೇ ಸಿಬ್ಬಂದಿಯನ್ನು ಕರೆ ತರುತ್ತಿದ್ದಾರೆ. ಹೀಗಾಗಿ, ಊರಿಗೆ ಯಾರೇ ಕಾಲಿಟ್ಟರೂ ಇವರು ಸಂಘದವರು ಎಂಬ ಅನುಮಾನ ಕಾಡುತ್ತಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಗಜಮಿನಾಳ ಗ್ರಾಮದ ದ್ಯಾಮವ್ವನ ಗುಡಿಯ ಓಣಿ ಬಣಗುಡುತ್ತಿದೆ

‘ಪ್ರಜಾವಾಣಿ’ ಪ್ರತಿನಿಧಿ ಲ್ಯಾಪ್‌ಟಾಪ್ ಬ್ಯಾಗು ಹೆಗಲಿಗೆ ಹಾಕಿಕೊಂಡು ಹೊರಟಾಗ, ಜನ ತಮ್ಮತಮ್ಮಲ್ಲೇ ಗುಸುಗುಸು ಮಾತನಾಡಿದರು. ಒಬ್ಬರಿಗೊಬ್ಬರು ಚರ್ಚಿಸಿ, ಅನುಮಾನದಿಂದ ನೋಡಿದರು. ಸಿಲಿಂಡರ್ ಸರಬರಾಜು ಮಾಡಲು ಬಂದ ಒಂದಿಬ್ಬರು ಕಾರ್ಮಿಕರು ಕೂಡ ‘ಯಾವ ಸಂಘರಿ’ ಎಂದು ಪ್ರಶ್ನಿಸಿದರು.

ಊರನ್ನೇ ಮರುಳು ಮಾಡಿದ ಆರೋಪಿಗಳು: ಬೆಳಗಾವಿ ತಾಲ್ಲೂಕಿನ ಯಮನಾಪುರ ಗ್ರಾಮದ ಒಂದೇ ಕುಟುಂಬದ ಹೊಳೆಪ್ಪ ದಡ್ಡಿ, ಅಶ್ವಿನಿ ದಡ್ಡಿ, ಸೇವಂತಾ ದಡ್ಡಿ, ಪ್ರಿಯಂಕಾ ದಡ್ಡಿ ಸೇರಿಕೊಂಡು ಗಜಮಿನಾಳ ಜನರನ್ನು ಮರುಳು ಮಾಡಿದ್ದಾರೆ. ಮಹರ್ಷಿ ವಾಲ್ಮೀಕಿ ಮಹಿಳಾ ಸ್ವಸಹಾಯ ಸಂಘ ಕಟ್ಟಿ, ಅದರ ಮೂಲಕ ಸಾಲ ಕೊಡಿಸಿದ್ದಾರೆ.

ರಸ್ತೆ ಫೋಟೊ ಕ್ಲಿಕ್ಕಿಸಲು ಬಿಡದ ಮಹಿಳೆ

ಗಜಮಿನಾಳದ ರಸ್ತೆಗಳು ಬಣಗುಡುತ್ತಿವೆ. ಖಾಲಿ ರಸ್ತೆಯೊಂದರ ಚಿತ್ರ ಕ್ಲಿಕ್ಕಿಸಿದಾಗ, ದೌಡಾಯಿಸಿ ಬಂದ ಮಹಿಳೆಯೊಬ್ಬರು ತಕರಾರು ತೆಗೆದರು.

‘ನಿಮ್ಮನ್ನು ಸಂಘದವರೇ ಕಳಿಸಿದ್ದಾರೆ ಎಂಬುದು ನನಗೆ ಗೊತ್ತು. ನಮ್ಮ ಮನೆಯ ಫೋಟೊ ಏಕೆ ತೆಗೆದಿದ್ದೀರಿ. ನಾವೇನು ಊರು ಬಿಟ್ಟು ಹೋಗುವುದಿಲ್ಲ. ಫೋಟೋ ಡಿಲೀಟ್ ಮಾಡಿ’ ಎಂದು ಏರುಧ್ವನಿಯಲ್ಲಿ ಆಗ್ರಹಿಸಿದರು.

‘ಇದು ನಿಮ್ಮ ಮನೆಯ ಫೋಟೋ ಅಲ್ಲ. ರಸ್ತೆಯ ಫೋಟೋ’ ಎಂದು ತೋರಿಸಿದರೂ ಅದನ್ನು ಡಿಲೀಟ್ ಮಾಡಿಸುವವರೆಗೆ ಮಹಿಳೆ ಸುಮ್ಮನಿರಲಿಲ್ಲ.

‘ಮೈಕ್ರೊ ಫೈನಾನ್ಸ್’ ವಿಷವರ್ತುಲ 4

‘ಪಡೆದ ಸಾಲದಲ್ಲಿ ಅರ್ಧದಷ್ಟು ಮಾತ್ರ ಫಲಾನುಭವಿ ತುಂಬಬೇಕು. ಉಳಿದ ಅರ್ಧ ಸಂಘದಿಂದ ತುಂಬುತ್ತೇವೆ. ಇದಕ್ಕೆ ಪ್ರತಿಯಾಗಿ ಸಬ್ಸಿಡಿ ಹಣ ಇಟ್ಟುಕೊಳ್ಳುತ್ತೇವೆ’ ಎಂದು ನಂಬಿಸಿದ್ದಾರೆ. ಆಮಿಷಕ್ಕೆ ಒಳಗಾದ ಜನ ನಾ ಮುಂದು, ತಾ ಮುಂದು ಎಂದು ಸಾಲ ಪಡೆದಿದ್ದಾರೆ.

ಮೊದಲ ಎರಡು ಕಂತು ಸಾಲ ತುಂಬಿದ ಆರೋಪಿಗಳು ನಂತರ ಕೈ ಎತ್ತಿದರು. ಜನರ ಪ್ರತಿಭಟನೆಯ ನಂತರ ಆರೋಪಿಗಳು ಜೈಲು ಸೇರಿದ್ದಾರೆ. ಈಗ ಫೈನಾನ್ಸ್ ಸಿಬ್ಬಂದಿ ಹಾಗೂ ಸಾಲ ಕೊಡಿಸಿದ ಏಜೆಂಟರು ಮನೆಗೆ ಬಂದು ವಸೂಲಿಗೆ ನಿಂತಿದ್ದಾರೆ.

ಬೆಳಗಾವಿ ಜನ ಬ್ಯಾಂಕ್, ಬೈಲಹೊಂಗಲದ ನವಚೇತನ ಫೈನಾನ್ಸ್, ಪಿನ್‌ಕೇರ್ ಫೈನಾನ್ಸ್, ಗೋಕಾಕದ ಶ್ರೀಪಿನ್ ಫೈನಾನ್ಸ್, ಪ್ಯೂಜನ್ ಫೈನಾನ್ಸ್, ಸೌಥ್ ಇಂಡಿಯಾ ಫೈನಾನ್ಸ್, ಅಂಕಲಗಿಯ ಭಾರತ ಫೈನಾನ್ಸ್‌ಗಳು ಸಾಲ ನೀಡಿವೆ. ಕನಿಷ್ಠ ₹2 ಲಕ್ಷದಿಂದ ಗರಿಷ್ಠ ₹8 ಲಕ್ಷದವರೆಗೂ ಈ ಊರಿನ ಜನ ಸಾಲ ಪಡೆದಿದ್ದಾರೆ. ಕೆಲವರಂತೂ ಮೂರು–ನಾಲ್ಕು ಫೈನಾನ್ಸ್‌ಗಳಿಂದಲೂ ಸಾಲ ತೆಗೆದುಕೊಂಡಿರುವ ಬಗ್ಗೆ ಜನರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಫೈನಾನ್ಸ್‌ಗಳ ಹೆಸರೂ ಗೊತ್ತಿಲ್ಲ

ಗಜಮಿನಾಳದಲ್ಲಿ 12 ಫೈನಾನ್ಸ್ ಕಂಪನಿಗಳು ಸಾಲ ನೀಡಿವೆ. ಆದರೆ, ಯಾವ ಫೈನಾನ್ಸ್‌ನಿಂದ ತಾವು ಸಾಲ ಪಡೆದಿದ್ದೇವೆ ಎಂಬುದೂ ಹಲವರಿಗೆ ಗೊತ್ತಿಲ್ಲ. ಅದು ಎಲ್ಲಿಯ ಕಂಪನಿ, ಬಡ್ಡಿದರ ಎಷ್ಟು ಎಂಬುದೂ ಗೊತ್ತಿಲ್ಲ!

‘ಇಬ್ಬರು ಪದೇಪದೇ ಮನೆಗೆ ಬರುತ್ತಾರೆ. ನಿಮ್ಮ ದಾಖಲೆಗಳೆಲ್ಲ ನಮ್ಮ ಬಳಿ ಇವೆ. ಸಾಲದ ಕಂತು ತುಂಬಬೇಕು. ಇಲ್ಲದಿದ್ದರೆ ಮನೆ ಹರಾಜು ಮಾಡಬೇಕಾಗುತ್ತದೆ ಎನ್ನುತ್ತಾರೆ. ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾದ ಮೇಲೆ ಕಿರುಕುಳ ತುಸು ಕಡಿಮೆಯಾಗಿದೆ. ಯಾವಾಗಲಾದರೂ ಸರಿಯೇ, ನೀವು ಸಾಲ ಮತ್ತು ಬಡ್ಡಿ ತುಂಬಲೇಬೇಕೆಂದು ಎಚ್ಚರಿಕೆ ನೀಡಿದ್ದಾರೆ’ ಎಂದು ಸಾಲಗಾರರಾದ ಬಸವ್ವ, ಮಲ್ಲವ್ವ, ಮಡಿವಾಳಪ್ಪ ಮತ್ತು ಇತರರು ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮುಳ್ಳನ್ನು ಬಿತ್ತುವ ಮನುಷ್ಯ ಬರಿಗಾಲಿನಲ್ಲಿ ನಡೆಯಬಾರದು.

-ಪಾಟೀಲ ಪುಟ್ಟಪ್ಪ

ಪ್ರಧಾನಿ ಮೋದಿ ಅಮೆರಿಕ ಭೇಟಿ ಫಲಿತಾಂಶ ಅರಿಯಲು ತುಸು ಕಾಯಬೇಕು

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ವಹಿಸಿಕೊಂಡ ನಂತರ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ನೀಡಿದ ಮೊದಲ ಭೇಟಿ ಸಂದರ್ಭದ ಮಾತುಕತೆಗಳಲ್ಲಿ ವ್ಯಾಪಾರ ವಹಿವಾಟು ಮತ್ತು ಅಕ್ರಮ ವಲಸೆ ವಿಷಯವೇ ಪ್ರಧಾನವಾಗಿತ್ತು. ಟ್ರಂಪ್ ಅವರ ಮೊದಲ ಅಧ್ಯಕ್ಷೀಯ ಅವಧಿಯಲ್ಲಿ ಮೋದಿ ಮತ್ತು ಟ್ರಂಪ್ ಅವರ ನಡುವೆ ಒಳ್ಳೆಯ ಬಾಂಧವ್ಯ ಇತ್ತು. ಮೋದಿ ಮತ್ತು ಟ್ರಂಪ್ ಸ್ನೇಹಿತರೂ ಹೌದು ಎಂಬ ಮಾತುಗಳು ಇವೆ. ಆದರೆ ಎರಡನೆಯ ಅವಧಿಯಲ್ಲಿ ಟ್ರಂಪ್ ಅವರು ಹೆಚ್ಚು ಕಠಿಣವಾಗಿ ನಡೆದುಕೊಳ್ಳುತ್ತಿದ್ದಾರೆ. ಟ್ರಂಪ್ ಅವರು ಎರಡನೆಯ ಅವಧಿಗೆ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಅಮೆರಿಕಕ್ಕೆ ಭೇಟಿ ನೀಡಿದ ವಿದೇಶಿ ಮುಖ್ಯಸ್ಥರ ಪೈಕಿ ಮೋದಿ ಅವರು ನಾಲ್ಕನೆಯವರು. ಅಮೆರಿಕವು ಭಾರತಕ್ಕೆ ನೀಡುವ ಆದ್ಯತೆಯನ್ನು ಇದು ತೋರಿಸಬಹುದು. ಆದರೆ, ಇದಕ್ಕಿಂತ ಹೆಚ್ಚಾಗಿ ಎರಡೂ ದೇಶಗಳು ಸಂಬಂಧವನ್ನು ಹೇಗೆ ನಿರ್ವಹಿಸುತ್ತವೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಅಮೆರಿಕದ ಉತ್ಪನ್ನಗಳಿಗೆ ಯಾವ ದೇಶವು ಎಷ್ಟು ತೆರಿಗೆ ವಿಧಿಸುತ್ತದೆಯೋ ಅಮೆರಿಕ ಕೂಡ ಆ ದೇಶದ ಉತ್ಪನ್ನಗಳ ಮೇಲೆ ಅಷ್ಟೇ ಪ್ರಮಾಣದಲ್ಲಿ ತೆರಿಗೆ ವಿಧಿಸಲಿದೆ ಎಂದು ಟ್ರಂಪ್ ಘೋಷಣೆ ಮಾಡಿರುವ ಹೊತ್ತಿನಲ್ಲಿ, ಭಾರತದ ಅಕ್ರಮ ವಲಸಿಗರನ್ನು ಹೊತ್ತ ಅಮೆರಿಕದ ಇನ್ನೊಂದು ವಿಮಾನ ಭಾರತಕ್ಕೆ ಹಾರಲು ಸಿದ್ಧವಾಗುತ್ತಿದ್ದ ಸಂದರ್ಭದಲ್ಲಿ ಮೋದಿ ಅವರ ಭೇಟಿ ನಡೆದಿದೆ. ಅಮೆರಿಕದ ಕೆಲವು ಉತ್ಪನ್ನಗಳಿಗೆ ಸುಂಕ ವಿನಾಯಿತಿ ನೀಡುವ ಮೂಲಕ ಮೋದಿ ಅವರ ಭೇಟಿಗೆ ಭೂಮಿಕೆಯನ್ನು ಸಜ್ಜುಗೊಳಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿತ್ತು. ಭೇಟಿ ಸಂದರ್ಭದಲ್ಲಿ ಇಬ್ಬರೂ ನಾಯಕರು ಪರಸ್ಪರರನ್ನು ಶ್ಲಾಘಿಸಿಕೊಂಡಿದ್ದು, ಮಾತುಕತೆಗೆ ಪೂರಕ ವಾತಾವರಣವನ್ನು ಸೃಷ್ಟಿಸಿರಬಹುದು.

ಎರಡೂ ದೇಶಗಳು ಪರಸ್ಪರ ಸಂಬಂಧವನ್ನು ಹೇಗೆ ನಿರ್ವಹಿಸುತ್ತವೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ

ಎರಡೂ ದೇಶಗಳ ನಡುವಿನ ಸಂಬಂಧದಲ್ಲಿ ಮುಂದುವರಿಕೆ ಇರುತ್ತದೆ, ಎರಡೂ ದೇಶಗಳ ಹಿತಕ್ಕೆ ಪೂರಕವಾಗುವ ಬಗೆಯಲ್ಲಿ ಸಂಬಂಧದ ನೆಲೆಯು ಇನ್ನಷ್ಟು ವಿಸ್ತಾರವಾಗುತ್ತದೆ ಎಂಬ ಸ್ಪಷ್ಟ ಮಾತುಗಳು ಭೇಟಿಯ ಸಂದರ್ಭದಲ್ಲಿ ಬಂದಿವೆ. ಅಮೆರಿಕ ಮತ್ತು ಭಾರತದ ನಡುವಿನ ಈ ಬಗೆಯ ಸಂಬಂಧವು ಕೆಲವು ವರ್ಷಗಳಿಂದ ವಿಕಾಸ ಹೊಂದಿದೆ. ರಕ್ಷಣಾ ಕ್ಷೇತ್ರ, ವ್ಯಾಪಾರ ವಹಿವಾಟು, ತಂತ್ರಜ್ಞಾನದಲ್ಲಿ ಪಾಲುದಾರಿಕೆಯನ್ನು ಕೇಂದ್ರೀಕರಿಸಿ ಮಾತುಕತೆಗಳು ನಡೆದಿವೆ. ಆದರೆ ಈ ಮಾತುಕತೆಗಳು ಹೇಗೆ ಕಾರ್ಯರೂಪಕ್ಕೆ ಬರಲಿವೆ ಮತ್ತು ಇವುಗಳಿಂದ ಯಾರಿಗೆ ಹೆಚ್ಚು ಪ್ರಯೋಜನ ಎಂಬುದು ಗೊತ್ತಾಗಬೇಕಾದರೆ ಇನ್ನಷ್ಟು ವಿವರಗಳು ತಿಳಿಯಬೇಕಿದೆ. ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟಿನ ಮೊತ್ತವನ್ನು 2030ರ ವೇಳೆಗೆ 500 ಬಿಲಿಯನ್ ಡಾಲರ್‌ಗೆ (ಅಂದಾಜು ₹43.33 ಲಕ್ಷ ಕೋಟಿ) ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಈ ಗುರಿ ಈಡೇರಿಸಲು ವ್ಯಾಪಾರ ಒಪ್ಪಂದವೊಂದರ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ. ಉಭಯ ದೇಶಗಳ ನಡುವೆ ವ್ಯಾಪಾರ ವಹಿವಾಟು ಹೆಚ್ಚಿಸುವ ಇರಾದೆಯು ಸ್ವಾಗತಾರ್ಹವೇ ಆದರೂ ವ್ಯಾಪಾರ ಅಂತರವನ್ನು ಹೆಚ್ಚು ಮಾಡಲು ಟ್ರಂಪ್ ಅವರು ಬಯಸುವುದಿಲ್ಲ ಎಂಬುದು ಸ್ಪಷ್ಟ. ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವ ಪ್ರಮಾಣವನ್ನು ಭಾರತ ಹೆಚ್ಚಿಸಲಿದೆ, ಭಾರತಕ್ಕೆ ತಂತ್ರಜ್ಞಾನದ ವರ್ಗಾವಣೆಗೆ ಈಗಿರುವ ನಿರ್ಬಂಧಗಳನ್ನು ಅಮೆರಿಕವು ಪುನರ್ ಪರಿಶೀಲನೆಗೆ ಒಳಪಡಿಸಲಿದೆ. ಭಾರತಕ್ಕೆ ಅತ್ಯಾಧುನಿಕ ಎಫ್‌-35 ಯುದ್ಧ ವಿಮಾನಗಳನ್ನು ಪೂರೈಸಲಾಗುವುದು ಎಂದು ಟ್ರಂಪ್ ಅವರು ಘೋಷಿಸಿದ್ದಾರೆ. ವ್ಯಾಪಾರ ವಹಿವಾಟು ಹೆಚ್ಚಿಸುವಲ್ಲಿ ರಕ್ಷಣಾ ಉಪಕರಣಗಳ ಆಮದಿನ ಪಾಲು ದೊಡ್ಡದಾಗಿಯೇ ಇರಬಹುದು. ತಂತ್ರಜ್ಞಾನ ಕ್ಷೇತ್ರದಲ್ಲಿನ ಸಹಕಾರ ಕೂಡ ಸುಧಾರಣೆ ಕಾಣಲಿದೆ. ಮಿಲಿಟರಿ ಪಾಲುದಾರಿಕೆ, ವಾಣಿಜ್ಯ ವಹಿವಾಟು ಮತ್ತು ತಂತ್ರಜ್ಞಾನದಲ್ಲಿ ಪರಸ್ಪರ ಪಾಲುದಾರಿಕೆ ಹೆಚ್ಚು ಮಾಡಲು ಎರಡೂ ದೇಶಗಳ ನಾಯಕರು ಸಹಮತ ಸೂಚಿಸಿದ್ದಾರೆ. ಭಾರತವು ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲವನ್ನು ಖರೀದಿಸಲಿದೆ, ಅಣುಶಕ್ತಿ ಕ್ಷೇತ್ರದಲ್ಲಿ ಎರಡೂ ದೇಶಗಳ ನಡುವೆ ಹೆಚ್ಚಿನ ಸಹಕಾರ ಇರಲಿದೆ.

ವಾಣಿಜ್ಯ ವಹಿವಾಟು ಹೆಚ್ಚಿಸಲು ಮತ್ತು ಪರಸ್ಪರರ ನಡುವಿನ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲು ಇದೊಂದು ದೊಡ್ಡ ಹೆಜ್ಜೆ. ಆದರೆ ಹೆಚ್ಚಿನ ಕ್ಷೇತ್ರಗಳಲ್ಲಿ ಭಾರತವು ಖರೀದಿದಾರ ದೇಶವಾಗಿಯೂ ಅಮೆರಿಕವು ಪೂರೈಕೆದಾರ ದೇಶವಾಗಿಯೂ ಇರುತ್ತದೆ ಎಂಬುದನ್ನು ಗಮನಿಸಬೇಕಿದೆ. ಇದರ ಪರಿಣಾಮವು ಸರಿಯಾಗಿ ಅರಿವಿಗೆ ಬರುವುದು, ಅಮೆರಿಕದ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ದೇಶಗಳನ್ನು ಗುರಿಯಾಗಿಸಿಕೊಂಡು ಅಮೆರಿಕವು ಅಷ್ಟೇ ಪ್ರಮಾಣದಲ್ಲಿ ತೆರಿಗೆ ವಿಧಿಸುವ ಕ್ರಮವು ಅನುಷ್ಠಾನಕ್ಕೆ ಬಂದ ನಂತರದಲ್ಲಿ. ಈ ಬಗೆಯ ತೆರಿಗೆ ವಿಧಿಸುವ ಕ್ರಮಕ್ಕೆ ಗುರಿಯಾಗಲಿರುವ ದೇಶಗಳ ಸಾಲಿನಲ್ಲಿ ಭಾರತವೂ ಒಂದು. ಮೋದಿ ಅವರ ಅಮೆರಿಕ ಭೇಟಿಯು ಫಲಪ್ರದ ಎಂಬುದು ನಿಜ. ಆದರೆ, ಭೇಟಿಯ ಫಲಿತಾಂಶ ಏನು ಎಂಬುದು ಮುಂಬರುವ ದಿನಗಳಲ್ಲಿ ಗೊತ್ತಾಗಲಿದೆ.

ನೆಲಕ್ಕೆ ಕಿವಿಯಾನಿಸಿ ನಿಶ್ಶಬ್ದದೊಳಗಣ ಶಬ್ದ ಆಲಿಸುವವನೇ ನಿಜದ ನಾಯಕ

ಅಧ್ಯಕ್ಷಗಿರಿಯತ್ತ ಲಕ್ಷ್ಯ: ಜನಹಿತ ಅಲಕ್ಷ್ಯ



ಗತಿಬಿಂಬ

ವೈ.ಗ. ಜಗದೀಶ್

ವಿಧಾನಸಭೆಯ ಮೂರು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯ ಫಲಿತಾಂಶದ ಬಳಿಕ ಬಿಜೆಪಿ ಮತ್ತು ಕಾಂಗ್ರೆಸ್‌ನ ರಾಜ್ಯ ಘಟಕಗಳಲ್ಲಿ ನಡೆಯುತ್ತಿರುವ ಕಾಲೆಳೆಯುವ ಆಟ, ಅಧ್ಯಕ್ಷ ಸ್ಥಾನವನ್ನೇ ವಿಮೋಚಕನ ಮಟ್ಟಕ್ಕೆ ತಂದು ನಿಲ್ಲಿಸಿದೆ. ನಾಯಕರು ನಿತ್ಯವೂ ಬೈದಾಡಿಕೊಂಡು ನಡೆಸುತ್ತಿರುವ ಪ್ರಹಸನ, ನಾಡಿನ ರಾಜಕಾರಣ ತಲುಪಿರುವ ದುರಂತಕ್ಕೆ ನಿದರ್ಶನ.

ಉಪಚುನಾವಣೆಯಲ್ಲಿ ಸಂಡೂರು ಕ್ಷೇತ್ರವನ್ನು ಉಳಿಸಿಕೊಂಡು, ಬಿಜೆಪಿ, ಜೆಡಿಎಸ್ ಪ್ರತಿನಿಧಿಸಿದ್ದ ಎರಡು ಕ್ಷೇತ್ರಗಳನ್ನೂ ಕಾಂಗ್ರೆಸ್ ಕಿತ್ತುಕೊಂಡಿತು. ಈ ಕ್ಷೇತ್ರಗಳನ್ನು ಮುಖ್ಯಮಂತ್ರಿಗಳಾಗಿದ್ದವರು ಪ್ರತಿನಿಧಿಸಿದ್ದರು. ಅಲ್ಪಸಂಖ್ಯಾತ- ಹಿಂದುಳಿದವರ ಮತಗಳ ಕ್ರೋಡೀಕರಣವೇ ಗೆಲುವಿಗೆ ಕಾರಣ ಎಂಬ ಲೆಕ್ಕಾಚಾರ ಸಿದ್ದರಾಮಯ್ಯನವರ ನಾಯಕತ್ವವನ್ನು ಮತ್ತಷ್ಟು ಬಲಗೊಳಿಸಿತು. ಜೆಡಿಎಸ್‌ನ ಭದ್ರಕೋಟೆಯಂತಿದ್ದ ಚನ್ನಪಟ್ಟಣದಲ್ಲಿ ಅಹಿಂದ ಮತಗಳೇ ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರೋಧಿಗಳಿಗೆ ಹಬ್ಬದಂತಾಯಿತು. ಪಕ್ಷದ ಅಧ್ಯಕ್ಷರಾಗಿ ಚುನಾವಣೆಯನ್ನು ಮುನ್ನಡೆಸಿದ ಶಿವಕುಮಾರ್ ಅವರಿಗೆ ವಿಜಯದಲ್ಲಿ ಪಾಲು ಕೊಡಲು ಒಪ್ಪದ ಅವರ ಎದುರಾಳಿ ಪಡೆ, ಗೆಲುವಿಗೆ ಸಿದ್ದರಾಮಯ್ಯ ಅವರೇ ಕಾರಣ ಎಂದು ಬಿಂಬಿಸಿತು.

ಅಹಿಂದ ಮತಗಳಷ್ಟೇ ಲಿಂಗಾಯತ ಮತಗಳೂ ನಿರ್ಣಾಯಕವಾಗಿರುವ ಸಂಡೂರು ಮತ್ತು ಶಿಗ್ಗಾವಿಯಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲುಂಡರು. ಇದು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನಾಯಕತ್ವಕ್ಕೆ ಆದ ಹಿನ್ನಡೆ ಎಂದೇ ಅವರ ವಿರೋಧಿಗಳು ಬಿಂಬಿಸತೊಡಗಿದರು. ಶಿಗ್ಗಾವಿಯಲ್ಲಿ ಭರತ್ ಬೊಮ್ಮಾಯಿ ಅವರ ಸೋಲಿಗೆ ವಿಜಯೇಂದ್ರ ಅವರೇ ಕಾರಣ ಎಂಬ ಆರೋಪ ಬಲವಾದ ಸದ್ದು ಮಾಡತೊಡಗಿತು.

ಉಪಚುನಾವಣೆ ಫಲಿತಾಂಶವು ಕಾಂಗ್ರೆಸ್ ಹಾಗೂ ಬಿಜೆಪಿಯ ರಾಜ್ಯ ಘಟಕಗಳ ಅಧ್ಯಕ್ಷರನ್ನು ಪದಚ್ಯುತಗೊಳಿಸಬೇಕೆಂಬ ಕೂಗಿಗೆ ಬಲ ತುಂಬಿತು. ಹಾಲಿ ಅಧ್ಯಕ್ಷರ ವಿರೋಧಿ ಬಣದ ಶಕ್ತಿ ಬಲವಾಗತೊಡಗಿದ್ದಲ್ಲದೆ, ವಿರೋಧದ ಕೂಗು ವರಿಷ್ಠರ ಮನೆಯ ಕದ ತಟ್ಟುವವರೆಗೂ ಬೆಳೆಯಿತು.

‘ಈ ಅವಧಿಯಲ್ಲಿಯೇ ಮುಖ್ಯಮಂತ್ರಿ ಆಗಲಿದ್ದೀರಿ’ ಎಂಬ ಜ್ಯೋತಿಷಿ ಮಾತನ್ನು ನಂಬಿದಂತಿರುವ ಶಿವಕುಮಾರ್, ಅಧಿಕಾರ ಹಂಚಿಕೆ ಸೂತ್ರದಂತೆ ಎರಡೂವರೆ ವರ್ಷದ ಬಳಿಕ ಸಿದ್ದರಾಮಯ್ಯನವರು ಅಧಿಕಾರ ಬಿಟ್ಟುಕೊಡಬೇಕಾಗುತ್ತದೆ ಎಂಬ ಸುದ್ದಿಯನ್ನು ತಮ್ಮ ಹಿತೈಷಿಗಳ ಮೂಲಕ ಹರಿಯಬಿಡುತ್ತಿದ್ದಾರೆ. ಪಟ್ಟಕ್ಕೆ ಏರುವ ಮುನ್ನ ಅಧ್ಯಕ್ಷಗಿರಿ ಬಿಟ್ಟುಕೊಟ್ಟರೆ, ಪಕ್ಷದ ಮೇಲಿನ ಹಿಡಿತ ತಪ್ಪುತ್ತದೆ ಎಂಬ ಆತಂಕದಿಂದ ಶಿವಕುಮಾರ್ ಅವರು ಹುದ್ದೆ ಬಿಡಲು ತಯಾರಿಲ್ಲ.

ಬಹುಸಂಖ್ಯಾತ ಶಾಸಕರು ತಮ್ಮ ಬೆನ್ನಿಗೆ ನಿಂತಿರುವುದರ ಅರಿವಿರುವ ಸಿದ್ದರಾಮಯ್ಯ, ‘ಅಧಿಕಾರ ಹಂಚಿಕೆ ಸೂತ್ರವೂ ಇಲ್ಲ, ಒಪ್ಪಂದವೂ ಇಲ್ಲ’ ಎಂಬ ಸ್ಪಷ್ಟ ನುಡಿಗಳನ್ನಾಡುತ್ತಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯು ತನ್ನ ನಾಯಕನನ್ನಾಗಿ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಿದೆ. ಅಧಿಕಾರ ಬಿಡಬೇಕಾದರೆ ಈ ಸಭೆಯೇ ತನ್ನ ನಾಯಕನ ಬಗ್ಗೆ ಅವಿಶ್ವಾಸ ತೋರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನ 136 ಮತ್ತು ಇಬ್ಬರು ಸಹ ಸದಸ್ಯರ ಒಟ್ಟು ಬಲದಲ್ಲಿ ಶೇ 90ಕ್ಕಿಂತ ಹೆಚ್ಚು ಶಾಸಕರು ಸಿದ್ದರಾಮಯ್ಯನವರ ಪರವಾಗಿದ್ದಾರೆ. ಅಧ್ಯಕ್ಷ-ಮುಖ್ಯಮಂತ್ರಿ ಬದಲಾವಣೆಯ ಪ್ರಹಸನ ಇಷ್ಟು ಜೋರಾಗಿ ನಡೆಯುತ್ತಿದ್ದರೂ ಚನ್ನಗಿರಿ ಶಾಸಕ ಬಸವರಾಜ ಶಿವಗಂಗಾ ಬಿಟ್ಟರೆ ಬೇರೆ ಯಾರೂ ಶಿವಕುಮಾರ್ ಪರ ಧ್ವನಿ ಎತ್ತಿಲ್ಲ.

ಇದು ಗೊತ್ತಿದ್ದೇ ಸಿದ್ದರಾಮಯ್ಯ ಅವರು ತಮ್ಮ ಆಪ್ತರನ್ನು ಹುರಿದುಂಬಿಸುತ್ತಿದ್ದಾರೆ. ಐದು ವರ್ಷ ಪೂರ್ಣಗೊಳಿಸುವ ಜತೆಗೆ, 2028ರಲ್ಲಿ ಚುನಾವಣೆಗೆ ಸ್ಪರ್ಧಿಸಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂಬ ನಿಶ್ಚಯಕ್ಕೆ ಅವರು ಬಂದಿದ್ದಾರೆ. ತನಗೆ ಪೈಪೋಟಿ ನೀಡಲು ಅಣಿಯಾಗುತ್ತಿರುವ ಶಿವಕುಮಾರ್ ಅವರನ್ನು ಕಟ್ಟಿಹಾಕುವ ತಂತ್ರವನ್ನು ಹೆಣೆಯುತ್ತಿದ್ದಾರೆ.

ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಕಾಂಗ್ರೆಸ್‌ನ ಹಿರಿಯ ತಲೆಗಳಿಗೆ ಒಲ್ಲದ ಸಂಗತಿ. ಒಂದು ವೇಳೆ ಸಿದ್ದರಾಮಯ್ಯ ಅವರು ಬಿಟ್ಟುಕೊಟ್ಟರೆ ದಲಿತರಿಗೆ ಮುಖ್ಯಮಂತ್ರಿ ಪಟ್ಟ ಕೊಡಿ ಎಂಬ ಪಟ್ಟು ಹಾಕುತ್ತಲೇ ಇದ್ದಾರೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಬೇಡಿಕೆ ಇಡುವುದನ್ನು ತಪ್ಪಿಸಲು ಹಲವು ದಾಳಗಳನ್ನು ಸಿದ್ದರಾಮಯ್ಯ ಆಪ್ತ ಸಚಿವರು ಉರುಳಿಸುತ್ತಿದ್ದಾರೆ.

ಒಬ್ಬರಿಗೆ ಒಂದೇ ಹುದ್ದೆ ನೀತಿಯನ್ನು ಶಿವಕುಮಾರ್ ವಿಷಯದಲ್ಲೂ ಪಾಲನೆ ಮಾಡಬೇಕು, ಇಲ್ಲವೆಂದರೆ ತಮಗೂ ಎರಡು ಹುದ್ದೆ ನೀಡಬೇಕು, ಲೋಕಸಭೆ ಚುನಾವಣೆ ಮುಗಿಯುವವರೆಗಷ್ಟೇ ಶಿವಕುಮಾರ್ ಅಧ್ಯಕ್ಷರಾಗಿ ಮುಂದುವರಿಯುತ್ತಾರೆ ಎಂದು ವರಿಷ್ಠರು ನೀಡಿದ್ದ ವಾಗ್ದಾನ ಯಾಕೆ ಪಾಲನೆಯಾಗಿಲ್ಲ ಎಂಬ ವಾದವನ್ನು ಮುಂದಿಟ್ಟಿದ್ದಾರೆ.

ಉಪಮುಖ್ಯಮಂತ್ರಿ ಸ್ಥಾನದ ಜತೆಗೆ ಬೆಂಗಳೂರು ಅಭಿವೃದ್ಧಿ ಮತ್ತು ಜಲಸಂಪನ್ಮೂಲದಂತಹ ನಿರ್ಣಾಯಕವಾಗಿರುವ ಎರಡು ಖಾತೆಗಳು ಶಿವಕುಮಾರ್ ಬಳಿ ಇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಜಲಮಂಡಳಿ, ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಜತೆ, ಜಲಸಂಪನ್ಮೂಲ ಇಲಾಖೆಯ ನಾಲ್ಕು ನಿಗಮಗಳ ನಿರ್ವಹಣೆ ಮಾಡಬೇಕಿದೆ. ಇವೆಲ್ಲದರ ಜತೆಗೆ ಪಕ್ಷ ಕಟ್ಟುವ ಕೆಲಸವನ್ನು ಅವರು ಮಾಡಲಾಗದು, ಅದನ್ನು ಬಿಟ್ಟುಕೊಡಲಿ ಎಂಬ ಪಟ್ಟನ್ನು ಎದುರಾಳಿಗಳು ಹಾಕುತ್ತಿದ್ದಾರೆ.

ಪಕ್ಷ ಕಟ್ಟುವಲ್ಲಿನ ಪರಿಶ್ರಮ ಹಾಗೂ ಪಕ್ಷ ನಿಷ್ಠೆಯಲ್ಲಿ ಶಿವಕುಮಾರ್ ಅಪ್ರತಿಮರು. ತಮ್ಮ ಅಪಾರ ಸಂಪತ್ತಿಗೆ ತಕ್ಕಂತೆ ಕಾರ್ಪೊರೇಟ್ ಶೈಲಿಯ ರಾಜಕಾರಣ ಅವರದ್ದು. ಜನರನ್ನು ಬಡಿದೆಬ್ಬಿಸಿ ಹುಯಿಲೆಬ್ಬಿಸುವುದು ಗೊತ್ತು, ಹಣದ ಆಟದ ರಾಜಕೀಯವೂ ಕರಗತ. ಇದೇ ಅವರ ಶಕ್ತಿ ಹಾಗೂ ಮಿತಿ. ಪಕ್ಷ ಮತ್ತು ಸರ್ಕಾರವನ್ನು ಮುನ್ನಡೆಸಲು ಸಂಪತ್ತೊಂದೇ ಮಾನದಂಡವಲ್ಲ, ಅದಕ್ಕೆ ಅಂಟಿಕೊಂಡೇ ಬರುವ ದರ್ಪ ಇರಬಾರದು. ಜನಮಾನಸದಲ್ಲಿ ನೆಲೆ ನಿಂತು, ಅವರ ಒಳಗಿನಿಂದಲೇ ನಾಯಕನಾಗಿ ಹೊರಹೊಮ್ಮಬೇಕೇ ವಿನಾ ಅದನ್ನು ಮೇಲಿನಿಂದ ಹೇರಲಾಗದು. ಶಿವಕುಮಾರ್ ವಿರೋಧಿ ಪಡೆ ಬಲವಾಗಲು ಅವರ ಈ ಮಿತಿಗಳೇ ಕಾರಣ.

ಅತ್ತ, ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರ ಕತೆಯೂ ಹೀಗೆಯೇ. ಸಂಪತ್ತು ತಂದ ಗರ್ವ, ತಾನು ಹೇಳಿದ್ದೇ ನಡೆಯಬೇಕೆಂಬ ಉದ್ಧಟತನವೇ ಅವರ ಸಮಸ್ಯೆ ಎಂಬುದು ಎದುರಾಳಿಗಳ ಟೀಕೆ. ಕಿರಿಯ ವಯಸ್ಸಿನಲ್ಲಿ ಅಧಿಕಾರ ಸಿಕ್ಕಾಗ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಸಂಘಟಿಸುವ ಛಾತಿಯನ್ನು ಅವರು ತೋರಬೇಕಾಗಿತ್ತು. ಆ ವಿನಯ ಮತ್ತು ನೈಪುಣ್ಯ ಇಲ್ಲದಿರುವುದಕ್ಕೆ ಎದುರಾಳಿ ಗುಂಪು ಬಲವಾಗುತ್ತಿದೆ. ಬೀದಿಯಲ್ಲಿ ನಿಂತು ಗುಟುರು ಹಾಕುತ್ತಿದ್ದ ಬಸನಗೌಡ ಪಾಟೀಲ ಯತ್ನಾಳ ಜತೆ ಈಗ ಕೆಲವು ಶಾಸಕರೂ ಸೇರಿದ್ದಾರೆ. ವಿಜಯೇಂದ್ರ ಅವರ ಹಿಂದೆ ಪಕ್ಷದ ಮುಖಂಡರ ದೊಡ್ಡ ಗುಂಪು ಇದೆಯಾದರೂ ಅವರ ಪರ ಬಹಿರಂಗವಾಗಿ ಧ್ವನಿ ಎತ್ತುತ್ತಿರುವ ಶಾಸಕರ ಸಂಖ್ಯೆ ಕಡಿಮೆ ಇದ್ದಂತಿದೆ. ಸಂಸದರಲ್ಲಿ ಒಬ್ಬರೂ ಅವರ ಪರ ಧ್ವನಿಯೆತ್ತಿಲ್ಲ.

ಕಾಂಗ್ರೆಸ್‌ನಲ್ಲಿ ಅಧ್ಯಕ್ಷರನ್ನು ಇಳಿಸುವ ಆತುರದಲ್ಲಿರುವ ಸಚಿವರಿಗೆ ತಮ್ಮ ಇಲಾಖೆಯ ಕೆಲಸದ ಮೇಲೆ ಲಕ್ಷ್ಯವಿಲ್ಲ. ಸಿದ್ದರಾಮಯ್ಯ ಇಳಿದರೆ ತಾವು ಆ ಪಟ್ಟಕ್ಕೆ ಏರಬೇಕೆಂಬ ತವಕದಲ್ಲಿ, ಸಮಾವೇಶಗಳನ್ನು ಆಯೋಜಿಸಲು ಮುಂದಾಗಿದ್ದಾರೆ. ದಲಿತರ ಸಮಾವೇಶವೀಗ ಶೋಷಿತರ ಸಮಾವೇಶವಾಗಿ ಬದಲಾಗಿದೆ. ಇದರ ಹಿಂದೆ ಶೋಷಿತ ಸಮುದಾಯಗಳ ಉದ್ಧಾರಕ್ಕಿಂತ ರಾಜಕೀಯ ಮೇಲಾಟವೇ ಢಾಳಾಗಿ ಕಾಣಿಸುತ್ತಿದೆ.

ಸರ್ಕಾರದ ಅನೇಕ ವೈಫಲ್ಯಗಳು ಜನರನ್ನು ಸಂಕಷ್ಟಕ್ಕೆ ದೂಡಿವೆ. ಅವನ್ನೆಲ್ಲ ಮುಂದಿಟ್ಟು ಹೋರಾಟ ರೂಪಿಸುವ ವಿಪುಲ ಅವಕಾಶ ಬಿಜೆಪಿಗೆ ಇದೆ. ಅಧ್ಯಕ್ಷ ಸ್ಥಾನ ಕಿತ್ತುಕೊಳ್ಳುವ ಉಮೇದು ಕಾಣಿಸುತ್ತಿದೆಯೇ ವಿನಾ ಸಮರೋತ್ಸಾಹವೇ ಕಾಣಿಸುತ್ತಿಲ್ಲ. ಮಹಿಳಾ ಅಧಿಕಾರಿಗೆ ಭದ್ರಾವತಿಯ ಶಾಸಕ ಬಿ.ಕೆ. ಸಂಗಮೇಶ್ವರ ಅವರ ಪುತ್ರ ಹೀನಾಮಾನ ಬೈದ ಪ್ರಕರಣ ವರದಿಯಾಗಿದೆ. ವಿಜಯೇಂದ್ರ ಅವರು ತಮ್ಮ ತವರು ಜಿಲ್ಲೆಯಲ್ಲಿ ನಡೆದ ಇಂತಹ ಹೀನ ಕೃತ್ಯದ ವಿರುದ್ಧ ಹೋರಾಟ ಕಟ್ಟುವುದು ಹೋಗಲಿ, ಅತ್ತ ಮುಖ ಹಾಕಲೂ ಇಲ್ಲ. ವಿರೋಧ ಪಕ್ಷದ ನಾಯಕರಿಬ್ಬರೇ ಪ್ರತಿಭಟನೆ ನಡೆಸುವ ದುಃಸ್ಥಿತಿಗೆ ಬಿಜೆಪಿ ತಲುಪಿದೆ.

ಅಧಿಕಾರದ ಸುತ್ತ ಹೆಣೆದ ಬಲೆಯೊಳಗೆ ಸಿಲುಕಿ ಒದ್ದಾಡುತ್ತಿರುವ ರಾಜಕಾರಣಿಗಳಿಗೆ ಜನಹಿತ ಬೇಕಿಲ್ಲ. ಸಂಪತ್ತಿನಿಂದ ಜಗತ್ತನ್ನೇ ಗೆಲ್ಲಬಲ್ಲೆ ಎಂದು ನಂಬಿ ಕೂತ ನೇತಾರರನ್ನು ಜನ ಎಂದೂ ಒಪ್ಪಿಲ್ಲ, ಒಪ್ಪುವುದೂ ಇಲ್ಲ.

ಚುರುಮುರಿ

ತಳಿಗುಣ ಅಭಿವೃದ್ಧಿ

• ಸುಮಂಗಲಾ

‘41 ಕೋಟಿ ರೂಪಾಯಿ... ಅಂದರೆ 41ರ ಮುಂದೆ ಏಳು ಸೊನ್ನೆ... ಅಬ್ಬಬ್ಬಾ!’ ಬೆಕ್ಕಣ್ಣ ಸುದ್ದಿ ಓದುತ್ತ ಮೂಗಿನ ಮೇಲೆ ಬೆರಳಿಟ್ಟು ಉದ್ಗರಿಸಿತು.

ನಾನು ಬೆಕ್ಕಣ್ಣನ ಕೈಯಲ್ಲಿದ್ದ ಪೇಪರಿನಲ್ಲಿ ಇಣುಕಿದೆ. ದೊಡ್ಡ ಬೆಳ್ಳನೆಯ ಹಸು ಕಾಣಿಸಿತು.

‘ನೋಡು... ನಮ್ಮ ಪಕ್ಕದ ಆಂಧ್ರ ಮೂಲದ ಒಂಗೋಲು ಹಸು ಬ್ರೆಜಿಲ್‌ನಾಗೆ 41 ಕೋಟಿ ರೂಪಾಯಿಗೆ ಮಾರಾಟವಾಗಿ ಗಿನ್ನೆಸ್ ದಾಖಲೆ ಸೇರ್‍ತಂತೆ’.

ಬೆಕ್ಕಣ್ಣ ತೋರಿಸಿದ ಸುದ್ದಿ ಓದಿದ ನನಗೂ ಅಚ್ಚರಿಯಾಯಿತು.

‘ನೀವು ಇಲ್ಲಿ ಹಸು ಅಂದರೆ ಬೆಲೆ ಕಟ್ಟಲಾಗದಷ್ಟು ಅಮೂಲ್ಯ ಅಂತ ಮಾತಿನ ಮಂಟಪ ಕಟ್ತೀರಿ. ಆದರೆ ಹಸುಗಳಿಗೆ ನಿಜವಾದ ಬೆಲೆ ಇರೋದು ಅಲ್ಲಿ’ ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

‘ನಮ್ಮಲ್ಲಿ ಒಂಗೋಲು ಹಸು ಒಂದು ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗೆ ಮಾರಾಟವಾದ್ರೆ ಹೆಚ್ಚು. ಅವ್ರು ಇಲ್ಲಿಂದ ತಗಂಡುಹೋದ ಒಂಗೋಲು ಹಸುಗಳ ಸೆಲೆಕ್ಟಿವ್ ಬ್ರೀಡಿಂಗ್, ಜೆನೆಟಿಕ್ ಇಂಪ್ರೂವ್‌ಮೆಂಟ್ ಅಂತೆಲ್ಲ ಭಾರೀ ವೈಜ್ಞಾನಿಕ ಅಭಿವೃದ್ಧಿ ಮಾಡ್ಯಾರಂತೆ. ಈಗ ವಯಾಟಿಕಾ– 19 ಅಂತ ಹೆಸರಿಟ್ಟ ಆ ಹಸುಗಳನ್ನು ಕೋಟಿಗಟ್ಟಲೆ ರೊಕ್ಕಕ್ಕೆ ಮಾರ್‍ತಾರೆ’ ಎಂದೆ.

‘ಒಂದೂವರೆ ಶತಮಾನದ ಹಿಂದೆನೇ ಅವ್ರು ಈ ಹಸುಗಳ ತಳಿಗುಣ ಎಷ್ಟು ಅಪರೂಪದ್ದು ಅಂತ ತಿಳಕಂಡು, ಜೆನೆಟಿಕ್ ಇಂಪ್ರೂವ್‌ಮೆಂಟ್ ಮಾಡ್ಯಾರಂತೆ. ಹಿತ್ತಲಗಿಡ ಮದ್ದಲ್ಲ ಅನ್ನೂದು ಸುಳ್ಳಲ್ಲ’ ಬೆಕ್ಕಣ್ಣ ಮತ್ತೆ ಹಂಗಿಸಿತು.

‘ನಮ್ಮಲ್ಲೂ ಹಂಗೆ ತಳಿಗುಣ ಅಭಿವೃದ್ಧಿ ಪಡಿಸಬೇಕು. ಒಂಗೋಲು ಹಸುಗಳದ್ದು ಮಾತ್ರವಲ್ಲ, ಮುಧೋಳ ನಾಯಿಗಳಂತಹ ಅಪರೂಪದ ತಳಿಗುಣ ಇರೋ ಬೇರೆ ಜೀವಿಗಳದ್ದೂ ಮಾಡಬೇಕು’ ಎಂದೆ.

‘ಅವಾಗ ಮಂತ್ರಿ ಕುರ್ಚಿ ತಮ್ಮ ವಂಶದಲ್ಲೇ ಇರಲಿ ಅನ್ನೋ ರಾಜಕಾರಣಿಗಳು ತಮ್ಮದೇ ಜೆನೆಟಿಕ್ ಇಂಪ್ರೂವ್‌ಮೆಂಟ್ ಮಾಡಿ, ಮುಂದಿನ ತಲೆಮಾರಿನಲ್ಲಿ ತಮ್ಮ ಕುರ್ಚಿ ಕೌಶಲ ಇನ್ನಷ್ಟು ಅಭಿವೃದ್ಧಿಯಾಗಲಿ ಅಂತ ಸಾಲುಗಟ್ಟಿ ನಿಲ್ತಾರೆ!’ ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ದಿನದ ಟ್ವೀಟ್

ಸಾರ್ವಜನಿಕ ಸಾರಿಗೆ: ಉದ್ದೇಶ ಅರಿಯಿರಿ

ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಮುಖ್ಯ ಉದ್ದೇಶ ಲಾಭ ಗಳಿಸುವುದೊಂದೇ ಆಗಿರಬಾರದು. ಜನರನ್ನು ಸಮೂಹ ಸಾರಿಗೆ ಕಡೆ ಸೆಳೆಯಲು ಮಾಡುವ ಸಕಲ ಪ್ರಯತ್ನಗಳಲ್ಲಿ ಕಡಿಮೆ ದರವು ಪ್ರಮುಖ ಅಂಶ. ಒಟ್ಟಾರೆ, ವಾಯುಮಾಲಿನ್ಯ ಕಡಿತಗೊಂಡರೆ, ಪೆಟ್ರೋಲ್ ಆಮದು ಮೊತ್ತ ಕಡಿಮೆಯಾದರೆ, ಸಂಚಾರ ದಟ್ಟಣೆ ತಗ್ಗಿದರೆ ಸರ್ಕಾರಕ್ಕೆ ತಾನೆ ಲಾಭ. ಸರ್ಕಾರ ಈ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಲಿ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಬೆಂಗಳೂರಿನಲ್ಲಿ ಹೆಚ್ಚಿನ ಆಟೊ ಚಾಲಕರು ನಿಯಮ ಪಾಲಿಸುವುದಿಲ್ಲ, ಅವರಿಗೆ ಕಾನೂನಿನ ಭಯವಿಲ್ಲ, ತಪ್ಪು ಮಾರ್ಗದಲ್ಲಿ ಸಂಚರಿಸುವುದು, ಅಜಾಗರೂಕ ಚಾಲನೆ, ಅನುಚಿತ ನಡವಳಿಕೆ ಎಲ್ಲವೂ ಅವರಲ್ಲಿ ಒಟ್ಟಿಗೇ ಸೇರಿಕೊಂಡಿರುತ್ತವೆ. ಭಾರತದಾದ್ಯಂತ ಎಲ್ಲ ಬಗೆಯ ವಾಹನಗಳಿಗೆ ಹೇಗೆ ಚಾಲನಾ ಪರವಾನಗಿ ನೀಡಲಾಗುತ್ತದೆ ಎಂಬ ಬಗ್ಗೆ ಪರಾಮರ್ಶೆ ನಡೆಯಬೇಕಿದೆ. ಪ್ರಾದೇಶಿಕ ಸಾರಿಗೆ ಕಚೇರಿಗಳು ಭ್ರಷ್ಟಾಚಾರದ ಕೂಪಗಳಾಗಿವೆ.

ಸುಮಿತ್ ಪಂತ್

25 ವರ್ಷಗಳ ಹಿಂದೆ

ಗುರುವಾರ, 17-2-2000

• **ಕೃಪಾಂಕ: ಆಯೋಗ ರಚಿಸಲು ನಿರ್ಧಾರ**

ಬೆಂಗಳೂರು, ಫೆ. 16– ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಕೃಪಾಂಕ ನೀಡಲು ಆ ಪ್ರದೇಶದಲ್ಲಿ ವಾಸಿಸುವವರೆಲ್ಲರೂ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದಾರೆಯೇ ಹಾಗೂ ಅವರಿಗೆ ಸರ್ಕಾರಿ ನೌಕರಿಯಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರೆತಿದೆಯೇ ಎಂಬುದರ ಬಗ್ಗೆ ಅಧ್ಯಯನ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಆಯೋಗ ರಚಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕ ನೀಡಿರುವ ಆಜ್ಞೆಯನ್ನು ಹೈಕೋರ್ಟ್ ರದ್ದುಪಡಿಸಿದುದನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುವ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 17-2-1975

• **ವಿದ್ಯಾರ್ಥಿಗಳು, ಶಿಕ್ಷಕರನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ಬೇಡ**

ಬೆಂಗಳೂರು, ಫೆ. 16– ವಿದ್ಯಾರ್ಥಿಗಳನ್ನು ಹಾಗೂ ಉಪಾಧ್ಯಾಯರನ್ನು ತಮ್ಮ ರಾಜಕೀಯಕ್ಕೆ ಉಪಯೋಗಿಸಿಕೊಳ್ಳುವುದಿಲ್ಲ ಎಂದು ಎಲ್ಲ ರಾಜಕೀಯ ಪಕ್ಷಗಳು ಒಪ್ಪಂದಕ್ಕೆ ಬರಬೇಕೆಂದು ಕುಲಪತಿ ಎಚ್. ನರಸಿಂಹಯ್ಯ ಅವರು ಇಂದಿಲ್ಲಿ ತಿಳಿಸಿದರು.

ಶಿಕ್ಷಕರು ಸಹ ವಿದ್ಯಾರ್ಥಿಗಳನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳಬಾರದು ಎಂದು ಸರ್ಕಾರಿ ಆರ್ಟ್ಸ್ ಕಾಲೇಜಿನಲ್ಲಿ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಕರ ಸಂಘಗಳ ಫೆಡರೇಷನ್ ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ವಿದ್ಯಾಕ್ಷೇತ್ರದಲ್ಲಿ ವಾತಾವರಣ ಹದಗೆಟ್ಟಿದೆ ಎಂದು ಹೇಳಿದ ನರಸಿಂಹಯ್ಯ, ಚಳವಳಿ ಪ್ರಾರಂಭಿಸುವ ಮೊದಲು ವಿದ್ಯಾರ್ಥಿಗಳು ಸಭೆ ಸೇರಿ ಸಮಸ್ಯೆಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸುತ್ತಿಲ್ಲ. ಹೀಗಾಗಿ, ನಮ್ಮ ದೇಶ ‘ಎಡವಟ್ ದೇಶ’ದಂತಾಗಿದೆ. ಕೇವಲ ಬಿಸಿಲಿಗೆ ಹಣ್ಣಾದಂತಾಗಿದೆ. ಸಭೆ–ಚರ್ಚೆ ಯಾವುದೂ ಇಲ್ಲದೆ ಬರೀ ಕಲ್ಲೆಸೆತವಾಗಿ–ಗುಡ್ಡಗಾಡಿನ ಜನರಂತಾಗಿದ್ದೇವೆ’ ಎಂದರು.

• **ನವನಿರ್ಮಾಣ ಕ್ರಾಂತಿ ಸಂಸ್ಥೆಯ ಉದಯ**

ಬೆಂಗಳೂರು, ಫೆ. 16– ಬೆಳಿಗ್ಗೆ ಕವಿದಿದ್ದ ಮೋಡ ಕರಗಿ ತಿಳಿಯಾದ ವಾತಾವರಣದಲ್ಲಿ ಸಮಾಜದ ಭ್ರಷ್ಟಾಚಾರದ ಕಾರ್ಮೋಡ ಕರಗಿಸುವ ಆಶಾಕಿರಣ ಹೊತ್ತ ನೂತನ ಸಂಸ್ಥೆ ಇಂದು ಜನ್ಮತಾಳಿತು.

ಕುಮಾರಪಾರ್ಕಿನ ಗಾಂಧಿ ಭವನದಲ್ಲಿ ‘ಹಿರಿಯರ ಅನುಭವ–ಕಿರಿಯರ ಆದರ್ಶದ ಸಮ್ಮಿಲನ’ದ ಪರಿಣಾಮವೇ ‘ನವ ನಿರ್ಮಾಣ ಕ್ರಾಂತಿ’ ಸಂಸ್ಥೆಯ ಉದಯವೆಂದು ನಾಂದಿ ಹಾಡುವುದರ ಮೂಲಕ, ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ರಾಜಕಾರಣಿ ಕಡಿದಾಳ್ ಮಂಜಪ್ಪ ಅವರಿಂದ ಸಂಸ್ಥೆಗೆ ವಿಧಿವತ್ತಾಗಿ ಅಂಕುರಾರ್ಪಣೆ ಮಾಡಲಾಯಿತು.

‘ದುಷ್ಟರೂ ಭ್ರಷ್ಟರೂ ಸಮಯ ಸಾಧಕರೂ ಸ್ವಾರ್ಥ ಸಾಧಕರೂ ರಾಜಕಾರಣದಲ್ಲಿ ತಲೆ ಎತ್ತದಂತೆ ಮಾಡಿ, ದೇಶದ ರಾಜಕೀಯ ಮತ್ತು ಆಡಳಿತಕ್ಕೆ ವ್ಯಾಪಿಸಿರುವ ರೋಗಕ್ಕೆ ಪ್ರಬಲವಾದ ನೂತನ ಚಿಕಿತ್ಸೆಯ ಕಾಯಕಲ್ಪ ಮಾಡುವುದೇ ಈ ಸಂಸ್ಥೆಯ ಗುರಿ’ ಎಂದು ಅದರ ಧ್ಯೇಯೋದ್ದೇಶಗಳನ್ನು ಅವರು ವಿವರಿಸಿದರು.

ಸಂಗತ

ವಿಶ್ವವಿದ್ಯಾಲಯ: ಸಂಖ್ಯೆಯಷ್ಟೆ ಮುಖ್ಯವೇ?

ವ್ಯಾಪಕವಾದ, ಗಹನವಾದ ಅಂತರ್ಶಿಸ್ತೀಯ ಅಧ್ಯಯನಗಳು ನಡೆಯುವ ವಿಶ್ವವಿದ್ಯಾಲಯಗಳು ನಮ್ಮಲ್ಲಿ ಇವೆಯೇ ಎಂದು ಕೇಳಿಕೊಂಡರೆ ನಿರಾಸೆ ಕಟ್ಟಿಟ್ಟ ಬುತ್ತಿ

ರಾಜ್ಯದಲ್ಲಿ ಈ ಹಿಂದೆ ಇದ್ದ ಸರ್ಕಾರವು ಯಾವ ಪೂರ್ವಸಿದ್ಧತೆಯೂ ಇಲ್ಲದೆ ತರಾತುರಿಯಲ್ಲಿ ಆರಂಭಿಸಿದ ಹತ್ತು ವಿಶ್ವವಿದ್ಯಾಲಯಗಳ ಪೈಕಿ ಒಂಬತ್ತನ್ನು ಮುಚ್ಚಲು ಸಚಿವ ಸಂಪುಟ ಉಪಸಮಿತಿ ತೀರ್ಮಾನಿಸಿದೆ ಎಂದು ವರದಿಯಾಗಿದೆ (ಪ್ರ.ವಾ., ಫೆ. 14). ಇದು ಸರಿಯಾದ ನಡೆ.

ಇಂದು ವಿಶ್ವವಿದ್ಯಾಲಯಗಳೆಂದು ನಾವು ಕರೆಯುವ ನಮ್ಮ ಈ ಆಧುನಿಕ ಕಾಲದ ಬೋಧನ-ಶೋಧನ ಸಂಸ್ಥೆಗಳ ತತ್ವವೇನು, ಅವುಗಳ ರೂಪುರೇಷೆ ಮತ್ತು ಸಂರಚನೆ ಎಂಥದ್ದಿರಬೇಕು, ಯಾವೆಲ್ಲ ವಿಷಯಗಳನ್ನು ಯಾವ ಯಾವ ಪರಿಪ್ರೇಕ್ಷ್ಯದಲ್ಲಿ ಬೋಧಿಸಬೇಕು, ಶೋಧಿಸಬೇಕು ಎಂಬ ಪರಿಕಲ್ಪನೆಗೊಂದು ನಿಖರವಾದ ರೂಪ ಬಂದದ್ದು ಈಗ್ಗೆ ಇನ್ನೂರು-ಇನ್ನೂರೈವತ್ತು ವರ್ಷಗಳ ಹಿಂದೆ. ಜಾಗತಿಕ ಮಟ್ಟದಲ್ಲಿ, ಸೆಕ್ಯುಲರ್ ಆದ ಜ್ಞಾನವೃದ್ಧಿಗೆ ಕೊಡುಗೆಯನ್ನು ಕೊಡುತ್ತಾ ಬಂದಿರುವ ವಿಶ್ವವಿದ್ಯಾಲಯಗಳೆಲ್ಲವೂ ಆ ತತ್ವ, ರೂಪುರೇಷೆ ಮತ್ತು ಸಂರಚನೆಗಳ ಮಾದರಿಯನ್ನು ಶ್ರದ್ಧೆಯಿಂದ ಅಳವಡಿಸಿಕೊಂಡು ಬಂದಿರುವ ಸಂಸ್ಥೆಗಳಾಗಿವೆ.

ಆದರೆ, ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಬೆರಳೆಣಿಕೆಯ ಕೆಲವನ್ನು ಬಿಟ್ಟರೆ, ಉಳಿದೆಲ್ಲ ವಿಶ್ವವಿದ್ಯಾಲಯಗಳು ತಮ್ಮಲ್ಲಿನ ವಿದ್ಯಾರ್ಥಿಗಳಿಗೆ ಪ್ರಾಪಂಚಿಕವಾದ ಸ್ಥೂಲ ಮಾಹಿತಿಯನ್ನು ಕೊಟ್ಟು ಅಕ್ಷರಸ್ಥ, ಅರೆಬರೆ ಅಕ್ಷರಸ್ಥ ಕೂಲಿಗಳನ್ನು ಸೃಷ್ಟಿಸುವ ದೊಡ್ಡ ಕಾರ್ಖಾನೆಗಳಾಗಿವೆ. ಪದವೀಧರರಿಗೆ ಬರೀ ಸರಳ- ಸರಳೀಕೃತ ಮಾಸ್ತರಿಕೆಯ ಕೆಲಸ ಕೊಟ್ಟು, ಸಂಬಳಸಮೇತವಾದ ಜೀವನೋಪಾಯ ಒದಗಿಸುವ ದೊಡ್ಡಿಗಳಾಗಿವೆಯಷ್ಟೇ ವಿನಾ ವಿದ್ಯಾರ್ಥಿಗಳಲ್ಲಿಯಾಗಲಿ, ಅಧ್ಯಾಪನ ವರ್ಗದವರಲ್ಲಿಯಾಗಲಿ ತಾವು ಬೌದ್ಧಿಕವಾದ, ಮಾನಸಿಕವಾದ ದೊಡ್ಡ ದರ್ಶನವನ್ನು ಪಡೆಯಬೇಕು, ಅಂಥ ದರ್ಶನವನ್ನು ಪಡೆಯುವುದರತ್ತ ಸಂಶೋಧನೆ ಮಾಡಿ ಲೋಕಕ್ಕೆ ನೀಡಬೇಕು ಎಂಬ ಉತ್ಕಟತೆ ಹಾಗೂ ಶ್ರದ್ಧೆಯನ್ನು ಹುಟ್ಟುಹಾಕುವ ಅರಿವಿನ ಚಿಲುಮೆಗಳಾಗಿಲ್ಲ.

ನಮ್ಮ ಸರ್ಕಾರಗಳು ಉಗ್ರಾಣ, ಮಾರುಕಟ್ಟೆಗಳನ್ನು ಸ್ಥಾಪಿಸುವುದಕ್ಕಾದರೂ ಕೆಲವು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತವೆ. ಆದರೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಾಗ ಅಂತಹ ಯಾವ ಪೂರ್ವತಯಾರಿಯನ್ನೂ ಮಾಡಿಕೊಳ್ಳುವುದಿಲ್ಲ. ಯಾವುದೋ ಒಂದು ಜನವರ್ಗವನ್ನು ಓಲೈಸಲು ಆ ವರ್ಗದವರಿಗೆ ಪ್ರಿಯವಾದ ವಿಷಯವೊಂದಕ್ಕೆ ಮೀಸಲಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು, ಅಲ್ಲಿ ತಮ್ಮ ರಾಜಕೀಯದ ಲೆಕ್ಕಾಚಾರಗಳನ್ನು ಒಪ್ಪಿ, ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ವ್ಯಕ್ತಿಗಳನ್ನು ಕುಲಪತಿಯ ಸ್ಥಾನಕ್ಕೂ ಅಧಿಕಾರದ ಬೇರೆಬೇರೆ ಸ್ಥಾನಗಳಿಗೂ ನೇಮಿಸುವುದು– ಹೀಗೆ ಸಾಗಿದೆ ಸರ್ಕಾರಗಳ ಆಟ. ಹಾಗೆ ಶುರುವಾದ ಸಂಸ್ಥೆಗಳಲ್ಲಿ ಕಟ್ಟಡಗಳು, ಬೋಧಿಸುವವರು, ಪ್ರಯೋಗಶಾಲೆಗಳು, ಸರಿಯಾದ ಗ್ರಂಥಾಲಯ, ಅಗತ್ಯವಾದ ಬೇರೆ ಸಿಬ್ಬಂದಿ ಇರುವುದಿಲ್ಲ, ಅಧ್ಯಯನಾಂಗಗಳಲ್ಲಿ ವಿದ್ಯಾರ್ಥಿಗಳೂ ಇರುವುದಿಲ್ಲ– ಇದು ಇಂದಿನ ನಮ್ಮ ಉನ್ನತ ಶಿಕ್ಷಣದ ದುಃಸ್ಥಿತಿ.

ಇನ್ನು ತಲೆಗೊಂದು ತೋಕೆಗೊಂದು ಎಂಬಂತೆ ಹುಟ್ಟುಹಾಕಲಾಗಿರುವ ವಿಷಯವಾರು ವಿಶ್ವವಿದ್ಯಾಲಯಗಳನ್ನು ನೋಡಿ. ಜಾನಪದ, ಸಂಗೀತ ಮತ್ತು ಲಲಿತ ಕಲೆ, ಸಂಸ್ಕೃತ, ಮಹಿಳಾ ಸಂಬಂಧಿತ ಅಧ್ಯಯನ– ಇಂಥ ಒಂದೊಂದು ವಿಷಯಕ್ಕೂ ಸ್ವತಂತ್ರವಾದ ಒಂದೊಂದು ವಿಶ್ವವಿದ್ಯಾಲಯವೇ ಸ್ಥಾಪನೆಗೊಂಡಿರುವುದು ಅಸಂಗತವೂ ಅಸಂಬದ್ಧವೂ ಆಗಿದೆ. ನಮ್ಮಲ್ಲಿ ಯಾಕೆ ಹೀಗಾಗಿದೆಯೆಂದರೆ, ನಮಗೆ ವಿಶ್ವವಿದ್ಯಾಲಯವೆಂದರೆ ಏನು ಎಂಬುದೇ ಇನ್ನೂ ಅರ್ಥ ಆದಂತಿಲ್ಲ. ಒಂದು ವಿಶ್ವವಿದ್ಯಾಲಯವೆಂದರೆ ಆ ಮಾತಿನ ಅಸಲಿ ಅರ್ಥ ಮತ್ತು ಅದರ ತತ್ವ ಹೀಗಿದೆ: ಅಲ್ಲಿ ಜೀವ, ಭೌತ, ರಸಾಯನ, ಗಣಿತ, ಖಗೋಳ, ಯಂತ್ರ-ತಂತ್ರ, ಭೂಗರ್ಭದಂತಹ ಭೌತಿಕ ವಿಜ್ಞಾನಗಳು ಮತ್ತು ಸಮಾಜ, ಸಾಹಿತ್ಯ, ಇತಿಹಾಸ, ಆರ್ಥಿಕ, ರಾಜಕೀಯ, ಮಾನಸಿಕ, ತತ್ವಜ್ಞಾನದಂತಹ ಮಾನವಿಕ ಶಾಸ್ತ್ರಗಳು ಹಾಗೂ ನೃತ್ಯ-ನಾಟಕ, ಸಂಗೀತ-ಚಿತ್ರಕಲೆಯಂತಹ ಲಲಿತಕಲೆಗಳು ಹಾಗೂ ಇಲ್ಲಿ ಹೆಸರಿಸದ ಇನ್ನೆಷ್ಟೋ ವಿಷಯಗಳು– ವಿಶಾಲ ವಿಶ್ವದ ಎಲ್ಲವುದರ ಬೋಧನ, ಅಧ್ಯಯನ, ಶೋಧನವು ಒಂದೇ ವಿಶಾಲ ಸಂಸ್ಥೆಯ ಆವರಣದಲ್ಲಿ ಬೇರೆಬೇರೆ ವಿಭಾಗಗಳಾಗಿ ನೆಲೆಗೊಂಡಿರಬೇಕು. ಆ ವಿಭಾಗಗಳ ನಡುವೆ ಔಪಚಾರಿಕವೂ ಅನೌಪಚಾರಿಕವೂ ಆಗಿರುವ ಕೊಡು-ಕೊಳ್ಳುವಿಕೆ ಮುಕ್ತವಾಗಿ ನಡೆಯುತ್ತಿರಬೇಕು. ವ್ಯಾಪಕವಾದ, ಗಹನವಾದ ಅಂತರ್ಶಿಸ್ತೀಯ ಅಧ್ಯಯನಗಳು ನಡೆದು, ಅಲ್ಲಿನ ಎಲ್ಲರೂ ಕುವೆಂಪು ಹೇಳುವ ಪೂರ್ಣದೃಷ್ಟಿಯನ್ನು ಬೆಳೆಸಿಕೊಳ್ಳಲು ತುಡಿಯುವಂತಾಗಿ, ಅವರಿಂದ ಸಮಾಜದಲ್ಲಿಯೂ ಲೋಕದಲ್ಲಿಯೂ ಪೂರ್ಣದೃಷ್ಟಿ ಪಡೆದುಕೊಳ್ಳಲು ಬೇಕಾದ ಆರೋಗ್ಯಪೂರ್ಣ ಅಭಿಲಾಷೆ ನೆಲೆಯೂರಬೇಕು.



ಅಂಥ ವಿಶ್ವವಿದ್ಯಾಲಯಗಳು ನಮ್ಮಲ್ಲಿ ಇವೆಯೇ, ಅಂಥವುಗಳನ್ನು ಹುಟ್ಟುಹಾಕಿ, ಪೊರೆಯುವ ಮನಸ್ಸು ನಮ್ಮನ್ನು ಆಳುವವರಿಗೆ ಹೋಗಲಿ, ವಿಶ್ವವಿದ್ಯಾಲಯಗಳಲ್ಲಿನ ಬೋಧಕವರ್ಗದವರಿಗಾದರೂ ಇದೆಯೇ, ಇದ್ದರೆ ಎಷ್ಟು ಜನರಲ್ಲಿ, ಎಷ್ಟರಮಟ್ಟಿಗೆ ಇದೆ ಎಂದು ಕೇಳಿಕೊಂಡಾಗಲೆಲ್ಲ ಮನಸ್ಸು ಖಿನ್ನತೆಗೆ ಒಳಗಾಗುತ್ತದೆ.

ಕರ್ನಾಟಕದಲ್ಲಿ ಇಷ್ಟು ವಿಶ್ವವಿದ್ಯಾಲಯಗಳಿದ್ದರೂ ಕರ್ನಾಟಕದ ಬಗ್ಗೆ, ಕನ್ನಡದ ಬಗ್ಗೆ ಅತ್ಯುತ್ತಮ ಅಧ್ಯಯನಗಳು ಇನ್ನಷ್ಟೇ ನಡೆಯಬೇಕಾಗಿದೆ. ಹಾಗಾಗಿ, ಹೆಚ್ಚು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಕ್ಕಿಂತ ಇರುವ ವಿಶ್ವವಿದ್ಯಾಲಯಗಳನ್ನು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಸಶಕ್ತಗೊಳಿಸುವುದು, ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ ಧಕ್ಕೆ ತಾರದಿರುವುದು, ಶೈಕ್ಷಣಿಕ ಕಾಳಜಿಯುಳ್ಳ ಅಧ್ಯಾಪಕರ ನೇಮಕಾತಿಯಾಗುವಂತೆ ನೋಡಿಕೊಳ್ಳುವುದು ಮುಖ್ಯವಾಗಬೇಕಿದೆ. ಈ ಉಪಕ್ರಮಗಳಿಂದ ಕಲೆ-ಸಮಾಜವಿಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಅತ್ಯಂತ ಮಹತ್ವದ ಸಂಶೋಧನೆಗಳು ನಮ್ಮಲ್ಲೇ ನಡೆಯಲು ಸಾಧ್ಯವಿದೆ. ಹೀಗಾಗಿ, ವಿಷಯವಾರು, ಜಿಲ್ಲಾವಾರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ನಡೆಯನ್ನು ಸರ್ಕಾರ ಇನ್ನಾದರೂ ಕೈಬಿಡಲಿ.

ಬಿ.ಕೆ.ಚಂದ್ರಶೇಖರ್, ರಘುನಂದನ, ನಿತ್ಯಾನಂದ ಬಿ. ಶೆಟ್ಟಿ, ಎಚ್.ಎಂ.ಸೋಮಶೇಖರಪ್ಪ, ರಾಜಾರಾಮ ತೋಳ್ಪಾಡಿ, ಡಿ.ಡಾಮಿನಿಕ್

ವಾಚಕರ ವಾಣಿ

ಕನ್ನಡಿಗರಿಗೆ ಉದ್ಯೋಗ: ಅರಿಯಬೇಕಿದೆ ಹೊಣೆ

ರಾಜ್ಯದಲ್ಲಿನ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ ಮೇರೆಗೆ ಉದ್ಯೋಗ ಲಭಿಸುವಂತೆ ಆಗಬೇಕು ಎಂಬ ಕೂಗು ಇಂದು ನಿನ್ನೆಯದಲ್ಲ. ಆಡಳಿತದ ಚುಕ್ಕಾಣಿ ಹಿಡಿದ ನಾಯಕರು ಈ ದಿಸೆಯಲ್ಲಿ ಪೂರಕವಾಗಿ ಸ್ಪಂದಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದರ ಆತ್ಮಾವಲೋಕನಕ್ಕೆ ಇದು ಸಕಾಲ. ‘ಇನ್ವೆಸ್ಟ್ ಕರ್ನಾಟಕ’ ಜಾಗತಿಕ ಹೂಡಿಕೆದಾರರ ಸಮಾವೇಶದಿಂದ ಕರ್ನಾಟಕದಲ್ಲಿ 6 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿದೆ ಎಂದು ಹೇಳಲಾಗುತ್ತಿದೆ. ಆದರೆ ರಾಜ್ಯದಲ್ಲಿ ಇರುವ ಕಾನೂನುಗಳು ಪ್ರಬಲವಾಗಿ ಇಲ್ಲದಿರುವುದರಿಂದಲೇ ಕನ್ನಡಿಗರಿಗೆ ಉದ್ಯೋಗಗಳಲ್ಲಿ ವಂಚನೆಯಾಗುತ್ತಿದೆ.

ಹಿಂದೆ ರಾಜ್ಯದಲ್ಲಿ ಹೂಡಿಕೆ ಮಾಡಿದವರು ಸರ್ಕಾರ ನೀಡಿದ ಎಲ್ಲ ಸಹಾಯವನ್ನೂ ಪಡೆದು, ಕನ್ನಡಿಗರಿಗೆ ಉದ್ಯೋಗ ಕೊಡುವ ಮಾತು ಬಂದಾಗ ‘ನಾವು ಅರ್ಹತೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುತ್ತೇವೆ’ ಎಂದು ಹೇಳಿದ್ದರು. ಬಂಡವಾಳ ಹೂಡಿಕೆ, ಉದ್ಯಮಶೀಲತೆಗೆ ಪ್ರೋತ್ಸಾಹ ಎಲ್ಲವೂ ಸರಿಯೇ. ಆದರೆ ಇದು ಈ ನಾಡಿನ ಜನರನ್ನು ಒಳಗೊಳ್ಳದಿದ್ದರೆ ಅದಕ್ಕೆ ಅರ್ಥವಿಲ್ಲ. ಎಲ್ಲ ಸವಲತ್ತುಗಳನ್ನೂ ಪಡೆದು ಕರ್ನಾಟಕದಲ್ಲಿ ಉದ್ಯಮ ಕಟ್ಟುವವರು ಕನ್ನಡಿಗರಿಗೆ ಉದ್ಯೋಗ ನೀಡಬೇಕೆಂಬ ಸಾಮಾಜಿಕ ಜವಾಬ್ದಾರಿ ಪೂರೈಸುವಂತೆ ಸರ್ಕಾರ ನೋಡಿಕೊಳ್ಳಬೇಕು.

ಬಾಬು ಶಿರಮೋಜಿ, ಬೆಳಗಾವಿ

ಎಸೆಯಬೇಕಿರುವುದು ಅರಬ್ಬಿ ಸಮುದ್ರಕ್ಕಲ್ಲ...!

ಪರಿಸರ ಉಳಿಸಲು ಇರುವ ನಿಯಮಗಳನ್ನು ಉಲ್ಲಂಘಿಸುವ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಉದ್ಯಮಿಗಳನ್ನು ಅರಬ್ಬಿ ಸಮುದ್ರಕ್ಕೆ ಎಸೆಯಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ ಅವರು ಹೇಳಿರುವುದನ್ನು (ಪ್ರ.ವಾ., ಫೆ. 16) ಓದಿ ಸಂತೋಷವಾಯಿತು. ಆದರೆ ಆ ಹೇಳಿಕೆಯಲ್ಲಿ ಒಂದು ಬದಲಾವಣೆ ಮಾಡಬೇಕಾಗಿದೆ. ಅಂಥವರನ್ನು ಸದ್ಯಕ್ಕೆ ತಕ್ಕಮಟ್ಟಿಗೆ ಸ್ವಚ್ಛವಾಗಿರುವ ಅರಬ್ಬಿ ಸಮುದ್ರಕ್ಕೆ ಎಸೆದು ಅದನ್ನೂ ಮಲಿನ ಮಾಡುವುದರ ಬದಲು, ಬೆಂಗಳೂರಿನ ಕುಪ್ರಸಿದ್ಧ ವೃಷಭಾವತಿ ನದಿಗೆ ಎಸೆಯುವುದು ಒಳ್ಳೆಯದು.

ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಪ್ಯಾರಿಸ್ ಒಪ್ಪಂದಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಬದ್ಧತೆಯನ್ನು ನಾವು ತೋರಬೇಕಿದೆ. ಸಂಬಂಧಿಸಿದ ಅಧಿಕಾರಿಗಳು ಈ ದಿಸೆಯಲ್ಲಿ ವಿವಿಧ ಹಂತಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಕಡೂರು ಫಣಿಶಂಕರ್, ಬೆಂಗಳೂರು

ಸಚಿವ ಸ್ಥಾನಕ್ಕೆ ಗೌರವ ತಾರದ ಮಾತು

ಜಮೀನು ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ‘ಅವನ್ಯಾರೋ... ನನ್ನ ವಿರುದ್ಧ ಪ್ರಕರಣ ದಾಖಲಿಸಿದ್ದಾನೆ... ಅವನು ಒಂದು ವರದಿ ಕೊಟ್ಟ. ಅದನ್ನು ಇಟ್ಟುಕೊಂಡು ಈ ಆಟ ಆಡುತ್ತಿದ್ದಾರೆ’ (ಪ್ರ.ವಾ., ಫೆ. 16) ಎಂಬಿತ್ಯಾದಿ ನುಡಿಮುತ್ತುಗಳನ್ನು ಎಚ್.ಡಿ. ಕುಮಾರಸ್ವಾಮಿ ಉದುರಿಸಿದ್ದಾರೆ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದವರು, ಪ್ರಸ್ತುತ ಕೇಂದ್ರ ಸಚಿವರಾಗಿರುವ ಇವರಿಂದ ಇಂತಹ ಮಾತು ಬರಬಾರದಿತ್ತು. ಈ ರಾಜಕಾರಣಿಗಳಿಗೆ ಅಧಿಕಾರಿಗಳ ವರ್ತನೆ ತಮ್ಮ ಪರವಾಗಿ ಇದ್ದರೆ ಅವರಿಗೆ ಗೌರವ ಕೊಡುತ್ತಾರೆ. ಇಲ್ಲವಾದಲ್ಲಿ ಈ ರೀತಿ ಏಕವಚನದಲ್ಲಿ ನಿಂದಿಸಿ ಅಗೌರವಯುತವಾಗಿ ಮಾತನಾಡಿ ಸಮಾಜದಲ್ಲಿ ಅವರ ಸ್ಥಾನವನ್ನು ಕುಗ್ಗಿಸಲು ಪ್ರಯತ್ನಿಸುತ್ತಾರೆ.

ಕಾನೂನಿನ ಅನ್ವಯ ಕಾರ್ಯನಿರ್ವಹಿಸುವ ಅಧಿಕಾರಿಗಳನ್ನು ಏಕವಚನದಲ್ಲಿ ಸಂಬೋಧಿಸಿ ಅವರನ್ನು ಮಾನಸಿಕವಾಗಿ ಕುಗ್ಗಿಸುವುದು ಸರಿಯಲ್ಲ. ಎಲ್ಲ ಮನುಷ್ಯರಿಗೂ ಅವರದೇ ಆದ ಸ್ವಾಭಿಮಾನ, ಆತ್ಮಗೌರವ, ಬಂಧುಬಳಗ ಇರುತ್ತದೆ ಎಂಬುದನ್ನು ರಾಜಕಾರಣಿಗಳು ಅರಿಯುವುದು ಅವಶ್ಯ.

ಕೆ.ಎಂ.ನಾಗರಾಜು, ಮೈಸೂರು

ಆಲಿಸಬೇಕಿದೆ ‘ಕಾಡಿನ ಶಬ್ದ’!

‘ವೇಗದ ಬದುಕಿನಲ್ಲಿಯೂ ಆಲಿಸುವ, ಗ್ರಹಿಸುವ, ಕಲಿಯುವ ಸಂಯಮ ಮೂಡಬೇಕು’ ಎಂಬ ವಿಚಾರವನ್ನು ಸತೀಶ್ ಜಿ.ಕೆ. ತೀರ್ಥಹಳ್ಳಿ ಅವರು ಹಲವು ಉದಾಹರಣೆಗಳ ಮೂಲಕ ಅರ್ಥಗರ್ಭಿತವಾಗಿ ವಿವರಿಸಿದ್ದಾರೆ (ಸಂಗತ, ಫೆ. 15). ಈ ಬರಹ ನನಗೆ ‘ಕಾಡಿನ ಶಬ್ದ’ ಎಂಬ ಹಳೆಯ ಕಥೆಯೊಂದನ್ನು ಜ್ಞಾಪಕಕ್ಕೆ ತಂದಿತು. ಆಗ ಚೀನಾದಲ್ಲಿ ರಾಜಕುಮಾರನೊಬ್ಬ ಗುರುಗಳು ತಿಳಿಸಿದಂತೆ ಕಾಡೊಂದರ ವಿಶಿಷ್ಟ ಶಬ್ದದ ಅನ್ವೇಷಣೆ ಯಲ್ಲಿ ತೊಡಗಿ, ಕಡೆಯಲ್ಲಿ ಗುರುವಿನ ಮಾರ್ಗದರ್ಶನದ ಮಾತುಗಳಿಂದ ಹೇಗೆ ಹೆಚ್ಚಿನ ತಿಳಿವಳಿಕೆಯನ್ನು ಗಳಿಸಲು ಸಾಧ್ಯವಾಯಿತು ಎಂಬುದನ್ನು ನಿರೂಪಿಸುವ ಒಂದು ಪ್ರಸಿದ್ಧವಾದ ಕಥೆ ಇದು. ‘ಕಾಡಿನ ಶಬ್ದ’ವನ್ನು ಆಲಿಸುವುದು ಎಂದರೆ ಬರೀ ಆನೆ, ಸಿಂಹದಂತಹ ಪ್ರಾಣಿಗಳು ಘೀಳಿಡುವುದು, ಗರ್ಜಿಸುವುದನ್ನು ಕೇಳುವುದಲ್ಲ. ಜಲಪಾತದ ಶಬ್ದ, ಪಕ್ಷಿಗಳ ಕಲರವ ಹಾಗೆಯೇ ಕಾಡಿನಲ್ಲಿ ಕತ್ತಲು ಹೆಚ್ಚಾದ ಹಾಗೆ ಚುರುಕಾಗುವ ನೂರಾರು ಕ್ರಿಮಿಕೀಟಗಳು ಹೊರಡಿಸುವ ಸೂಕ್ಷ್ಮ ಧ್ವನಿಗಳನ್ನು ಆಲಿಸುವುದೂ ಸೇರಿದೆ ಎಂಬ ತಿಳಿವಳಿಕೆ ರಾಜಕುಮಾರನಿಗೆ ಉಂಟಾಗುತ್ತದೆ.

‘ಕಾಡಿನ ಶಬ್ದಗಳನ್ನು ಆಲಿಸಿದ ನೀನು ಮುಂದಿನ ರಾಜನಾಗಿ ರಾಜ್ಯವನ್ನು ಮುನ್ನಡೆಸುವ ಸಮಯದಲ್ಲಿ ಗಮನಿಸಬೇಕಾದ ಸಂಗತಿಗಳು ಇವು’ ಎಂದು ಗುರು ವಿವರಿಸುತ್ತಾನೆ. ‘ಒಬ್ಬ ದಕ್ಷ, ಜನಪ್ರಿಯ ರಾಜನಾಗಬೇಕಾದರೆ ಶಬ್ದಗಳನ್ನು ಬರೀ ಕೇಳುವುದಲ್ಲ, ಆಲಿಸಬೇಕು. ಗದ್ದಲದ ನಡುವೆಯೂ ಮಿಡಿಯುತ್ತಿರಬಹುದಾದ ಸೂಕ್ಷ್ಮ ಧ್ವನಿ, ಸಪ್ಪಳಗಳನ್ನು ಕೇಳುವ ಮತ್ತು ಮನಸ್ಸಿನಲ್ಲಿ ನೋಡುವ ಶಕ್ತಿ ಗಳಿಸಿಕೊಳ್ಳಬೇಕು. ಆಗ ಮಾತ್ರ ರಾಜನಾದವನು ತನ್ನ ಪ್ರಜೆಗಳ ಹೃದಯದ ಮಿಡಿತ, ಅವರು ನೇರವಾಗಿ ಹೇಳದೇ ಇರುವ ಮತ್ತು ಹೇಳಲಾಗದ ಮಾತುಗಳನ್ನು ಆಲಿಸಬಲ್ಲ, ಕೇಳಬಲ್ಲ ಕೂಡಾ. ಈ ಶಕ್ತಿ ಪಡೆದುಕೊಂಡ ರಾಜ ತನ್ನ ಪ್ರಜೆಗಳ ಕಷ್ಟಸುಖಗಳನ್ನು ಅರಿತು ಅವರಲ್ಲಿ ಬೇಕಾದ ಧೈರ್ಯ ಮತ್ತು ಜೀವನೋತ್ಸಾಹವನ್ನು ತುಂಬಬಲ್ಲ. ರಾಜನಾದವನಿಗೆ ಯಾವಾಗ ಸ್ವಾರ್ಥಸಾಧಕರ ಬೂಟಾಟಿಕೆಯ, ಅಬ್ಬರದ, ಹೊಗಳಿಕೆಯ ಮಾತುಗಳಷ್ಟೇ ಕೇಳತೊಡಗುತ್ತವೋ ಆಗ ಅವನ ಅಧೋಗತಿ ಪ್ರಾರಂಭ ವಾಗುತ್ತದೆ. ರಾಜ್ಯಕ್ಕೆ ನಿಜವಾದ ಹಿತ ಬಯಸುವ ವ್ಯಕ್ತಿಗಳ ಅಭಿಪ್ರಾಯಗಳು, ಸಲಹೆ ಸೂಚನೆಗಳನ್ನು ಆಲಿಸುವ ಗುಣ ಅವನಲ್ಲಿ ಇರಬೇಕು’ ಎಂದು ಬೋಧಿಸುತ್ತಾನೆ. ಈ ಬೋಧನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದರೆ ತಪ್ಪಾಗಲಾರದು.

ಎಂ.ರವೀಂದ್ರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗೀಲನ್ ಬಾ ಸಿಂಡ್ರೋಮ್ ಇರಲಿ ಎಚ್ಚರ



ಮಹಾರಾಷ್ಟ್ರ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೀಲನ್ ಬಾ ಸಿಂಡ್ರೋಮ್ ಕಾಣಿಸಿಕೊಂಡಿದೆ. ಹಲವೆಡೆ ಸಾವುಗಳು ಕೂಡ ಸಂಭವಿಸಿವೆ. ಬ್ಯಾಕ್ಟೀರಿಯಾ, ಕಲುಷಿತ ನೀರು ಹೀಗೆ ಹಲವು ಕಾರಣಗಳಿಂದ ತಗಲುವ ಈ ಸೋಂಕು ದೇಶದ ಹಲವೆಡೆ ಪ್ರತಿವರ್ಷ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ದೇಹದ ನರಮಂಡಲವನ್ನು ದುರ್ಬಲಗೊಳಿಸಿ, ಪಾರ್ಶ್ವವಾಯು ಸೇರಿದಂತೆ ಹಲವು ಸಮಸ್ಯೆಗಳಿಗೆ ಕಾರಣವಾಗುವ ಈ ಕಾಯಿಲೆಯ ಬಗ್ಗೆ ಎಚ್ಚರಿಕೆ ಅಗತ್ಯ ಎಂದು ತಜ್ಞರು ಹೇಳಿದ್ದಾರೆ

ಮಹಾರಾಷ್ಟ್ರದಲ್ಲಿ ಎಂಟು, ಆಂಧ್ರಪ್ರದೇಶದಲ್ಲಿ ಒಂದು ಸಾವು; ಕಲುಷಿತ ನೀರಿನಿಂದ ಸೋಂಕು ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ ಗೀಲನ್ ಬಾ ಸಿಂಡ್ರೋಮ್ (ಜಿಬಿಎಸ್) ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿದೆ. ಜಿಬಿಎಸ್‌ನಿಂದ ಇದುವರೆಗೆ ಪುಣೆಯಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ. 203 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಪುಣೆಯಲ್ಲಿ ಜಿಬಿಎಸ್ ಹರಡಲು ಪ್ರಮುಖ ಕಾರಣ, ಕ್ಯಾಂಫಿಲೊಬ್ಯಾಕ್ಟರ್ ಜೆಜುನಿ ಎನ್ನುವ ಬ್ಯಾಕ್ಟೀರಿಯಾ. ಸೋಂಕಿತರ ಪೈಕಿ ಶೇ 20–ಶೇ 30ರಷ್ಟು ಮಂದಿಯ ಮಾದರಿಗಳಲ್ಲಿ ಈ ಬ್ಯಾಕ್ಟೀರಿಯಾ ಪತ್ತೆಯಾಗಿದೆ.

ಪುಣೆಯ ನಾಂದೇಡ್ ಸೋಂಕಿನ ಕೇಂದ್ರಸ್ಥಳವಾಗಿದೆ. ಇಲ್ಲಿನ ಸೋಂಕಿತರ ಮನೆಗಳಿಗೆ ಪೂರೈಕೆಯಾಗುತ್ತಿರುವ ನೀರನ್ನು ಪರೀಕ್ಷೆ ಮಾಡಿದಾಗ, ಸೋಂಕಿತರ ಪೈಕಿ 26 ಮಂದಿಯ ಮನೆಗಳ ನೀರಿನಲ್ಲಿ ಕ್ಲೋರಿನ್ ಇರಲಿಲ್ಲ ಎನ್ನುವ ಅಂಶ ಪತ್ತೆಯಾಗಿದೆ. ಮನೆಗಳಿಗೆ ಪೂರೈಸುವ ನೀರಿನಲ್ಲಿ 0.2 ಪಿಪಿಎಂ (ಪಾರ್ಟ್ಸ್ ಪರ್ ಮಿಲಿಯನ್) ಕ್ಲೋರಿನ್ ಇರುವಂತೆ ನೋಡಿಕೊಳ್ಳಬೇಕು ಎಂದು ಪುಣೆಯ ಮಹಾನಗರ ಪಾಲಿಕೆಗೆ ಸೂಚಿಸಿದೆ.

ಕೇಂದ್ರದಿಂದ ತಜ್ಞರ ತಂಡ, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಮಹಾರಾಷ್ಟ್ರ ಆರೋಗ್ಯ ಇಲಾಖೆ ಜಂಟಿಯಾಗಿ ಪರಿಸ್ಥಿತಿಯನ್ನು ಅಧ್ಯಯನ ಮಾಡುತ್ತಿವೆ. ಜಿಬಿಎಸ್‌ಗೆ ಕಲುಷಿತ ನೀರು ಕೂಡ ಕಾರಣವಾಗಿದ್ದು, ಜಲಮೂಲಗಳನ್ನು ಕಲುಷಿತಗೊಳಿಸುತ್ತಿರುವ ಕಾರ್ಖಾನೆ ಮತ್ತು ಉದ್ಯಮಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಸರ್ಕಾರ ಹೇಳಿದೆ.

ನಿಮ್ಹಾನ್ಸ್ ಅಧ್ಯಯನ: ಭಾರತಕ್ಕೆ ಜಿಬಿಎಸ್ ಹೊಸದೇನಲ್ಲ. ಬೆಂಗಳೂರಿನ ನಿಮ್ಹಾನ್ಸ್‌ನ ಮನೋಜಿತ್ ದೇಬನಾಥ್ ಮತ್ತು ಮಧು ನಾಗಪ್ಪ 2014–2019ರ ನಡುವೆ 150 ಜಿಬಿಎಸ್ ರೋಗಿಗಳನ್ನು ಅಧ್ಯಯನ ಮಾಡಿದ್ದರು. ಈ ಪೈಕಿ ಶೇ 79 ಮಂದಿಗೆ ಈ ಕಾಯಿಲೆ ಹಿಂದೆಯೇ ಬಂದುಹೋಗಿದೆ ಎನ್ನುವುದು ತಿಳಿದುಬಂದಿತ್ತು. ರೋಗಿಗಳ ಪೈಕಿ ಶೇ 65 ಮಂದಿಯಲ್ಲಿ ಇತರೆ ಸೋಂಕುಗಳು ಕೂಡ ಕಂಡುಬಂದಿದ್ದವು.

ಆಂಧ್ರ ಪ್ರದೇಶದಲ್ಲಿ ಸದ್ಯ 17 ಮಂದಿ ಸೋಂಕಿತರಿದ್ದು, ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 2024ರ ನ.1ರಿಂದ 2025ರ ಫೆ.14ರವರೆಗೆ ಒಟ್ಟು 53 ಜಿಬಿಎಸ್ ಪ್ರಕರಣಗಳು ವರದಿಯಾಗಿದ್ದು, ಶ್ರೀಕಾಕುಳಂನಲ್ಲಿ 10 ವರ್ಷದ ಬಾಲಕನೊಬ್ಬ ಮೃತಪಟ್ಟಿರುವುದಾಗಿ ಆಂಧ್ರ ಪ್ರದೇಶದ ಮುಖ್ಯ ಕಾರ್ಯದರ್ಶಿ ಎಂ.ಟಿ.ಕೃಷ್ಣಬಾಬು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ಮತ್ತು ಹೂಗ್ಲಿಯಲ್ಲಿ ಒಟ್ಟು ಮೂರು ಮಂದಿ ಮೃತಪಟ್ಟಿದ್ದಾರೆ. ಅವರ ಸಾವಿಗೆ ಜಿಬಿಎಸ್ ಕಾರಣ ಎಂದು ಅವರ ಕುಟುಂಬಸ್ಥರು ಹೇಳಿದ್ದಾರೆ. ಆದರೆ, ಆರೋಗ್ಯ ಇಲಾಖೆ ಅದನ್ನು ದೃಢಪಡಿಸಿಲ್ಲ. ರಾಜ್ಯದ ಹಲವು ಮಕ್ಕಳಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಅವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ. ಫೆಬ್ರುವರಿ 1ರಂದು ಗುವಾಹಟಿಯಲ್ಲಿ 17 ವರ್ಷದ ಯುವತಿ ಮೃತಪಟ್ಟಿದ್ದಾರೆ. ಅದಕ್ಕೆ ಜಿಬಿಎಸ್ ಕಾರಣ ಎಂದು ಶಂಕಿಸಲಾಗಿತ್ತು. ಆದರೆ, ಆರೋಗ್ಯ ಇಲಾಖೆ ಅದನ್ನು ದೃಢಪಡಿಸಿರಲಿಲ್ಲ.

ಜಾರ್ಖಂಡ್‌ನಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದ್ದು, ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿರುವಂತೆ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಆರೋಗ್ಯ ಇಲಾಖೆಗೆ ಸೂಚಿಸಿದ್ದಾರೆ.

ಪ್ರತಿ ವರ್ಷ ಪ್ರಕರಣಗಳ ವರದಿ: ಪ್ರತಿ ವರ್ಷ ಹಲವು ರಾಜ್ಯಗಳಲ್ಲಿ ಬಿಜಿಎಸ್ ಪ್ರಕರಣಗಳು ಕಾಣಿಸಿಕೊಳ್ಳುತ್ತಿದ್ದು, ಸಾಮಾನ್ಯವಾಗಿ ಅದು ಗಂಭೀರ ಸ್ವರೂಪ ಪಡೆಯುವುದಿಲ್ಲ. ಕೆಲವರು ಮಾತ್ರ ಪಾರ್ಶ್ವವಾಯು ಪೀಡಿತರಾಗುವುದುಂಟು. ಸೂಕ್ತ ಚಿಕಿತ್ಸೆಯ ನಂತರ ಅವರು ಗುಣಮುಖರಾಗುತ್ತಾರೆ. ಸಂಪೂರ್ಣವಾಗಿ ಮೊದಲಿನಂತೆ ಆಗದಿದ್ದರೂ ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳಲು ಶಕ್ತರಾಗುತ್ತಾರೆ. ಹೀಗಾಗಿ ಸೋಂಕಿನ ಬಗ್ಗೆ ಭಯಪಡುವ ಅಗತ್ಯವೇನಿಲ್ಲ ಎಂದು ತಜ್ಞರು ಹೇಳಿದ್ದಾರೆ.

ದೇಹದ ಪ್ರತಿರೋಧ ವ್ಯವಸ್ಥೆಯು ನರಮಂಡಲದ ಮೇಲೆ ದಾಳಿ ಮಾಡುವ ವಿಚಿತ್ರ ಕಾಯಿಲೆ ಇದು. ಪಾದಗಳು ಮತ್ತು ಕೈಗಳು ಜೋಮು ಹಿಡಿಯುವುದರೊಂದಿಗೆ ಜಿಬಿಎಸ್ ಆರಂಭವಾಗುತ್ತದೆ. ನಂತರದಲ್ಲಿ ಸ್ನಾಯು ದೌರ್ಬಲ್ಯ ಉಂಟಾಗಿ, ಕೀಲುಗಳಲ್ಲಿ ಭಾರಿ ನೋವು ಕಾಣಿಸಿಕೊಳ್ಳುತ್ತದೆ. ಎರಡರಿಂದ ನಾಲ್ಕು ವಾರಗಳಲ್ಲಿ ಭುಜ ಮತ್ತು ಕಾಲುಗಳಿಗೆ ನೋವು ಹರಡುವುದರೊಂದಿಗೆ ಲಕ್ಷಣಗಳು ತೀವ್ರಗೊಳ್ಳುತ್ತವೆ. ರೋಗದ ತೀವ್ರತೆ, ಚಿಕಿತ್ಸೆಯ ಲಭ್ಯತೆ ಮತ್ತು ಗುಣಮಟ್ಟವನ್ನು ಆಧರಿಸಿ ಮರಣದ ಪ್ರಮಾಣವು ಶೇ 3ರಿಂದ ಶೇ 7ರವರೆಗೆ ಇರುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.

ಮಳೆಗಾಲದಲ್ಲಿ, ಕೋಳಿಗಳು ಮತ್ತು ಬಾತುಕೋಳಿಗಳ ಹಿಕ್ಕೆಗಳಿಂದ ಮಲಿನಗೊಂಡಿದ್ದ ನೀರಿನಲ್ಲಿ ಆಡಿದ ಮಕ್ಕಳಲ್ಲಿ ಈ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಂಡ ನಿದರ್ಶನಗಳಿವೆ. ಕಲುಷಿತ ನೀರಿನಲ್ಲಿ ತಯಾರಿಸಿದ ಆಹಾರ, ತಿಂಡಿ ತಿನ್ನುವುದು, ಕೋಳಿ ಮಾಂಸವನ್ನು ಅರೆಬರೆ ಬೇಯಿಸಿ ತಿನ್ನುವುದು ಕೂಡ ಸೋಂಕಿಗೆ ಕಾರಣವಾಗಬಹುದು ಎಂದಿದ್ದಾರೆ ವೈದ್ಯರು.

ಇದು ತೀರಾ ಅಪಾಯಕಾರಿ ಕಾಯಿಲೆ ಅಲ್ಲ. ಆದರೆ, ಈ ರೋಗಕ್ಕೆ ನಿರ್ದಿಷ್ಟ ಔಷಧ ಇಲ್ಲದಿರುವುದರಿಂದ ಜನ ಆದಷ್ಟು ಎಚ್ಚರಿಕೆಯಿಂದ ಇರುವುದು ಒಳಿತು ಎನ್ನುವುದು ತಜ್ಞರ ಎಚ್ಚರಿಕೆ.

ಆಧಾರ: ಪಿಟಿಐ, ಬಿಬಿಸಿ, ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್

ಬ್ಯಾಕ್ಟೀರಿಯಾ ಕಾರಣ

ಕ್ಯಾಂಪಿಲೊಬ್ಯಾಕ್ಟರ್ ಜೆಜುನಿ ಎಂಬ ರೋಗಕಾರಕ ಬ್ಯಾಕ್ಟೀರಿಯಾದಿಂದ ಈ ಕಾಯಿಲೆ ಬರುವ ಸಾಧ್ಯತೆ ಹೆಚ್ಚಿರುತ್ತದೆ. ಈ ಬ್ಯಾಕ್ಟೀರಿಯಾ ಕೋಳಿಗಳಲ್ಲಿ ಕಂಡುಬರುತ್ತದೆ. ಝೀಕಾ, ಡೆಂಗಿ ಸೇರಿದಂತೆ ಇತರೆ ಸೋಂಕುಕಾರಕ ವೈರಸ್‌ಗಳೊಂದಿಗೆ ಈ ಬ್ಯಾಕ್ಟೀರಿಯಾವೂ ಸೇರಿಕೊಂಡಿರುತ್ತದೆ.

ವ್ಯಕ್ತಿಗೆ ಸೋಂಕು ತಗುಲಿದ ನಂತರದ ಎರಡರಿಂದ ಆರು ವಾರಗಳಲ್ಲಿ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆಹಾರ ಮತ್ತು ನೀರಿನಿಂದ ಬರುವ ಕಾಯಿಲೆಯಾಗಿದ್ದು, ಭೇದಿ ಇದರ ಪ್ರಮುಖ ಲಕ್ಷಣವಾಗಿದೆ. ಸ್ನಾಯು ದೌರ್ಬಲ್ಯ, ಕಾಲು ಮತ್ತು ಕೈಗಳು ಸ್ಪರ್ಶಜ್ಞಾನ ಕಳೆದುಕೊಳ್ಳುವುದು, ನುಂಗುವುದಕ್ಕೆ ಕಷ್ಟವಾಗುವುದು, ಉಸಿರಾಡಲು ತೊಂದರೆಯಾಗುವುದು ಇದರ ಮುಖ್ಯ ಲಕ್ಷಣಗಳು. ಕೈಕಾಲು ಮರಗಟ್ಟುವುದು, ಒಮ್ಮೊಮ್ಮೆ ಕೈಕಾಲು ಪಾದಗಳಲ್ಲಿ ಚುಚ್ಚಿದಂತಾಗುವುದು, ನಿಶ್ಶಕ್ತಿ ಕಾಣಿಸಿಕೊಳ್ಳುವುದು, ಜೀರ್ಣಕ್ರಿಯೆಯಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವುದು, ಹೃದಯ ಬಡಿತ ಮತ್ತು ರಕ್ತದೊತ್ತಡದಲ್ಲಿ ಏರುಪೇರಾಗುವುದು ಕೂಡ ಇದರ ಲಕ್ಷಣಗಳಾಗಿವೆ.

ಎಲ್ಲ ವಯಸ್ಸಿನವರಿಗೂ ಈ ಕಾಯಿಲೆ ಕಾಡಬಹುದು. ಆದರೆ, ವಯಸ್ಸು ಹೆಚ್ಚಾದಂತೆ ರೋಗಕ್ಕೆ ಒಳಗಾಗುವ ಸಾಧ್ಯತೆ ಜಾಸ್ತಿ ಇರುತ್ತದೆ. ಮಹಿಳೆಯರಿಗೆ ಹೋಲಿಸಿದರೆ, ಪುರುಷರಲ್ಲಿ ಜಿಬಿಎಸ್ ಹೆಚ್ಚು ಕಂಡುಬರುತ್ತದೆ. ನೈರ್ಮಲ್ಯದ ಕೊರತೆ, ಸಾಂಕ್ರಾಮಿಕ ರೋಗ ಹೆಚ್ಚಾಗಿ ಹರಡುವ ಸಾಧ್ಯತೆ ಇರುವ ಬಡ, ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳುವ ಸಂಭವ ಹೆಚ್ಚು.

ಶತಮಾನದ ಇತಿಹಾಸ

- ಜಿಬಿಎಸ್ ಕಾಯಿಲೆ ಹಿಂದಿನಿಂದಲೂ ಇದ್ದರೂ ಅದನ್ನು ಮೊದಲು ಗುರುತಿಸಿದ್ದು 1916ರಲ್ಲಿ. ಫ್ರಾನ್ಸ್‌ನ ನರರೋಗ ತಜ್ಞರಾದ ಜಾರ್ಜಸ್ ಗೀಲನ್, ಜೀನ್ ಅಲೆಕ್ಸಾಂಡರ್ ಬಾ ಮತ್ತು ಆಂಡ್ರೆ ಸ್ಟ್ರೋಲ್ ಅವರು ಇಬ್ಬರು ಯೋಧರಲ್ಲಿ ಈ ಕಾಯಿಲೆಯನ್ನು ಗುರುತಿಸಿದರು. ಅದೇ ಕಾರಣಕ್ಕೆ ಈ ಕಾಯಿಲೆಗೆ ಗೀಲನ್ ಬಾ ಸಿಂಡ್ರೋಮ್ ಎಂದು ಹೆಸರಿಡಲಾಗಿದೆ
- ಜಾಗತಿಕ ಮಟ್ಟದಲ್ಲಿ ಇಲ್ಲಿಯವರೆಗೆ ವರದಿಯಾಗಿರುವ ಪ್ರಕರಣಗಳ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. 2019ರಲ್ಲಿ ಒಂದೇ ವರ್ಷ 1.50 ಲಕ್ಷ ಪ್ರಕರಣಗಳು ದೃಢಪಟ್ಟಿರುವ ಮಾಹಿತಿ ಇದೆ
- ಜಾಗತಿಕ ಮಟ್ಟದಲ್ಲಿ ವಾರ್ಷಿಕವಾಗಿ ಪ್ರತಿ ಲಕ್ಷ ಜನರಲ್ಲಿ ಒಬ್ಬರು ಅಥವಾ ಇಬ್ಬರಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. 2013-14ರಲ್ಲಿ ಫ್ರೆಂಚ್ ಪಾಲಿನೇಸಿಯಾ ದ್ವೀಪ ಸಮೂಹ, ಲ್ಯಾಟಿನ್ ಅಮೆರಿಕ, ಕೆರೀಬಿಯನ್ ರಾಷ್ಟ್ರಗಳಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿದ್ದವು
- 2019, 2023ರಲ್ಲಿ ಪೆರುವಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಿಬಿಎಸ್ ಪ್ರಕರಣಗಳು ದೃಢಪಟ್ಟಿದ್ದವು. 2023ರ ಮೇ 20 ಮತ್ತು ಜುಲೈ 27ರ ನಡುವೆ 683 ಮಂದಿಗೆ ಈ ಕಾಯಿಲೆ ಬಂದಿತ್ತು
- ಒಬ್ಬ ವ್ಯಕ್ತಿಯು ತನ್ನ ಜೀವಮಾನದಲ್ಲಿ ಈ ಕಾಯಿಲೆಗೆ ಒಳಗಾಗುವ ಸಾಧ್ಯತೆ ಶೇ 1ರಷ್ಟು ಮಾತ್ರ. ಈ ಕಾಯಿಲೆಗೆ ಒಳಗಾದವರಲ್ಲಿ ಶೇ 20ರಷ್ಟು ರೋಗಿಗಳು ಉಸಿರಾಟಕ್ಕೆ ಸಂಬಂಧಿಸಿದ ಸ್ನಾಯುಗಳಲ್ಲಿ ದೌರ್ಬಲ್ಯವನ್ನು ಅನುಭವಿಸುತ್ತಾರೆ. ಅಂತಹವರಿಗೆ ಕೃತಕ ಉಸಿರಾಟದ ವ್ಯವಸ್ಥೆಯ ಅಗತ್ಯವಿದೆ. ಅತ್ಯುತ್ತಮ ಚಿಕಿತ್ಸೆ ಲಭ್ಯವಿದ್ದರೂ ಶೇ 3ರಿಂದ 7ರಷ್ಟು ರೋಗಿಗಳು ಈ ಕಾಯಿಲೆಯಿಂದಾಗಿ ಮೃತಪಡುತ್ತಾರೆ

ಜಾತ್ರೆಗೆ ತೆರಳಿದ್ದವರು ಅಸ್ವಸ್ಥ: ಕಟ್ಟೆಚ್ಚರ

ಮಹಾರಾಷ್ಟ್ರದ ಪಂಢರಾಪುರ ಜಾತ್ರೆಗೆ ಹೋಗಿ ಅಲ್ಲಿಂದ ಮರಳಿದ ಬಳಿಕ ಕೆಲವು ಗ್ರಾಮಸ್ಥರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದ್ದರಿಂದ ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಕುಂದರಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜೀವಾಡ ಮತ್ತು ಮಜ್ಜಿಗೆಹಳ್ಳದಲ್ಲಿ ಆರೋಗ್ಯ ಇಲಾಖೆ ಕಟ್ಟೆಚ್ಚರ ವಹಿಸಿದೆ.

‘ಈ ಗ್ರಾಮಗಳ ಸುಮಾರು 28 ಜನರಿಗೆ ಫೆ.12ರಂದು ವಾಂತಿ–ಭೇದಿ ಕಾಣಿಸಿಕೊಂಡಿತ್ತು. ಅವರೆಲ್ಲ ಫೆ.4 ರಂದು ಪಂಢರಾಪುರಕ್ಕೆ ಹೋಗಿದ್ದರು. ಅಸ್ವಸ್ಥಗೊಂಡಿದ್ದವರ ಪೈಕಿ 25 ಜನರು ಯಲ್ಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗಿದ್ದಾರೆ. ಆದರೆ, ಮೂವರನ್ನು ಹೆಚ್ಚಿನ ಚಿಕಿತ್ಸೆಗೆ ಧಾರವಾಡದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಪೈಕಿ 65 ವರ್ಷದ ವ್ಯಕ್ತಿಯೊಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ’ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

‘ಪಂಢರಾಪುರಕ್ಕೆ ಹೋಗಿದ್ದವರಲ್ಲಿ ಮಾತ್ರ ವಾಂತಿ–ಭೇದಿ ಕಾಣಿಸಿಕೊಂಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದಲ್ಲಿ ಈಗಲೂ ಆರೋಗ್ಯ ಸಿಬ್ಬಂದಿ ನಿಯೋಜಿಸಿದ್ದೇವೆ’ ಎಂದು ಯಲ್ಲಾಪುರ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನರೇಂದ್ರ ಪವಾರ್ ತಿಳಿಸಿದ್ದಾರೆ. ವಾಂತಿ ಮತ್ತು ಭೇದಿ ಕಾಣಿಸಿಕೊಂಡವರಿಗೆ ಜಿಬಿಎಸ್ ಸೋಂಕು ತಗುಲುವ ಸಾಧ್ಯತೆ ಇರುವುದರಿಂದ ರೋಗಿಗಳ ಬಗ್ಗೆ ನಿಗಾವಹಿಸಲಾಗಿದೆ.

ನಾವು ನೋಡಿದ ಸಿನಿಮಾ

ಕಾರಿನ ಗುಂಗಿನಲ್ಲಿ ‘ಸಿದ್ಲಿಂಗು’

ಯೋಗಿ

‘ಲೂಸ್ ಮಾದ’ ಯೋಗಿ ಅಭಿನಯದ ‘ಸಿದ್ಲಿಂಗು’ ಸಿನಿಮಾವು 2012ರಲ್ಲಿ ತೆರೆಕಂಡು ಹಿಟ್ ಆಗಿತ್ತು. ಮಂಗಳಾ ಟೀಚರ್ ಆಗಿ ನಾಯಕಿ ರಮ್ಯಾ ಮತ್ತು ತುರುವೇಕೆರೆ ಆಂಡಾಳಮ್ಮನಾಗಿ ಸುಮನ್ ರಂಗನಾಥ್ ಸಿನಿಮಾದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅದೇ ಕಥೆಯ ಮುಂದುವರಿಕೆ ಭಾಗ ‘ಸಿದ್ಲಿಂಗು–2’. ನಾಯಕ ಯೋಗಿ ಹೊರತಾಗಿ ಇಲ್ಲಿ ಬಹುತೇಕ ಪಾತ್ರಗಳು ಹೊಸತು. ‘ಸಿದ್ಲಿಂಗು’ ಚಿತ್ರದ ಕಾರನ್ನೇ ಎರಡನೇ ಭಾಗದಲ್ಲಿ ಮುಖ್ಯವಾಗಿಟ್ಟುಕೊಂಡು ನಿರ್ದೇಶಕ ವಿಜಯಪ್ರಸಾದ್ ಕಥೆ ಹೆಣೆದಿದ್ದಾರೆ.

‘ಸಿದ್ಲಿಂಗು’ ಸಿನಿಮಾದ ಕಥೆ ಇದ್ದಿದ್ದೇ ಕಾರೊಂದನ್ನು ಖರೀದಿ ಮಾಡುವುದರ ಕುರಿತು. ಕಾರು ಖರೀದಿಗೆಂದು ಹಳ್ಳಿಗೆ ಬರುವ ನಾಯಕನ ಬದುಕಿನಲ್ಲಿ ಏನೇನೋ ನಡೆದುಹೋಗುತ್ತದೆ. ಇನ್ನೇನು ಕಾರು ಕೈಗೆ ಸಿಕ್ಕಿತು ಎನ್ನುವ ಹೊತ್ತಿಗೆ ಮಂಗಳಾ ಟೀಚರ್ ಸಾಯುತ್ತಾರೆ. ಅದರ ನಂತರದ ಸಿದ್ಲಿಂಗುವಿನ ಬದುಕಿನ ಕಥೆಯೊಂದಿಗೆ ‘ಸಿದ್ಲಿಂಗು–2’ ಕಥೆ ಪ್ರಾರಂಭವಾಗುತ್ತದೆ. ಅನಾಥನಾಗಿರುವ ಸಿದ್ಲಿಂಗು ಜೊತೆಗುಳಿದವನು ಆತ ಕೆಲಸ ಮಾಡುತ್ತಿದ್ದ ಕಂಪನಿ ಮಾಲೀಕ ಆರ್ಮುಗಂ ಮಾತ್ರ. ಉಳಿದೆಲ್ಲರನ್ನೂ ಕಳೆದುಕೊಂಡ ನಾಯಕನಿಗೆ ಇಲ್ಲಿ ನಾಲ್ಕಾರು ಹೊಸ ಗೆಳೆಯರು ಜೊತೆಯಾಗುತ್ತಾರೆ. ಆದರೆ ಕಾರಿನ ಕನವರಿಕೆ ಮಾತ್ರ ಇಲ್ಲಿಯೂ ನಿಂತಿಲ್ಲ.

ಸಿದ್ಲಿಂಗು–2 (ಕನ್ನಡ)
● ನಿರ್ದೇಶನ: ವಿಜಯ ಪ್ರಸಾದ್
● ನಿರ್ಮಾಣ: ಶ್ರೀಹರಿ, ರಾಜು ಶೇರಿಗಾರ್
● ತಾರಾಗಣ: ಯೋಗಿ, ಸೋನು ಗೌಡ, ಸೀತಾ ಕೋಟೆ ಮತ್ತಿತರರು

ಸೀತಮ್ಮ, ವಿಶಾಲು, ಹಳೇ ಬೇವರ್ಸಿ, ಮಿಣಿ ಮಿಣಿ, ಮುಕುಂದರಾಯ, ಅಮಾವಾಸ್ಯೆ ಅನಂತು ಥರದ ಒಂದಷ್ಟು ವಿಶೇಷ ಎನ್ನಿಸುವಂತಹ ಪಾತ್ರಗಳನ್ನು ವಿಜಯಪ್ರಸಾದ್ ರಚಿಸಿದ್ದಾರೆ. ನಟರೆಲ್ಲ ಸ್ಪರ್ಧೆಗೆ ಬಿದ್ದವರಂತೆ ನಟಿಸಿರುವುದು ಸಿನಿಮಾವನ್ನು ಜೀವಂತವಾಗಿಡುತ್ತದೆ. ಸಿದ್ಲಿಂಗು ಸಿನಿಮಾದಲ್ಲಿ ಹರೆಯದ ಯುವಕನಾಗಿ ಪೋಲಿ ಮಾತುಗಳನ್ನಾಡುತ್ತಿದ್ದ ಯೋಗಿ ಅವರ ನಟನೆ ಈ ಚಿತ್ರದಲ್ಲಿ ಮೆಚ್ಯೂರ್ ಆಗಿದೆ. ಭಾವನಾತ್ಮಕ ದೃಶ್ಯಗಳಲ್ಲಿ ಬಹಳ ಇಷ್ಟವಾಗುತ್ತಾರೆ. ವಿಶಾಲುವಾಗಿ ಸೀತಾ ಕೋಟೆ, ಸ್ಮಶಾಣದಲ್ಲಿ ಗುಂಡಿ ತೋಡುವ ಸೀತಮ್ಮ ಪಾತ್ರದಲ್ಲಿ ಪದ್ಮಜಾ ರಾವ್ ನೆನಪಿನಲ್ಲಿ ಉಳಿಯುತ್ತಾರೆ. ಆದರೆ ನಿವೇದಿತಾ ಟೀಚರ್ ಆಗಿ ಬರುವ ನಾಯಕಿ ಸೋನು ಗೌಡಗೆ ರಮ್ಯಾರಿಂದ ತೆರವಾಗಿದ್ದ ಜಾಗವನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ. ಮುಂಗೋಪಿಯಾಗಿ ಬಿ ಸುರೇಶ್ ಖಡಕ್ ಎನಿಸಿದರೆ, ಸುಮನ್ ರಂಗನಾಥ್ ಒಂದೆರಡು ದೃಶ್ಯಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆ.

ವಿಜಯಪ್ರಸಾದ್ ತಮ್ಮ ಮಾಮೂಲಿ ಶೈಲಿಯಂತೆ ಚಿತ್ರಕಥೆಗಿಂತ ಸಂಭಾಷಣೆಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಆದರೆ ಅವರ ಹಿಂದಿನ ಸಿನಿಮಾಗಳಂತೆ ಡಬಲ್ ಮೀನಿಂಗ್ ಡೈಲಾಗ್‌ಗಳಿಲ್ಲ. ಬದಲಿಗೆ ಸಮಾಜದ ಪ್ರಸಿದ್ಧರನ್ನು ಟ್ರೋಲ್ ಮಾಡುವ ಸಂಭಾಷಣೆ ಇದೆ. ಬದುಕಿನ ಸತ್ಯ ತೆರೆದಿಡುವ ಅರ್ಥಪೂರ್ಣ ಸಾಲುಗಳಿವೆ. ಇಡೀ ಚಿತ್ರವನ್ನು ಗಟ್ಟಿಯಾದ ಕಥೆ, ಚಿತ್ರಕಥೆಯಿಲ್ಲದೆ ಸಂಭಾಷಣೆಯಿಂದಲೇ ಕಟ್ಟಿಕೊಡುವ ನಿರ್ದೇಶಕರ ಯತ್ನವಿಲ್ಲಿ ಸಫಲವಾಗಿಲ್ಲ. ರಾಜಕಾರಣಿಗಳನ್ನು, ಸಿನಿಮಾ ನಟರನ್ನು ಅನವಶ್ಯ ಟ್ರೋಲ್ ಮಾಡುವ ಒಂದಷ್ಟು ಮಾತುಗಳಿಗೆ ಕತ್ತರಿ ಹಾಕುವ ಅವಕಾಶವಿತ್ತು.

‘ಸಿದ್ಲಿಂಗು’ವಿನ ‘ಎಲ್ಲೆಲ್ಲೋ ಓಡುವ ಮನಸೇ..’ ರೀತಿಯ ಹಾಡುಗಳು ಇಲ್ಲಿ ಕೇಳಿಸುವುದಿಲ್ಲ. ಹಾಸ್ಯದ ಸನ್ನಿವೇಶಗಳಲ್ಲಿ ಹಿನ್ನೆಲೆ ಸಂಗೀತವನ್ನು ಬಲವಂತವಾಗಿ ತುರುಕಿದಂತೆ ಭಾಸವಾಗುತ್ತದೆ. ಎಮೋಷನಲ್ ದೃಶ್ಯಗಳನ್ನು ಇನ್ನಷ್ಟು ತೀವ್ರವಾಗಿ ಕಟ್ಟಿಕೊಡುವ ಅವಕಾಶವಿತ್ತು. ದ್ವಿತೀಯಾರ್ಧದ ಕೋರ್ಟ್ ಸನ್ನಿವೇಶಗಳನ್ನು ಸಾಕಷ್ಟು ಕಡೆ ಟ್ರಿಮ್ ಮಾಡಬಹುದಿತ್ತು.

ವಿನಾಯಕ ಕೆ.ಎಸ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ
https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಹಿಂದಿ ಚಿತ್ರನಟರಾದ ಅಕ್ಷಯ್ ಕುಮಾರ್ ಮತ್ತು ಟೈಗರ್ ಶ್ರಾಫ್ ಅವರ ವಿಡಿಯೊ ಫೇಸ್‌ಬುಕ್ ಮತ್ತು ಇತರ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಅಕ್ಷಯ್ ಕುಮಾರ್ ಮತ್ತು ಟೈಗರ್ ಶ್ರಾಫ್ ಭಾಗವಹಿಸಿದ್ದರು ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊ ಅನ್ನು ಪರಿಶೀಲಿಸಿದಾಗ ಹಲವು ಕೀಫ್ರೇಮ್‌ಗಳು ಕಂಡುಬಂದವು. ಅವುಗಳ ಪೈಕಿ ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರೀಕ್ಷೆಗೊಳಪಡಿಸಿದಾಗ ಒಂದೇ ವಿಡಿಯೊ ಅನ್ನು ಅನೇಕರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ಈ ಬಗ್ಗೆ ಮತ್ತಷ್ಟು ಹುಡುಕಾಟ ನಡೆಸಿದಾಗ, 2024ರ ಏ.10ರಂದು ಮಾಧ್ಯಮವೊಂದರಲ್ಲಿ ಪ್ರಕಟವಾದ ವರದಿ ಸಿಕ್ಕಿತು. ವರದಿಯಲ್ಲಿ ಇರುವ ಚಿತ್ರಕ್ಕೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಕೀಫ್ರೇಮ್‌ನ ಚಿತ್ರಕ್ಕೂ ಹೋಲಿಕೆ ಕಂಡುಬಂತು. ‘ಬಡೇ ಮಿಯಾ ಛೋಟೇ ಮಿಯಾ’ ಚಿತ್ರದ ಬಿಡುಗಡೆಯ ಸಂದರ್ಭದಲ್ಲಿ ಅಕ್ಷಯ್ ಕುಮಾರ್ ಮತ್ತು ಜಾಕಿ ಶ್ರಾಫ್ ಅವರು ಅಬುಧಾಬಿಯ ಬಿಎಪಿಎಸ್ ಹಿಂದೂ ಮಂದಿರಕ್ಕೆ ಭೇಟಿ ನೀಡಿದ್ದ ವೇಳೆ ತೆಗೆದ ಚಿತ್ರ ಇದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಅಕ್ಷಯ್ ಕುಮಾರ್ ಅವರು 2024ರ ಏ.9ರಂದು ಇದೇ ವಿಡಿಯೊ ಅನ್ನು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲೂ ಅಪ್‌ಲೋಡ್ ಮಾಡಿದ್ದಾರೆ. ಹಳೆಯ ವಿಡಿಯೊ ಅನ್ನು ಕೆಲವರು ಸುಳ್ಳು ಪ್ರತಿಪಾದನೆಗಳೊಂದಿಗೆ ಈಗ ಹಂಚಿಕೊಳ್ಳುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ನುಡಿ ಬೆಳಗು 133

ಆಸೆಯೇ ದುಃಖಕ್ಕೆ ಮೂಲ

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಈ ಜಗತ್ತಿನಲ್ಲಿ ದುಃಖವನ್ನು ಅನುಭವಿಸದ ಹೃದಯಗಳೇ ಇಲ್ಲ. ದುಃಖವನ್ನು ಅನುಭವಿಸದೇ ಇದ್ದರೆ ಅದು ಹೃದಯವೇ ಅಲ್ಲ. ದುಃಖ ಎಲ್ಲರಿಗೂ ಆಗಿದೆ. ಮನುಷ್ಯನಿಗೆ ದುಃಖ ಯಾಕೆ ಬರುತ್ತದೆ ಎನ್ನುವುದರ ಬಗ್ಗೆ ಆದಿ ಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ಎಲ್ಲರೂ ಚಿಂತನೆ ಮಾಡಿದ್ದಾರೆ. ಈ ಜಗತ್ತಿನಲ್ಲಿ ಯಾಕೆ ದುಃಖ ಇದೆ? ಪತಂಜಲಿ ಮಹರ್ಷಿಗಳು ಹಿಮಾಲಯದ ತಪ್ಪಲಲ್ಲಿ ತಪಸ್ಸು ಮಾಡಿದ್ದು ಕೂಡಾ ಇದಕ್ಕೆ ಉತ್ತರ ಕಂಡುಕೊಳ್ಳುವುದಕ್ಕೆ. ಶಂಕರಾಚಾರ್ಯರು ಕೂಡಾ ಹಡೆದ ತಾಯಿಯನ್ನು ಬಿಟ್ಟು ಇಡೀ ಭರತ ಖಂಡವನ್ನು ಪಾದಯಾತ್ರೆ ಮೂಲಕ ತಿರುಗಾಡಿದ್ದು ಇದಕ್ಕೆ ಉತ್ತರ ಕಂಡುಕೊಳ್ಳುವುದಕ್ಕೆ. 12ನೇ ಶತಮಾನದಲ್ಲಿ ಶರಣರು ಒಂದೆಡೆ ಕೂಡಿದ್ದು ಕೂಡಾ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದಕ್ಕಾಗಿಯೇ ಆಗಿತ್ತು. ದುಃಖ ಯಾಕೆ ಎಂಬ ನಾಲ್ಕು ಅಕ್ಷರಕ್ಕೆ ಅರ್ಥ ಹುಡುಕುವುದಕ್ಕಾಗಿ ಬುದ್ಧ ಸಾಮ್ರಾಜ್ಯವನ್ನೇ ತೊರೆದ.

ದುಃಖದ ಜೊತೆ ಯಾರು ಬರುತ್ತಾರೆ. ನೀವು ಎಷ್ಟೇ ಆಸ್ತಿ ಮಾಡಿದ್ದರೂ ನಿಮ್ಮ ಮಕ್ಕಳು ಆಸ್ತಿಯಲ್ಲಿ ಪಾಲು ಕೇಳುತ್ತಾರೆಯೇ ವಿನಾ ನಿಮ್ಮ ಪಾಪದಲ್ಲಿ ಪಾಲು ಕೇಳುವುದಿಲ್ಲ. ನೀವು ಸಂತೋಷವಾಗಿದ್ದಾಗ ಇಡೀ ಜಗತ್ತು ನಿಮ್ಮ ಜೊತೆ ನಗತೈತಿ. ಅಳುವಾಗ ನೀವೊಬ್ಬರೇ ಅಳಬೇಕಾಗತೈತಿ. ಸಂತೋಷಕ್ಕೆ ಸ್ನೇಹಿತರು ಬಹಳ ಇದ್ದಾರೆ. ದುಃಖಕ್ಕೆ ಯಾರೂ ಸ್ನೇಹಿತರಿಲ್ಲ. ಸುಖದಲ್ಲಿ ಎಲ್ಲರೂ ಇದ್ದರು. ಕಷ್ಟದಲ್ಲಿ ಯಾರೂ ಇಲ್ಲ ಅಂತ ನಾವು ಹೇಳತಾ ಇರತೀವಿ. ಅದಕ್ಕೆ ನಿಮ್ಮ ದೇಹವನ್ನೇ ನೋಡಿ; ಸಂತೋಷವಾಗಿ ಚಪ್ಪಾಳೆ ಹೊಡೆಯುವಾಗ ನಿಮ್ಮ ಕೈಯಲ್ಲಿರುವ ಎಲ್ಲ ಬೆರಳುಗಳು ಒಂದಕ್ಕೊಂದು ಸೇರುತ್ತವೆ. ಕಷ್ಟ ಬಂದು ಕಣ್ಣೀರು ಬಂದರೆ ಒಂದೇ ಬೆರಳು ಮಾತ್ರ ನೀರನ್ನು ಒರೆಸುತ್ತದೆ. ನಮ್ಮ ಕಣ್ಣೀರು ಒರೆಸಲು ನಮ್ಮ ಕೈಯಾಗಿನ ಹತ್ತೂ ಬೆರಳುಗಳು ಬಂದಿಲ್ಲ ಅಂದ ಮೇಲೆ, ನಮ್ಮ ದುಃಖಕ್ಕೆ ಜಗದ ಜನ ಯಾಕೆ ಬರ್ತಾರೆ.

ದುಃಖ ಎನ್ನುವ ಶಬ್ದವೇ ವಿಶಿಷ್ಟ. ದು ಮತ್ತು ಖ ಅಕ್ಷರಗಳ ನಡುವೆ ಎರಡು ಕಣ್ಣೀರಿನ ಹನಿ ಇಟ್ಟಿದ್ದಾರೆ ಭಾಷಾ ಶಾಸ್ತ್ರಜ್ಞರು. ದುಃಖ ಯಾಕೆ ಎನ್ನುವುದಕ್ಕೆ ಬುದ್ಧನಿಗೆ ಉತ್ತರ ಸಿಕ್ಕಿತ್ತು. ಬುದ್ಧ ಹೇಳುತ್ತಾನೆ, ಇಚ್ಛೆಯೇ ದುಃಖಕ್ಕೆ ಮೂಲ ಅಂತ. ಅಳು ಯಾಕೆ ಎಂದರೆ, ಅತ್ತರೆ ಬಯಸಿದ್ದು ಸಿಗುತ್ತದೆ ಎಂದು ಸಣ್ಣವರಿದ್ದಾಗಿನಿಂದ ಕಲಿತಿದ್ದೇವೆ ನಾವು. ಸಣ್ಣವರಿದ್ದಾಗ ಅಳತಿದ್ವಿ. ನಾವು ಬಯಸಿದ್ದನ್ನು ತಂದೆ ತಾಯಿ ಕೊಡಿಸುತ್ತಿದ್ದರು. ದೊಡ್ಡವರಾದ ಮೇಲೂ ಅಳುತ್ತಿದ್ದೀವಿ. ಆದರೆ, ಬಯಸಿದ್ದು ಸಿಗುತ್ತಿಲ್ಲ. ಸಣ್ಣವರಿದ್ದಾಗ ನಾವು ಸಣ್ಣವರಿದ್ವಿ. ನಮ್ಮ ಬಯಕೆ ಕೂಡಾ ಸಣ್ಣದಿತ್ತು. ಅದಕ್ಕೆ ಅದು ಪೂರೈಕೆಯಾಗುತ್ತಿತ್ತು. ಆಗ ನಮ್ಮ ಬಯಕೆಗೆ ಜಗತ್ತು ದೊಡ್ಡದಿತ್ತು. ದೊಡ್ಡವರಾದ ಮೇಲೆ ನಮ್ಮ ಬಯಕೆ ಕೂಡಾ ದೊಡ್ಡದಿರತೈತಿ. ಅದಕ್ಕೆ ಅದು ಪೂರೈಕೆಯಾಗುತ್ತಿಲ್ಲ. ನಮ್ಮ ಇಚ್ಛೆಗೆ ಜಗತ್ತು ಸಣ್ಣದಾಗಿದೆ. ನಾನು ಅಂದುಕೊಂಡಂಗೆ ಎಲ್ಲವೂ ನಡೀಬೇಕು ಎಂದು ಬಯಸುತ್ತೀವಿ. ಆದರೆ, ಜಗತ್ತು ಹಾಗೆ ಇಲ್ಲ. ಅದನ್ನು ಮನುಷ್ಯ ತಿಳಕೋಬೇಕು. ಜಗತ್ತಿನ ಇಚ್ಛೆಯಂತೆ ನಾವು ಹೊಂದಿಕೊಂಡು ಬದುಕಬೇಕು. ಬಯಸಿದ್ದೆಲ್ಲ ಸಿಗೋದಿಲ್ಲ ಅನ್ನುವ ಅರಿವು ಮನುಷ್ಯನಿಗೆ ಇರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 17, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಪಂಚಮಿ ಗಂ.28-54 ನಕ್ಷತ್ರ: ಚಿತ್ತಾ ಅಹೋರಾತ್ರ ಯೋಗ: ಶೂಲ ಗಂ. 08-55 ಕರಣ: ಕೌಲವ ಗಂ. 15-34, ಕುಂಭ ಮಾಸದ 05 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 4.
ರಾಹುಕಾಲ: ಬೆಳಗ್ಗೆ 07-30 – 09-00
ಸೂರ್ಯೋದಯ: 06-56 ಸೂರ್ಯಾಸ್ತ: 06-33
ಮುಸ್ಲಿಂ ದಿನಾಂಕ: 18 ಶಬನ್
ಅದೃಷ್ಟ ಸಂಖ್ಯೆ: 8, 3

ಮೇಷ: ಮನೆಯಲ್ಲಿನ ಶಾಂತಿ ನೆಮ್ಮದಿ ಮರಳುವುದು. ಮನಸ್ಸಿನಲ್ಲಿ ಆಗುತ್ತಿರುವ ತಳಮಳಗಳಿಗೆ ಸದ್ಯವೇ ಪರಿಹಾರ ಸಿಗಲಿದೆ. ಕಾರಣವಿಲ್ಲದೇ ಸುಮ್ಮನೆ ಮಕ್ಕಳ ಮೇಲೆ ಸಿಟ್ಟುಗೊಳ್ಳಬೇಡಿ.

ವೃಷಭ: ಅಲಂಕಾರಿಕ ವಸ್ತುಗಳ ಮಾರಾಟಗಾರರಿಗೆ ಲಾಭದಾಯಕ ದಿನ. ಸಮಸ್ಯೆಯಾಗಿದ್ದ ಕೆಲವು ಪ್ರಶ್ನೆಗಳಿಗೆ ತಂತ್ರಜ್ಞಾನಗಳ ಮೂಲಕ ಉತ್ತರ ದೊರೆಯಲಿವೆ. ಮನೆಯ ನಿರ್ಮಾಣ ಒಂದು ಹಂತಕ್ಕೆ ಬರಲಿದೆ.

ಮಿಥುನ: ವೈಯಕ್ತಿಕ ಗಳಿಕೆಗಿಂತ ಕಂಪನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ಲೋಹ ಮತ್ತು ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗುತ್ತದೆ. ಹೊಸ ಕೆಲಸಕ್ಕೆ ಪ್ರಯತ್ನಿಸಬಹುದು.

ಕರ್ಕಾಟಕ: ದಿನದ ಪೂರ್ವಾರ್ಧದಲ್ಲಿ ಶುಭವನ್ನು ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರಣ ಸಿಗಲಿದೆ. ಭವಿಷ್ಯದ ಯೋಜನೆಗಳಿಗೆ ಗಮನ ಕೊಡಬೇಕಾಗಿ ಬರುವುದು.

ಸಿಂಹ: ಪರಮಾಪ್ತರ ಭೇಟಿ, ಮನಸ್ಸಿಗೆ ಮುದ ನೀಡುವ ಸಂಗತಿಗಳು ನಡೆಯಲಿವೆ. ಆಫೀಸಿನಲ್ಲಿ ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವಿರಿ. ವೃತ್ತಿಯಲ್ಲಿ ನಿರಂತರ ಆದಾಯವಿದ್ದರೂ ಋಣಬಾಧೆ ತಪ್ಪದು.

ಕನ್ಯಾ: ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲವೊಂದು ಕುಡಿಯೊಡೆದು ಹೆಚ್ಚಿನ ಲಾಭ ಬರಲಿದೆ. ಠೇವಣಿಯಲ್ಲಿ ಅಥವಾ ಆಸ್ತಿ ರೂಪದಲ್ಲಿ ಹಣ ಬೆಳೆಯಲಿದೆ.

ತುಲಾ: ಪ್ರೀತಿಸುವವರ ಮಾರ್ಗದರ್ಶನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿ ಬರಲಿದೆ. ವ್ಯಾಪಾರ ನಡೆಸುವಾಗ ಹಣಕಾಸಿನ ವಿಚಾರದಲ್ಲಿ ಗಮನ ಇರಲಿ. ಪಾಲುದಾರಿಕೆಯಲ್ಲಿ ಲಾಭ ಗಳಿಸುವಿರಿ.

ವೃಶ್ಚಿಕ: ಹೆಚ್ಚಿನ ಸಮಯವೆಲ್ಲವನ್ನು ನಿಶ್ಚಿತ ಗುರಿ ತಲುಪಲು ಮೀಸಲಾಗಿಡುವುದು ಒಳ್ಳೆಯದು. ವರ್ತಕರಿಗೆ ಹೊಸ ವಸ್ತುಗಳ ವ್ಯಾಪಾರದಿಂದ ಲಾಭ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಧನು: ಸ್ವ ಉದ್ಯೋಗಿಗಳು ಕೈತಪ್ಪಿದ ಅವಕಾಶಗಳನ್ನು ಪರಿಶ್ರಮದಿಂದ ಮರಳಿ ಪಡೆಯುವ ಪ್ರಯತ್ನ ಮಾಡಿ. ಕಾಫಿ ಮತ್ತು ಕಾಳುಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ವಿದ್ಯಾಭ್ಯಾಸ ಪ್ರಗತಿ ಪಥದಲ್ಲಿ ನಡೆಯುವುದು.

ಮಕರ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆ ಅವರ ಮಾತಿನಂತೆ ನಡೆಯುತ್ತದೆ. ಕೃಷಿ ಕ್ಷೇತ್ರದಲ್ಲಿ ಚೇತರಿಕೆಯು ರೈತರಿಗೆ ನೆಮ್ಮದಿ ತರುವುದು. ತರಕಾರಿ ಮಾರಾಟಗಾರರಿಗೆ ಶುಭ ದಿನ.

ಕುಂಭ: ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ. ನಿಮ್ಮ ತಂಡ ಎದುರಿಸುತ್ತಿರುವ ಪ್ರಮುಖ ವಿಷಯಗಳ ತೊಂದರೆಯನ್ನು ನಿವಾರಣೆ ಮಾಡುವ ಸಾಮರ್ಥ್ಯ ಸಿಗಲಿದೆ. ವೈವಾಹಿಕ ಜೀವನದಲ್ಲಿ ನೆಮ್ಮದಿ ಕಂಡುಬರಲಿದೆ.

ಮೀನ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯವಹಾರಗಳಲ್ಲಿ ಹೇಳುವ ಲಾಭ-ವಿಲ್ಲದ್ದಿದ್ದರೂ, ಹೆದರುವ ಅವಶ್ಯಕತೆ ಇರುವುದಿಲ್ಲ. ಅದು ತಾತ್ಕಾಲಿಕವಷ್ಟೇ. ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಕ್ತ ಕಾಲ.

ಪದಬಂಧ 5956

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಡವಾಗಿ ನೋಡುತ್ತಿರುವ ಅಬ್ಬಿ (4)
5.ಕರಿಯ ಹತ್ತಿರ ಹಾರುತ್ತಿರುವ ಹೆಣ್ಣು ದುಂಬಿ (4)
6.ಶುನಕದ ಹತ್ತಿರವಿರುವ ಗಿಳಿ (2)
7.ಗಿರಿಯ ಹತ್ತಿರ ಸೆರೆ ಹಿಡಿಯುವುದು (4)
9.ಮಾತು ಬಾರದವನು (2)
11.ಬಿದಿರು ಕಬ್ಬು ಮುಂತಾದವುಗಳ ಕೋಲು (2)
12.ಬಿರುಸಾದ ಮಾತಿದು (4)
14.ಜೇಷ್ಠ ಪುತ್ರ ತಂದಿರುವ ಕಟ್ಟಿಗೆ ಇಲ್ಲಿದೆ (2)
16.ಯಾವ ವಿವಾದಕ್ಕೂ ಸೇರದವನು (4)
17.ಕೆಲಸ ಮಾಡುವ ಸ್ಥಳ (4)

ಮೇಲಿಂದ ಕೆಳಕ್ಕೆ
1.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2.ಹೂವಿನಲ್ಲಿರುವ ಸಿಹಿ ರಸ (4)
3.ತರಿಯನ್ನು ತರಲು ತೋರಿದ ಅವಸರ (4)
4.ಈತ ಬಲು ಜಿಪುಣ (3)
6.ಮುತ್ತು ಇಲ್ಲಿದೆ (2)
8.ಗೀಟು ಕಾಣದಂತೆ ಮಾಡಿದ ಹೊಳಪಿನ ಲೇಪನ (3)
10.ಅತ್ಯಂತ ಕೆಳಮಟ್ಟದ್ದು (3)
12.ಸೊಂಟಕ್ಕೆ ಕಟ್ಟಿದ ಉಡಿದಾರ (4)
13.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪುಪಡೆದ ವ್ಯಕ್ತಿ (4)
14.ಕೈಲಾಸವೆನಿಸಿಕೊಂಡಿರುವ ಕೆಲಸವಿಲ್ಲಿ ದೀರ್ಘವಾಗಿದೆ (3)
15.ನಿದ್ರೆಯಲ್ಲಿ ಕಾಣುವ ನೋಟ (3)



5955ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಪ್ರತಾಪ 3.ದೇಹ
6.ಕಡಿತ 8.ಪತ್ತಲ
9.ಮಿಳ್ಳೆ 10.ಹೊಸಬದುಕು
11.ಧ್ಯೇಯ 13.ಕಿಟಕಿ
14.ಹರಾಮ 16.ಡಬ್ಬ
17.ದಿವಾನ

ಮೇಲಿಂದ ಕೆಳಕ್ಕೆ:
1.ಪ್ರತಿಗಾಮಿ 2.ಪದಕ
4.ಹಮಾಲ 5.ತಪರಾಕು
7.ತಲೆಬರಹ 10.ಹೊಟ್ಟೆಕಿಚ್ಚು
12.ಯಜಮಾನ
13.ಕಿವುಡ 15.ಮಡದಿ

ಸುಡೊಕು 6341

				4		8		7
4		8						
	9			7		6		4
	5		7				6	
				9				
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6340 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಜಾಗತಿಕ ಮೇಳಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ

ಜವಳಿ ರಫ್ತು ಹೆಚ್ಚಳ ಗುರಿ

ನವದೆಹಲಿ (ಪಿಟಿಐ): 'ದೇಶದ ಜವಳಿ ರಫ್ತು ಮೌಲ್ಯವು 2030ರೊಳಗೆ ₹9 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆಯಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿನ ಭಾರತ ಮಂಟಪದಲ್ಲಿ ನಡೆಯುತ್ತಿರುವ ಜಾಗತಿಕ ಜವಳಿ ಮೇಳವಾದ 'ಭಾರತ್ ಟೆಕ್ಸ್ 2025'ಕ್ಕೆ ಭಾನುವಾರ ಭೇಟಿ ನೀಡಿ ಪ್ರದರ್ಶನ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಪ್ರಸ್ತುತ ಭಾರತವು ಜವಳಿ ಮತ್ತು ಸಿದ್ಧಉಡುಪು ರಫ್ತಿನಲ್ಲಿ ಜಾಗತಿಕ ಮಟ್ಟದಲ್ಲಿ 6ನೇ ಅತಿದೊಡ್ಡ ರಾಷ್ಟ್ರವಾಗಿದೆ. ಒಟ್ಟು ರಫ್ತು ಮೌಲ್ಯ ₹3 ಲಕ್ಷ ಕೋಟಿಯಷ್ಟಿದೆ. ಇದನ್ನು ಮೂರು ಪಟ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು. ಕಳೆದ ಒಂದು ದಶಕದ ಅವಧಿಯಲ್ಲಿ ಕೇಂದ್ರ ಸರ್ಕಾರವು ಜವಳಿ ವಲಯದ ಅಭಿವೃದ್ಧಿಗೆ ಪೂರಕವಾದ ನೀತಿಗಳನ್ನು ರೂಪಿಸಿದೆ. ಹಾಗಾಗಿ, ಈ ವಲಯದಲ್ಲಿ ವಿದೇಶಿ ಹೂಡಿಕೆಯು ದುಪ್ಪಟ್ಟಾಗಿದೆ ಎಂದು ಹೇಳಿದರು.

'ಈ ವಲಯದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳಿಂದಾಗಿ ನಿಗದಿತ ಗುರಿ ಸಾಧನೆಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಯಾರಿಕಾ ವಲಯದಲ್ಲಿನ ಒಟ್ಟು ಉದ್ಯೋಗಗಳ ಪೈಕಿ ಈ ವಲಯದ ಪಾಲು ಶೇ 11ರಷ್ಟಿದೆ. ಹತ್ತಿ ಉತ್ಪನ್ನಗಳ ಘಟಕವೊಂದರ ಸ್ಥಾಪನೆಗೆ ₹75 ಕೋಟಿ ವೆಚ್ಚವಾಗಲಿದೆ. ಇದರಿಂದ 2 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಬ್ಯಾಂಕ್‌ಗಳು ಇಂತಹ ಘಟಕಗಳ ಸ್ಥಾಪನೆಗೆ ಸಾಲ ಸೌಲಭ್ಯ ಕಲ್ಪಿಸಬೇಕು ಎಂದು ಹೇಳಿದರು.

ಕಳೆದ ವರ್ಷ ದೇಶದ ಜವಳಿ ಮತ್ತು ಸಿದ್ಧಉಡುಪು ರಫ್ತು ಪ್ರಮಾಣವು ಶೇ 7ರಷ್ಟು ಏರಿಕೆಯಾಗಿದೆ. ಈ ವಲಯದಲ್ಲಿ ಕೌಶಲ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ಸರ್ಕಾರ ಒತ್ತು ನೀಡಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು 'ಭಾರತ್ ಟೆಕ್ಸ್ 2025'ಕ್ಕೆ ಭಾನುವಾರ ಭೇಟಿ ನೀಡಿ, ಪ್ರದರ್ಶನ ವೀಕ್ಷಿಸಿದರು —ಪಿಟಿಐ ಚಿತ್ರ

ಐಐಟಿ ಜತೆ ಕೈಜೋಡಿಸಲು ಸಲಹೆ

ಜವಳಿ ಕೈಗಾರಿಕೆಯು ಐಐಟಿಯಂತಹ ಸಂಸ್ಥೆಗಳ ಜೊತೆಗೆ ಹೊಸ ತಂತ್ರಜ್ಞಾನದ ಅಭಿವೃದ್ಧಿಗಾಗಿ ಕೈಜೋಡಿಸಬೇಕು ಎಂದು ಮೋದಿ ಹೇಳಿದರು.

ರೈತರ ಹೊಲದಲ್ಲಿ ಬೆಳೆಯುವ ಹತ್ತಿಯಿಂದ ನೂಲು ತಯಾರಿಕೆಯು ಮೊದಲ ಹಂತವಾಗಿದೆ. ಈ ನೂಲನ್ನು ಕಾರ್ಖಾನೆಗೆ ಪೂರೈಸಬೇಕು. ಕಾರ್ಖಾನೆಯಿಂದ ತಯಾರಾಗುವ ಉಡುಪುಗಳು ಫ್ಯಾಷನ್ ಜಗತ್ತಿಗೆ ಪ್ರವೇಶಿಸಬೇಕು. ಫ್ಯಾಷನ್ ಮೂಲಕ ದೇಶೀಯ ಹತ್ತಿ ಉಡುಪುಗಳು ಜಾಗತಿಕ ಮಟ್ಟಕ್ಕೆ ತಲುಪಬೇಕಿದೆ. ಈ ಪೂರೈಕೆ ಸರಪಳಿಯಲ್ಲಿ ರೈತರು, ನೇಕಾರರು, ವಿನ್ಯಾಸಕರು ಮತ್ತು ವ್ಯಾಪಾರಿಗಳಿಗೆ ಅನುಕೂಲವಾಗಲಿದೆ ಎಂದು ವಿವರಿಸಿದರು.

2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಜವಳಿ ಸಚಿವಾಲಯಕ್ಕೆ ₹4,417 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಅಲ್ಲದೆ, ಬಜೆಟ್‌ನಲ್ಲಿ ಹತ್ತಿ ಉತ್ಪಾದನೆ ಹೆಚ್ಚಿಸಲು ಹತ್ತಿ ಮಿಷನ್ ಯೋಜನೆಯನ್ನು ಘೋಷಿಸಲಾಗಿದೆ. ಇದಕ್ಕೆ ₹500 ಕೋಟಿ ಮೀಸಲಿಡಲಾಗಿದೆ. 2025–26ನೇ ಸಾಲಿನ ಬಜೆಟ್‌ನಲ್ಲಿ ಸಚಿವಾಲಯಕ್ಕೆ ₹5,272 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

ಎಂ.ಎಫ್ ಹೂಡಿಕೆಗೆ ಸಲಹೆ ಅಗತ್ಯವೇ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಮ್ಯೂಚುವಲ್ ಫಂಡ್‌ನಲ್ಲಿ (ಎಂ.ಎಫ್) ಹೂಡಿಕೆ ಮಾಡುವಾಗ ಸಲಹೆಗಾರರ ನೆರವು ಪಡೆದು ಹೂಡಿಕೆ ಮಾಡಬೇಕೇ ಅಥವಾ ನೇರವಾಗಿ ಹೂಡಿಕೆ ಮಾಡಬೇಕೇ ಎನ್ನುವ ಪ್ರಶ್ನೆಯು ಪ್ರತಿ ಹೂಡಿಕೆದಾರರಿಗೆ ಒಂದಲ್ಲ ಒಂದು ಹಂತದಲ್ಲಿ ಕಾಡುತ್ತದೆ.

ಪ್ರತಿ ಮ್ಯೂಚುವಲ್ ಫಂಡ್ ಎರಡು ಮಾದರಿಯಲ್ಲಿ ಬರುತ್ತದೆ. ಒಂದು ಡೈರೆಕ್ಟ್ ಮ್ಯೂಚುವಲ್ ಫಂಡ್; ಮತ್ತೊಂದು ರೆಗ್ಯುಲರ್ ಮ್ಯೂಚುವಲ್ ಫಂಡ್. ಡೈರೆಕ್ಟ್ ಫಂಡ್ ಅಂದರೆ ನೀವೇ ನೇರವಾಗಿ ಡೈರೆಕ್ಟ್ ಮ್ಯೂಚುವಲ್ ಫಂಡ್ ಆ್ಯಪ್‌ಗಳ ಮೂಲಕ ಅಥವಾ ನಿರ್ದಿಷ್ಟ ಮ್ಯೂಚುವಲ್ ಫಂಡ್ ಕಂಪನಿಗಳ ವೆಬ್‌ಸೈಟ್ ಮೂಲಕ ಖರೀದಿಸುವುದಾಗಿದೆ.

ರೆಗ್ಯುಲರ್ ಮ್ಯೂಚುವಲ್ ಫಂಡ್ ಎಂದರೆ ಮ್ಯೂಚುವಲ್ ಫಂಡ್ ಸಲಹೆಗಾರರು, ವಿತರಕರ ಮೂಲಕ ಹೂಡಿಕೆ ಮಾಡುವುದಾಗಿದೆ. ಐಸಿಐಸಿಐ ಪ್ರೂಡೆನ್ಶಿಯಲ್ ಬ್ಲೂಚಿಪ್ ಡೈರೆಕ್ಟ್ ಗ್ರೋಥ್ ಫಂಡ್ ಅನ್ನು ಉದಾಹರಣೆಯಾಗಿ ತೆಗೆದುಕೊಂಡು ನೋಡಿದಾಗ ಡೈರೆಕ್ಟ್ ಮತ್ತು ರೆಗ್ಯುಲರ್ ಪ್ಲಾನ್ ಎರಡೂ ಇರುವುದನ್ನು ಕಾಣಬಹುದು. ಈ ಎರಡು ಮಾದರಿಗಳ ಪೈಕಿ ಹೂಡಿಕೆದಾರರು ಯಾವುದನ್ನು ಆಯ್ಕೆ ಮಾಡಬೇಕು? ಬನ್ನಿ, ವಿವರವಾಗಿ ಇಲ್ಲಿ ಕಲಿಯೋಣ.

ನಿಮಗೆ ಹೊಂದುವ ಆಯ್ಕೆ ಯಾವುದು?: ಯಾವುದೇ ವ್ಯಕ್ತಿ ಮ್ಯೂಚುವಲ್ ಫಂಡ್ ಸಲಹೆಗಾರರ ಮೂಲಕ ಹೂಡಿಕೆ ಮಾಡಲು ಮುಂದಾದಾಗ ಮೊದಲಿಗೆ ಅವರು ನಿಮ್ಮ ಆರ್ಥಿಕ ಸ್ಥಿತಿಗತಿಯ ಅವಲೋಕನ ಮಾಡುತ್ತಾರೆ. ಎಷ್ಟು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿದ್ದೀರಿ. ಮಾಸಿಕ ಎಷ್ಟು ಹೂಡಿಕೆ ಮಾಡಲು ತಯಾರಿದ್ದೀರಿ. ಎಷ್ಟು ಅವಧಿಗೆ ಹೂಡಿಕೆ ಮುಂದುವರಿಸಬಹುದು ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾರೆ. ನಂತರದಲ್ಲಿ ಎಲ್ಲಾ ಮಾಹಿತಿಯ ಅವಲೋಕನ ಮಾಡಿ ಯಾವ ರೀತಿ ಹೂಡಿಕೆ ಮಾಡಬೇಕು ಎನ್ನುವುದನ್ನು ತಿಳಿಸುತ್ತಾರೆ.

ಸಾಮಾನ್ಯವಾಗಿ ಈ ಸಲಹೆಗಾರರು ರೆಗ್ಯುಲರ್ ಫಂಡ್‌ಗಳನ್ನೇ ಸೂಚಿಸುತ್ತಾರೆ. ಸಲಹೆಗಾರರಿಂದ ತಿಳಿವಳಿಕೆ ಪಡೆದು ನೀವು ರೆಗ್ಯುಲರ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ, ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯು ಆ ಹೂಡಿಕೆ ಮೊತ್ತದಲ್ಲಿ ಒಂದು ಸಣ್ಣ ಪ್ರಮಾಣವನ್ನು ತೆಗೆದು ಸಲಹೆಗಾರರಿಗೆ ಕಮಿಷನ್ ರೂಪದಲ್ಲಿ ನೀಡುತ್ತದೆ. ಈ ರೀತಿಯಾಗಿ ಸಲಹೆಗಾರರು ಹಣ ಗಳಿಸುತ್ತಾರೆ.

ನನಗೆ ಫಂಡ್ ಸಲಹೆಗಾರರ ನೆರವು ಬೇಕಿಲ್ಲ. ನಾನೇ ನೇರವಾಗಿ ಫಂಡ್‌ಗಳನ್ನು ಆಯ್ಕೆ ಮಾಡಿ ಹೂಡಿಕೆ ಮಾಡುತ್ತೇನೆ ಎಂದಾದರೆ ನೀವು ಡೈರೆಕ್ಟ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು. ಈ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ ಸಲಹೆಗಾರರಿಗೆ ಹೋಗುವ ಕಮಿಷನ್ ಇರುವುದಿಲ್ಲ. ಹಾಗಾಗಿ, ಈ ಫಂಡ್‌ಗಳಲ್ಲಿನ ಗಳಿಕೆಯು ರೆಗ್ಯುಲರ್ ಫಂಡ್‌ಗಳ ಗಳಿಕೆಗಿಂತ ಹೆಚ್ಚಿರುತ್ತದೆ.

ಸಲಹೆಗಾರರ ನೆರವು ಏಕೆ?: ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್‌ಗಳ ಬಗ್ಗೆ ಒಂದಷ್ಟು ಅರಿವಿದ್ದು, ವಿವಿಧ ಫಂಡ್‌ಗಳ ಬಗ್ಗೆ ತಿಳಿವಳಿಕೆ ಇದ್ದರೆ ಡೈರೆಕ್ಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು. ಇಂತಹ ಹೂಡಿಕೆದಾರರಿಗೆ ಸಲಹೆಗಾರರ ನೆರವು ಪಡೆಯುವ ಅಗತ್ಯ ಬೀಳುವುದಿಲ್ಲ.

ಆದರೆ ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್ ಮತ್ತು ಮಾರುಕಟ್ಟೆ ಏರಿಳಿತದ ಬಗ್ಗೆ ಸರಿಯಾದ ಅರಿವಿಲ್ಲ. ಫಂಡ್‌ಗಳನ್ನು ಹೇಗೆ ಆಯ್ಕೆ ಮಾಡಬೇಕು ಎಂಬುದು ಗೊತ್ತಿಲ್ಲ. ಹೂಡಿಕೆ ಮತ್ತು ವಿಶ್ಲೇಷಣೆ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲ ಎನ್ನುವವರು ಸಲಹೆಗಾರರ ನೆರವು ಪಡೆಯುವುದು ಒಳಿತು.

ಸಲಹೆಗಾರರ ನೆರವು ಪಡೆದರೆ ಒಂದಿಷ್ಟು ಕಮಿಷನ್ ಅವರಿಗೆ ಹೋಗುತ್ತದೆ ಎನ್ನುವುದು ನಿಜ. ಆದರೆ, ಸರಿಯಾಗಿ ತಿಳಿಯದೆ ಸಿಕ್ಕ ಸಿಕ್ಕ ಫಂಡ್‌ಗಳನ್ನು ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಿ ಕೈಸುಟ್ಟುಕೊಳ್ಳುವ ಬದಲು ಶುಲ್ಕದ ರೂಪದಲ್ಲಿ ಒಂದಷ್ಟು ಕಮಿಷನ್ ಅನ್ನು ಸಲಹೆಗಾರರಿಗೆ ನೀಡುವುದರಲ್ಲಿ ತಪ್ಪಿಲ್ಲ.

ಸಲಹೆಗಾರರ ಆಯ್ಕೆ ಹೇಗೆ?: ಸಲಹೆಗಾರರನ್ನು ಆಯ್ಕೆ ಮಾಡಿಕೊಳ್ಳುವಾಗ ಅವರು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸುವ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿದ್ದಾರೆಯೇ ಎಂಬುದನ್ನು ನೋಡಬೇಕಿದೆ. ಹೂಡಿಕೆಯಲ್ಲಿ ಅವರಿಗೆ ಅನುಭವ ಇದೆಯೇ ಎಂದು ಪರಿಶೀಲಿಸಿಕೊಳ್ಳಿ. ಮಾರುಕಟ್ಟೆಯಲ್ಲಿರುವ ವಿವಿಧ ವಲಯ, ವಿವಿಧ ಸೂಚ್ಯಂಕ, ಆರ್ಥಿಕ ಬೆಳವಣಿಗೆಗಳ ಬಗ್ಗೆ ಅವರಿಗೆ ಪರಿಚಯ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಎಲ್ಲದಕ್ಕಿಂತಲೂ ಮಿಗಿಲಾಗಿ ನೀವು ಆಯ್ಕೆ ಮಾಡಿಕೊಳ್ಳಲು ಬಯಸಿರುವ ಸಲಹೆಗಾರ ವಿಶ್ವಾಸಾರ್ಹ ವ್ಯಕ್ತಿಯೇ ನೋಡಿ. ಮಾರುಕಟ್ಟೆ ಏರಿಳಿತದ ಸಂದರ್ಭದಲ್ಲಿ ಅವರು ನಿಮಗೆ ಸೂಕ್ತ ಮಾರ್ಗದರ್ಶನ ಮಾಡುವ ಅಧ್ಯಯನ ಮತ್ತು ಕಲಿಕೆ ಅವರಲ್ಲಿದೆಯಾ ಅಳೆದು ನೋಡಿ. ನಿಮಗೆ ಎಲ್ಲವೂ ಸರಿಯಿದೆ ಎನಿಸಿದಾಗ ಸಲಹೆಗಾರರ ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಗೆ ಮುಂದಾಗಿ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆಯಲ್ಲಿ ಅನಿಶ್ಚಿತತೆ ಆಟ

ಫೆಬ್ರುವರಿ 14ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸಿವೆ. 75,939 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.47ರಷ್ಟು ಇಳಿಕೆ ಕಂಡಿದೆ. 22,929 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 2.68ರಷ್ಟು ತಗ್ಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ, ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ಸಾಧಾರಣ ಬೆಳವಣಿಗೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವುದಾಗಿ ಹೇಳಿರುವುದು ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 9.4, ಮಾಧ್ಯಮ ಶೇ 7.99, ಎನರ್ಜಿ ಶೇ 6.84, ಆಟೊ ಶೇ 5.93, ಫಾರ್ಮಾ ಶೇ 5.73, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 5.23, ಲೋಹ ಶೇ 4.64, ಮಾಹಿತಿ ತಂತ್ರಜ್ಞಾನ ಶೇ 3.75, ಎಫ್‌ಎಂಸಿಜಿ ಶೇ 3.58 ಮತ್ತು ಬ್ಯಾಂಕ್ ನಿಫ್ಟಿ ಶೇ 2.11ರಷ್ಟು ಕುಸಿದಿವೆ.

ಇಳಿಕೆ–ಗಳಿಕೆ: ವಾರದ ಅವಧಿಯಲ್ಲಿ ನಿಫ್ಟಿಯಲ್ಲಿ ಐಷರ್ ಮೋಟರ್ಸ್ ಶೇ 12.45, ಹೀರೊ ಮೋಟೊಕಾರ್ಪ್ ಶೇ 9.79, ಭಾರತ್ ಎಲೆಕ್ಟ್ರಾನಿಕ್ಸ್ ಶೇ 9.64, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 8.04, ಅದಾನಿ ಎಂಟರ್‌ಪ್ರೈಸಸ್ ಶೇ 7.94, ಅಪೋಲೊ ಹಾಸ್ಪಿಟಲ್ಸ್ ಶೇ 7.57, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 7.53, ಒಎನ್‌ಜಿಸಿ ಶೇ 7.45, ಅದಾನಿ ಪೋರ್ಟ್ಸ್ ಶೇ 7.34, ಕೋಲ್ ಇಂಡಿಯಾ ಶೇ 6.4, ಟ್ರೆಂಟ್ ಶೇ 6.2 ಮತ್ತು ಟೈಟನ್ ಕಂಪನಿ ಶೇ 6.19ರಷ್ಟು ಕುಸಿದಿವೆ.

ಏರ್‌ಟೆಲ್ ಶೇ 2.35, ಬಜಾಜ್ ಫಿನ್‌ಸರ್ವ್ ಶೇ 2.3, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 1.04, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 0.82, ಟಾಟಾ ಕನ್ಸ್ಯೂಮರ್ ಶೇ 0.3 ಮತ್ತು ಐಸಿಐಸಿಐ ಬ್ಯಾಂಕ್ ಶೇ 0.07ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಎಬಿಬಿ ಇಂಡಿಯಾ, ಪಂಜಾಬ್ ಕಮ್ಯೂನಿಕೇಷನ್ಸ್, ಎಲೆಂಟಾಸ್ ಬೆಕ್ ಇಂಡಿಯಾ, ಸಿಐಇ ಆಟೊಮೋಟಿವ್ ಇಂಡಿಯಾ, ಜಾನ್ ಕಾಕ್ ರಿಲ್ ಇಂಡಿಯಾ ಸೇರಿದಂತೆ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶಿವಗಣಾರಾಧನೆ

ಟಿ. ನಾರಾಯಣಸ್ವಾಮಿ
ಜನನ: 7.10.1931 ನಿಧನ: 08.02.2025
ಇವರು ದಿನಾಂಕ: 8.2.2025 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ವೈಕುಂಠ ಸಮಾರಾಧನೆ: 17.02.2025 ರಂದು ಬೆಳಿಗ್ಗೆ 10 ರಿಂದ 12 ಗಂಟೆಗೆ. ಮೃತರ ಸ್ವಗೃಹದಲ್ಲಿ ನಡೆಸಲಾಗುವುದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಕುಟುಂಬ ವರ್ಗದವರು ಮತ್ತು ಬಂಧು–ಮಿತ್ರರು. ಮೊ: 7975563864

₹17 ಸಾವಿರ ಕೋಟಿ ವಹಿವಾಟು ನಿರೀಕ್ಷೆ: ಮದರ್ ಡೇರಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮದರ್ ಡೇರಿಯ ವಹಿವಾಟು ₹17 ಸಾವಿರ ಕೋಟಿ ತಲುಪುವ ನಿರೀಕ್ಷೆಯಿದೆ. ಒಟ್ಟಾರೆ ಶೇ 15ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಡೇರಿಯ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಬಂದ್ಲೀಷ್ ತಿಳಿಸಿದ್ದಾರೆ.

ದೇಶದಾದ್ಯಂತ ಡೇರಿಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ. ಹಾಗಾಗಿ, ಮಾರಾಟ ಜಾಲವನ್ನು ಮತ್ತಷ್ಟು ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದ್ದಾರೆ.

2023–24ರಲ್ಲಿ ₹15,037 ಕೋಟಿ ವಹಿವಾಟು ನಡೆಸಿತ್ತು.

ಮದರ್ ಡೇರಿಯು ತಾಜಾ ಹಾಗೂ ಇತರೆ ಹೈನು ಉತ್ಪನ್ನಗಳ ಹೊರತಾಗಿ ಧಾರಾ ಬ್ರ್ಯಾಂಡ್‌ನಡಿ ಖಾದ್ಯ ತೈಲವನ್ನು ಮಾರಾಟ ಮಾಡುತ್ತದೆ. ಸಫಲ್ ಹೆಸರಿನಡಿ ತಾಜಾ ಹಣ್ಣುಗಳು ಮತ್ತು ತರಕಾರಿಗಳನ್ನು ಮಾರಾಟ ಮಾಡುತ್ತದೆ. ದೆಹಲಿಯಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಹಾಲು ಪೂರೈಸುತ್ತದೆ.

ಮಹಾರಾಷ್ಟ್ರದ ನಾಗಪುರದಲ್ಲಿ ಅತಿದೊಡ್ಡ ಹಾಲು ಸಂಸ್ಕರಣಾ ಘಟಕ ಸ್ಥಾಪಿಸುತ್ತಿದೆ. ಇದಕ್ಕಾಗಿ ₹500 ಕೋಟಿ ವಿನಿಯೋಗಿಸಿದೆ. ಮುಂದಿನ ವರ್ಷದಿಂದ ಈ ಘಟಕ ಕಾರ್ಯಾರಂಭ ಮಾಡಲಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹450-655
ದ್ವಿತಳಿ (ಬಿ.ವಿ)
₹405-825

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ಕರ್ನಾಟಕದಲ್ಲಿ 2,516 ಡ್ರೋನ್ ನೋಂದಣಿ

ನವದೆಹಲಿ (ಪಿಟಿಐ): ದೇಶದಲ್ಲಿ 29,500ಕ್ಕೂ ಹೆಚ್ಚು ಡ್ರೋನ್‌ಗಳು ನೋಂದಣಿಯಾಗಿವೆ. ಈ ಪೈಕಿ ದೆಹಲಿಯಲ್ಲಿ 4,882 ನೋಂದಣಿಯಾಗಿದ್ದರೆ, ಕರ್ನಾಟಕದಲ್ಲಿ 2,516 ಡ್ರೋನ್‌ಗಳನ್ನು ನೋಂದಾಯಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಕ್ರಮವಾಗಿ 4,588 ಮತ್ತು 4,132 ನೋಂದಣಿಯಾಗಿವೆ ಎಂದು ತಿಳಿಸಿದೆ.

ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ನಿಯಮಾವಳಿ ಅನ್ವಯ ಡ್ರೋನ್‌ಗಳ ನೋಂದಣಿ ಕಡ್ಡಾಯವಾಗಿದೆ.

ಹರಿಯಾಣ 3,689, ತೆಲಂಗಾಣ 1,928, ಗುಜರಾತ್ 1,338 ಮತ್ತು ಕೇರಳದಲ್ಲಿ 1,318 ಡ್ರೋನ್‌ಗಳು ನೋಂದಣಿಯಾಗಿವೆ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯವು ರಾಜ್ಯಸಭೆಗೆ ಇತ್ತೀಚೆಗೆ ಮಾಹಿತಿ ನೀಡಿತ್ತು.

ವಿವಿಧ ಕ್ಷೇತ್ರದಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ಹಲವು ಕ್ರಮ ಕೈಗೊಂಡಿದೆ. ಡ್ರೋನ್ ನೋಂದಣಿಗೆ ಕಳೆದ ವರ್ಷದ ಆಗಸ್ಟ್‌ನಲ್ಲಿ ನಿಯಮಾವಳಿಗಳಿಗೆ ತಿದ್ದುಪಡಿ ತರಲಾಗಿದೆ ಎಂದು ತಿಳಿಸಿತ್ತು.

ಡಿಜಿಸಿಎಯಿಂದ ಇಲ್ಲಿಯವರೆಗೆ ವಿವಿಧ ಮಾದರಿಯ ಡ್ರೋನ್‌ಗಳಿಗೆ 96 ನಮೂನೆಯ ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ. ಈ ಪೈಕಿ 65 ಮಾದರಿಗಳು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿವೆ. ಪ್ರತಿ ಡ್ರೋನ್‌ಗೆ ವಿಶೇಷ ಗುರುತಿನ ಸಂಖ್ಯೆ (ಯುಐಎನ್) ನೀಡಲಾಗುತ್ತದೆ.

ಡ್ರೋನ್ ಹಾರಾಟಕ್ಕೆ ಹಸಿರು, ಹಳದಿ ಮತ್ತು ಕೆಂಪು ವಲಯವನ್ನು ಗುರುತಿಸಲಾಗಿದೆ. ಹಸಿರು ವಲಯದಲ್ಲಿ ಹಾರಾಟಕ್ಕೆ ಪೂರ್ವಾನುಮತಿ ಬೇಕಿಲ್ಲ. ಹಳದಿ ವಲಯಕ್ಕೆ ವಾಯು ಸಂಚಾರ ನಿಯಂತ್ರಣ ಘಟಕ (ಎಟಿಸಿ) ಮತ್ತು ಕೆಂಪು ವಲಯದಲ್ಲಿನ ಹಾರಾಟಕ್ಕೆ ಕೇಂದ್ರ ಸರ್ಕಾರದ ಅನುಮತಿ ಕಡ್ಡಾಯವಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9606384001

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 01.03.2025 12ದಿನಗಳು ಅಖಂಡ ನೇಪಾಳ (ಮುಕ್ತಿನಾಥ) ಕಾಶಿ ಅಯೋಧ್ಯೆ.07.03.2025 7ದಿನಗಳು ಪುರಿ,ಕೋನಾರ್ಕ್ ಭುವನೇಶ್ವರ್, ಕಲ್ಕತ್ತಾ, ದೇವಘರ್.22.05.2025 7ದಿನಗಳು ಕಾಶಿ ಪ್ರಯಾಗ್ ಅಯೋಧ್ಯೆ,ಗಯಾ,ದೇವಘರ್ 16.05.2025 5ದಿನಗಳು ಶ್ರೀನಗರ,ಗುಲ್ಮಾರ್ಗ್,ಪಹಲ್‌ಗಾಂ.9743351212, 9206979202

ಚಾರ್`ಧಾಮ್`ಸ್ಪೆಷಲ್ ಯಾತ್ರೆ: 24.4.2025, 28.5.2025 ರಿಂದ,14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ್`ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್`ಟ್ರಾವೆಲ್ಸ್, ಬೆಂಗಳೂರು.9741024122, 9740311411.

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 27.04.2025 30.04.2025 29.05.2025 ರಿಂದ 13/16 ದಿನಗಳ ಯುರೋಪ್ ಪ್ರವಾಸ. 07.04.2025 20.04.2025 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 22.03.2025 10.04.2025 ರಿಂದ 5 ದಿನಗಳ ದುಬೈ,ಅಬುದಾಬಿ. 21.04.2025 ರಿಂದ 7 ದಿನಗಳ ಭೂತಾನ್. 04.04.2025 28.04.2025 ರಿಂದ 11 ದಿನಗಳ ಕಾಶಿ,ನೇಪಾಳ,ಅಯೋಧ್ಯ. 30.04.2025 16.05.2025 ರಿಂದ 15 ದಿನಗಳ ಚಾರ್‌ಧಾಮ್. 02.04.2025 15.04.2025 ರಿಂದ 12 ದಿನಗಳ ಕಾಶ್ಮೀರ್,ವೈಷ್ಣೋದೇವಿ. 15.04.2025 28.04.2025 ರಿಂದ 12 ದಿನಗಳ ಸಿಮ್ಲಾ,ಕುಲುಮನಾಲಿ ವೈಷ್ಣೋದೇವಿ. 04.04.2025 13.04.2025 ರಿಂದ 8 ದಿನಗಳ ಕಾಶಿ ಗಯಾ,ಪ್ರಯಾಗ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

★ಶ್ರೇಯಸ್ ಟೂರ್ಸ್★ 05.04.2025. 26.04.2025 12/15/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025. 25.04.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.9743351212, 9206979202

ಭವಿಷ್ಯ

Astrology

★ಓಂ ದುರ್ಗಾಆಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ ಭಾರತದ ಪ್ರಖ್ಯಾತ ವಂಶಪಾರಂಪರ್ಯ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ, ವಶೀಕರಣಗಳಿಗೆ,ಚಮತ್ಕಾರಿ ಪವಾಡ ಪರಿಹಾರಕ್ಕೆ ಸಂಪರ್ಕಿಸಿರಿ:ರಹೇಜಪಾರ್ಕ್ ಎದುರು,ಮಾಗಡಿರಸ್ತೆ, ಬೆಂಗಳೂರು.9845005009

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 2244/-* FOR 15 WORDS
*Conditions apply
www.dhclassifieds.com BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

₹99,299 ಕೋಟಿ ಬಂಡವಾಳ ವಾಪಸ್

ನವದೆಹಲಿ (ಪಿಟಿಐ): ಜಾಗತಿಕ ಅನಿಶ್ಚಿತತೆ ಹಾಗೂ ಅಮೆರಿಕದ ಸುಂಕ ನೀತಿಯಿಂದಾಗಿ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣ ತಹಬಂದಿಗೆ ಬಂದಿಲ್ಲ. ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜನವರಿಯಿಂದ ಇಲ್ಲಿಯವರೆಗೆ ₹99,299 ಕೋಟಿಯನ್ನು ಹಿಂಪಡೆದಿದ್ದಾರೆ.

ಜನವರಿಯಲ್ಲಿ ಒಟ್ಟು ₹78,027 ಕೋಟಿ ಬಂಡವಾಳ ವಾಪಸ್ ಪಡೆದಿದ್ದರು. ಫೆಬ್ರುವರಿಯ ಆರಂಭದಿಂದ 14ರ ವರೆಗೆ ₹21,272 ಕೋಟಿ ಹಿಂಪಡೆದಿದ್ದಾರೆ.

'ಸದ್ಯ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟದಲ್ಲಿ ತೊಡಗಿದ್ದಾರೆ. ಡಾಲರ್ ಸೂಚ್ಯಂಕ ಇಳಿಕೆಯಾದಾಗ ಮತ್ತೆ ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಪ್ರಮಾಣ ಹೆಚ್ಚಲಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

ಚಿನ್ನದ ಗಣಿ ಕುಸಿತ 42 ಮಂದಿ ಸಾವು

ಬಮಾಕೋ, ಮಾಲಿ (ಎಪಿ): ಪಶ್ಚಿಮ ಆಫ್ರಿಕಾದ ಮಾಲಿ ರಾಷ್ಟ್ರದ ಪೂರ್ವದಲ್ಲಿ ಚಿನ್ನದ ಗಣಿ ಕುಸಿದು 42 ಜನರು ಸಾವಿಗೀಡಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಆಫ್ರಿಕಾದ ಮೂರು ಪ್ರಮುಖ ಚಿನ್ನ ಉತ್ಪಾದಕ ಗಣಿಗಳಲ್ಲಿ ಒಂದಾದ ಬಿಲಾಲಿ ಕೋಟೋದಲ್ಲಿ ಶನಿವಾರ ತಡರಾತ್ರಿ ಭೂಕುಸಿತ ಸಂಭವಿಸಿತ್ತು. ಚೀನಾ ಮೂಲದ ವ್ಯಕ್ತಿ ಈ ಗಣಿಯನ್ನು ನಡೆಸುತ್ತಿದ್ದರು. ಪಶ್ಚಿಮ ಆಫ್ರಿಕಾದಲ್ಲಿ ಒಂದು ವರ್ಷದ ಅವಧಿಯಲ್ಲಿ ಸಂಭವಿಸಿದ ಎರಡನೇ ಅತೀ ದೊಡ್ಡ ಗಣಿ ಕುಸಿತದ ಅವಘಡ ಇದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೃತ್ಯ ಪ್ರದರ್ಶನ ನವದೆಹಲಿಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಬುಡಕಟ್ಟು ಹಬ್ಬವಾದ 'ಆದಿ ಮಹೋತ್ಸವ'ದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು –ಪಿಟಿಐ ಚಿತ್ರ

'ಹಿಂದೂ ಸಮಾಜ ಒಗ್ಗೂಡಬೇಕು'

ಬರ್ಧಮಾನ್ (ಪಶ್ಚಿಮ ಬಂಗಾಳ) ಪಿಟಿಐ: 'ಹಿಂದೂ ಸಮಾಜವು ದೇಶದ ಜವಾಬ್ದಾರಿಯುತ ಸಮುದಾಯ. ಈ ಸಮಾಜ ಏಕತೆಯನ್ನು ವೈವಿಧ್ಯತೆಯ ಮೂರ್ತರೂಪ ಎಂದು ಭಾವಿಸಿದೆ. ಹೀಗಾಗಿ ದೇಶದ ಹಿಂದೂಗಳನ್ನು ಒಗ್ಗೂಡಿಸುವುದು ಅತ್ಯಂತ ಮಹತ್ವದ್ದಾಗಿದೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜನರು ಪದೇಪದೇ ನನ್ನನ್ನು ನಾವೇಕೆ ಹಿಂದೂ ಸಮಾಜದ ಬಗ್ಗೆ ಹೆಚ್ಚು ಗಮನ ನೀಡಬೇಕು ಎಂದು ಕೇಳುತ್ತಾರೆ. ಅದಕ್ಕೆ ನನ್ನ ಉತ್ತರ ಇಷ್ಟೇ, ದೇಶದ ಅತ್ಯಂತ ಜವಾಬ್ದಾರಿಯುತ ಸಮಾಜವೆಂದರೆ ಹಿಂದೂ ಸಮಾಜ' ಎಂದು ಪ್ರತಿಪಾದಿಸಿದರು.

'ಭರತವರ್ಷ ಎನ್ನುವುದು ಕೇವಲ ಭೌಗೋಳಿಕ ಅಸ್ತಿತ್ವವಲ್ಲ. ಕಾಲ ಕಾಲಕ್ಕೆ ಅದರ ಗಾತ್ರ ವಿಸ್ತರಿಸುತ್ತಾ ಮತ್ತು ಕುಗ್ಗುತ್ತಾ ಹೋಗುತ್ತದೆ. ಇಲ್ಲಿ ಸಾಮರಸ್ಯದಿಂದ ಬದುಕಲು ಬಯಸದವರು ತಮ್ಮದೇ ದೇಶ ಕಟ್ಟಿಕೊಂಡರು' ಎಂದು ಹೇಳಿದರು.



ಮೋಹನ್ ಭಾಗವತ್

'ನಾವು ಏಕತೆಯಲ್ಲಿ ವೈವಿಧ್ಯತೆ ಎನ್ನುತ್ತೇವೆ. ಆದರೆ, ಹಿಂದೂ ಸಮಾಜವು ವೈವಿಧ್ಯತೆಯೇ ಏಕತೆ ಎಂದು ಭಾವಿಸಿದೆ'. ಒಳ್ಳೆಯ ಸಮಯದಲ್ಲೂ ಸವಾಲುಗಳು ಉದ್ಭವಿಸುತ್ತವೆ. ಅವುಗಳನ್ನು ಎದುರಿಸಲು ನಾವೆಷ್ಟು ತಯಾರಾಗಿದ್ದೇವೆ ಎನ್ನುವುದು ಮುಖ್ಯ' ಎಂದು ಭಾಗವತ್ ಹೇಳಿದರು.

ಬರ್ಧಮಾನ್‌ನ ಸಾಯಿ ಮೈದಾನದಲ್ಲಿ ಆರ್‌ಎಸ್‌ಎಸ್ ರ್‍ಯಾಲಿಗೆ ಪಶ್ಚಿಮ ಬಂಗಾಳ ಪೊಲೀಸರು ಅನುಮತಿ ನಿರಾಕರಿಸಿದ್ದರು. ನಂತರ ಕೋಲ್ಕತ್ತ ಹೈಕೋರ್ಟ್ ಅನುಮತಿ ನೀಡಿದ ಬಳಿಕ ರ್‍ಯಾಲಿ ಆಯೋಜಿಸಲಾಗಿತ್ತು.

'ನಂಬಿಕೆ ಬಲಗೊಳಿಸಿದ ಒಪ್ಪಂದ'

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ಒಪ್ಪಂದವು ಉಭಯ ದೇಶಗಳ ವ್ಯಾಪಾರ ವಹಿವಾಟಿನ ನಂಬಿಕೆಯನ್ನು ಮತ್ತಷ್ಟು ಬಲಗೊಳಿಸಿದೆ. ಇದು ದೇಶದ ಆರ್ಥಿಕತೆಯ ಸದೃಢತೆಗೆ ನೆರವಾಗಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಪೀಯೂಷ್ ಗೋಯಲ್

ಇತ್ತೀಚೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಹಲವು ಒಪ್ಪಂದಗಳಿಗೆ ಸಹಿ ಹಾಕಿದ್ದರು. ಎರಡೂ ದೇಶಗಳು 2030ರ ವೇಳೆಗೆ 500 ಬಿಲಿಯನ್ ಡಾಲರ್ ಮೌಲ್ಯದ (₹43.33 ಲಕ್ಷ ಕೋಟಿ) ವಹಿವಾಟು ನಡೆಸುವ ಗುರಿ ಹೊಂದಿವೆ.

2023ರಲ್ಲಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರದ ಮೌಲ್ಯವು ₹16.47 ಲಕ್ಷ ಕೋಟಿ ಆಗಿದೆ. ಭಾರತದ ಸರಕುಗಳ ರಫ್ತು ಮೌಲ್ಯ ₹7.26 ಲಕ್ಷ ಕೋಟಿ ಆಗಿದ್ದರೆ, ಆಮದು ಮೌಲ್ಯ ₹3.47 ಲಕ್ಷ ಕೋಟಿಯಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

'ಮತದಾನ ಉತ್ತೇಜನ' ನೆರವು ಸ್ಥಗಿತ

ಒಂದನೇ ಪುಟದಿಂದ...

'ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದ ಶಕ್ತಿಗಳು – ಅಂದರೆ ಅವಕಾಶ ಸಿಕ್ಕಾಗಲೆಲ್ಲ ಭಾರತವನ್ನು ದುರ್ಬಲಗೊಳಿಸಲು ಯತ್ನಿಸುವವರು – ದೇಶದ ಸಂಸ್ಥೆಗಳ ಒಳಗೆ ನುಸುಳುವುದಕ್ಕೆ ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟವು ವ್ಯವಸ್ಥಿತವಾಗಿ ಅವಕಾಶ ಮಾಡಿಕೊಟ್ಟಿತ್ತು ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ' ಎಂದು ಬಿಜೆಪಿಯ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಅಮೆರಿಕದಲ್ಲಿ ನೆಲೆಯಾಗಿರುವ ಕೋಟ್ಯಧೀಶ, ಹೂಡಿಕೆದಾರ ಜಾರ್ಜ್ ಸೊರೋಸ್ ಅವರ ನೆರಳು ನಮ್ಮ ಚುನಾವಣಾ ಪ್ರಕ್ರಿಯೆಯ ಮೇಲೆ ಕಾಣುತ್ತಿದೆ. ಸೊರೋಸ್ ಅವರು ಕಾಂಗ್ರೆಸ್ ಪಕ್ಷ ಮತ್ತು ಗಾಂಧಿ ಕುಟುಂಬದ ಜೊತೆ ನಂಟು ಹೊಂದಿರುವ ವ್ಯಕ್ತಿ' ಎಂದು ಆರೋಪಿಸಿದ್ದಾರೆ.

ಬಿಜೆಪಿಯ ಆರೋಪ ಏನು?

ಚುನಾವಣಾ ಆಯೋಗವು 2012ರಲ್ಲಿ 'ದಿ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಎಲೆಕ್ಟೋರಲ್ ಸಿಸ್ಟಮ್ಸ್' ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಂಡಿತ್ತು. ಈ ಸಂಸ್ಥೆಯು ಸೊರೋಸ್ ಅವರ 'ಓಪನ್ ಸೊಸೈಟಿ ಫೌಂಡೇಷನ್' ಜೊತೆ ನಂಟು ಹೊಂದಿದೆ, ಇದಕ್ಕೆ ಯುಎಸ್‌ಏಡ್ ಕಡೆಯಿಂದ ನೆರವು ಬರುತ್ತಿತ್ತು ಎಂದು ಮಾಳವೀಯ ಆರೋಪ ಮಾಡಿದ್ದಾರೆ.

ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಬಗ್ಗೆ, ಒಳಗೊಳ್ಳುವಿಕೆ ಬಗ್ಗೆ ಪ್ರಶ್ನಿಸುವವರಿಗೆ ಇಡೀ ಕೇಂದ್ರ ಚುನಾವಣಾ ಆಯೋಗವನ್ನು ವಿದೇಶಿ ಶಕ್ತಿಗಳಿಗೆ ಹಸ್ತಾಂತರಿಸುವಲ್ಲಿ ಯಾವ ಹಿಂಜರಿಕೆಯೂ ಇರಲಿಲ್ಲ ಎಂದು ಅವರು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮತದಾನದ ಪ್ರಮಾಣ ಏರಿಕೆಗಾಗಿ 21 ಮಿಲಿಯನ್ ಡಾಲರ್ ಮೊತ್ತವೇ? ಇದು ಭಾರತದ ಚುನಾವಣಾ ಪ್ರಕ್ರಿಯೆಯ ಮೇಲೆ ವಿದೇಶಿ ಪ್ರಭಾವ ಖಂಡಿತವಾಗಿಯೂ ಹೌದು. ಇದರಿಂದ ಯಾರಿಗೆ ಲಾಭ? ಖಂಡಿತವಾಗಿಯೂ ಆಡಳಿತಾರೂಢ ಪಕ್ಷಕ್ಕೆ ಅಲ್ಲ' ಎಂದು ಅವರು ಹೇಳಿದ್ದಾರೆ.

ಕುಂಭಮೇಳ ಅರ್ಥಹೀನ: ಲಾಲು

ಲಾಲು ಪ್ರಸಾದ್

ಪಟನಾ (ಪಿಟಿಐ): ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳವು 'ಅರ್ಥಹೀನ' ಆಚರಣೆ ಎಂದು ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಹೇಳಿದ್ದಾರೆ.

ನವದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಈ ಘಟನೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊಣೆ' ಎಂದು ದೂರಿದರು.

'ಕಾಲ್ತುಳಿತ ಸಂಭವಿಸಿರುವುದು ದುರದೃಷ್ಟಕರ. ಕೇಂದ್ರ ಸರ್ಕಾರವು ಮಹಾಕುಂಭ ಮೇಳಕ್ಕೆ ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳದ ಕಾರಣ ಈ ದುರಂತ ಸಂಭವಿಸಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಘಟನೆಯ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಲಾಲು ಅವರ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ಬಿಹಾರ ಘಟಕದ ವಕ್ತಾರ ಮನೋಜ್ ಶರ್ಮಾ, 'ತುಷ್ಟೀಕರಣದ ರಾಜಕೀಯಕ್ಕಾಗಿ ಲಾಲು ಅವರು ಈ ರೀತಿ ಹೇಳಿಕೆ ನೀಡಿದ್ದಾರೆ. ಇದು, ಹಿಂದೂ ಧರ್ಮದ ಬಗ್ಗೆ ಅವರಿಗಿರುವ ನಿಜವಾದ ಮನಸ್ಥಿತಿಯನ್ನು ಬಯಲು ಮಾಡಿದೆ' ಎಂದಿದ್ದಾರೆ.

'ಗಂಗಾ, ಯಮುನಾ ಉಳಿಸಿ'

ಪ್ರಜಾವಾಣಿ ವಾರ್ತೆ

ಪ್ರಯಾಗರಾಜ್: ಭಾರತದ ತಾಪಮಾನವು ಹೆಚ್ಚುತ್ತಿರುವ ಬೆನ್ನಲ್ಲೇ, ಧಾರ್ಮಿಕ ಮುಖಂಡರು ಮಹಾ ಕುಂಭದಲ್ಲಿ ಪರಿಸರ ಉಳಿಸುವ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮೊದಲ ಬಾರಿಗೆ ಕುಂಭಮೇಳದಲ್ಲಿ ಪರಿಸರ ಸಂರಕ್ಷಣೆ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಧಾರ್ಮಿಕ ಕ್ಷೇತ್ರಗಳಲ್ಲಿ ಹಸಿರು ಇಂಧನದ ಬಳಕೆ, ಸಮರ್ಪಕ ತ್ಯಾಜ್ಯ ನಿರ್ವಹಣೆ, ನದಿಗಳು ಹಾಗೂ ಅರಣ್ಯ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಭಾನುವಾರ ಇಲ್ಲಿ ನಡೆದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, 'ಜಾಗತಿಕ ತಾಪಮಾನ ಬದಲಾವಣೆಗೆ ಇಂಗಾಲದ ಡೈ ಆಕ್ಸೈಡ್ ಪ್ರಮುಖ ಕಾರಣ. ಇದರಿಂದ, ಭೂಮಿಯ ಜೀವಸೆಲೆಯಾದ ನದಿಗಳು ಬತ್ತಿ ಹೋಗುತ್ತಿವೆ, ಸ್ವಚ್ಛತೆಯಿಲ್ಲದೆ ನದಿಗಳನ್ನು ಮಲಿನಗೊಳಿಸುತ್ತಿದ್ದೇವೆ' ಎಂದು ತಿಳಿಸಿದರು.

'ಕಳೆದ 33 ದಿನಗಳಲ್ಲಿ ಲಕ್ಷಾಂತರ ಮಂದಿ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದ್ದಾರೆ. ಇದಕ್ಕಾಗಿ ಬಹಳ ತಿಂಗಳ ಹಿಂದೆಯೇ ತಯಾರಿ ನಡೆಸಲಾಗಿತ್ತು. ನದಿಯ ಕಾಲುವೆಗಳನ್ನು ಆಗಲಗೊಳಿಸಿ, ಸ್ವಚ್ಛಗೊಳಿಸಲಾಗಿತ್ತು. ಭಕ್ತಾದಿಗಳು ಭೇಟಿ ನೀಡುವ ವೇಳೆ ಗರಿಷ್ಠ ಪ್ರಮಾಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿತ್ತು. ಗಂಗಾ ನದಿಯಲ್ಲಿ 10ಸಾವಿರದಿಂದ 12 ಸಾವಿರ ಕ್ಯುಸೆಕ್ ನೀರು ಇರುವಂತೆ ನೋಡಿಕೊಳ್ಳಲಾಗಿದೆ' ಎಂದರು.

'ರಾಜ್ಯದ ಅರಣ್ಯ ಇಲಾಖೆಯು ಕೆಲವು ವರ್ಷಗಳಿಂದ ಈಚೆಗೆ 210 ಕೋಟಿಗೂ ಗಿಡಗಳನ್ನು ನೆಟ್ಟಿದೆ. ಈ ಮೂಲಕ ಮಹಾಕುಂಭವು ನಮ್ಮ ನಂಬಿಕೆಯನ್ನು ಉಳಿಸಿಕೊಳ್ಳುವ ಜೊತೆಗೆ ಪರಿಸರ ಸಂರಕ್ಷಣೆಯನ್ನು ಮಾಡುವುದಾಗಿದೆ' ಎಂದು ಯೋಗಿ ತಿಳಿಸಿದರು.

ದಟ್ಟಣೆ ನಿರ್ವಹಣೆಯಲ್ಲಿ ವೈಫಲ್ಯ, ತಪ್ಪು ಘೋಷಣೆಗಳತ್ತ ಬೊಟ್ಟು: ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆ

ಕಾಲ್ತುಳಿತ: ತರಹೇವಾರಿ ಕಾರಣ, ವಿಶ್ಲೇಷಣೆ

ಪ್ರಯಾಗರಾಜ್‌ಗೆ ಹೊರಟಿದ್ದ ರೈಲನ್ನು ನವದೆಹಲಿ ರೈಲು ನಿಲ್ದಾಣದಲ್ಲಿ ಜನರು ಹತ್ತಲು ಯತ್ನಿಸುತ್ತಿದ್ದುದು ಭಾನುವಾರ ಕಂಡುಬಂತು —ಪಿಟಿಐ ಚಿತ್ರ

ನವದೆಹಲಿ(ಪಿಟಿಐ): ನವದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತ ಕುರಿತಂತೆ ತರಹೇವಾರಿ ವಿಶ್ಲೇಷಣೆಗಳು, ದೂರುಗಳು ಕೇಳಿ ಬರುತ್ತಿವೆ. ರೈಲ್ವೆ ಇಲಾಖೆ, ಪೊಲೀಸರು, ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳ ನಾಯಕರು ಈ ದುರಂತ ಕುರಿತು ಪರಸ್ಪರ ವಿರುದ್ಧವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ.

18 ಜನರ ಸಾವಿಗೆ ಕಾರಣವಾದ ಈ ಅವಘಡ ಕುರಿತಂತೆ ಸಾಮಾಜಿಕ ಜಾಲ-ತಾಣಗಳಲ್ಲಿ ಕೂಡ ವ್ಯಾಪಕ ಪೋಸ್ಟ್‌ಗಳು ಹರಿದಾಡುತ್ತಿವೆ.

ಜನದಟ್ಟಣೆ ನಿರ್ವಹಣೆ ಮಾಡುವಲ್ಲಿ ವಿಫಲವಾಗಿರುವುದು, ಪ್ಲಾಟ್‌ಫಾರ್ಮ್ ಬದಲಿಸಿರುವುದು ಕಾಲ್ತುಳಿತಕ್ಕೆ ಕಾರಣ ಎಂದು ಹಲವರು ದೂರಿದ್ದಾರೆ. ಭಾರತದ ಜನಸಂಖ್ಯೆ, ಪ್ರವಾಸ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ ಮಾಡದಿರುವುದು, ರೈಲುಗಳ ಆಗಮನ-ನಿರ್ಗಮನ ಕುರಿತ ಘೋಷಣೆಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡಿರುವುದು ಅವಘಡಕ್ಕೆ ಕಾರಣ ಎಂಬ ವಾದಗಳೂ ಕೇಳಿಬರುತ್ತಿವೆ.

ಪ್ರಯಾಗರಾಜ್‌ಗೆ ಸಂಚರಿಸುವ ರೈಲು ನಿಲ್ಲುವ ಪ್ಲಾಟ್‌ಫಾರ್ಮ್ ಅನ್ನು ಹಠಾತ್ ಬದಲಿಸಿದ್ದು ಕಾಲ್ತುಳಿತಕ್ಕೆ ಕಾರಣ ಎಂಬ ದೂರು ವ್ಯಾಪಕವಾಗಿ ಕೇಳಿ ಬರುತ್ತಿದೆ. ಆದರೆ, ಕೆಲ ರೈಲ್ವೆ ಅಧಿಕಾರಿಗಳು ಈ ಮಾತನ್ನು ತಳ್ಳಿ ಹಾಕಿದ್ದಾರೆ.

ಪ್ಲಾಟ್‌ಫಾರ್ಮ್ ಬದಲು ಮಾಡಿರುವ ಕುರಿತು ಯಾವುದೇ ಘೋಷಣೆ ಮಾಡಿಲ್ಲ ಎಂದೂ ಅಧಿಕಾರಿಗಳು ಪ್ರತಿಪಾದಿಸುತ್ತಿದ್ದಾರೆ.

'ಪ್ರಯಾಗರಾಜ್‌ಗೆ ಸ್ಪೆಷಲ್ ರೈಲು ಸಂಚಾರ ಕುರಿತು ಮಾಡಿದ್ದ ಘೋಷಣೆಯನ್ನು ಜನರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಪ್ರಯಾಗ್‌ರಾಜ್‌ಗೆ ನಿತ್ಯ ಸಂಚರಿಸುವ ಎಕ್ಸ್‌ಪ್ರೆಸ್ ರೈಲಿನ ಪ್ಲಾಟ್‌ಫಾರ್ಮ್ ಬದಲಿಸಿರುವ ಕುರಿತ ಘೋಷಣೆ ಎಂಬುದಾಗಿ ಪ್ರಯಾಣಿಕರು ತಿಳಿದುಕೊಂಡಿದ್ದರಿಂದ ನೂಕುನುಗ್ಗಲು, ಕಾಲ್ತುಳಿತ ಉಂಟಾಯಿತು' ಎಂಬ ವಾದವನ್ನು ಅಧಿಕಾರಿಗಳು ಮುಂದಿಟ್ಟಿದ್ದಾರೆ.

ಆಡಳಿತಾರೂಢ ಪಕ್ಷಗಳ ಸಿದ್ಧಾಂತಗಳ ಪರ ಇರುವವರು ಹಾಗೂ ವಿರುದ್ಧವಾಗಿರುವವರು ಕೂಡ ತಮ್ಮದೇ ವಾದ ಹಾಗೂ ಸಲಹೆಗಳನ್ನು ಮುಂದಿಟ್ಟಿದ್ದಾರೆ.

ಜನರು ನೀಡಿರುವ ಕಾರಣ/ಸಲಹೆ/ದೂರುಗಳು

- ಪ್ರಯಾಣದ ಟಿಕೆಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸದಿರುವುದು, ಕಡಿಮೆ ಲಗೇಜು ಒಯ್ಯದಿರುವುದು ಹಾಗೂ ಸರದಿಯಲ್ಲಿ ನಿಲ್ಲದಿರುವುದು ಅವಘಡಗಳಿಗೆ ಕಾರಣ
- ಓಲೈಕೆ ರಾಜಕಾರಣ ನಿಲ್ಲಿಸಬೇಕು. ಸಂಸತ್‌ನಲ್ಲಿ ಕೂಡಲೇ ಜನಸಂಖ್ಯಾ ನಿಯಂತ್ರಣ ಮಸೂದೆಯನ್ನು ಮಂಡಿಸಬೇಕು. ಜನಸಂಖ್ಯೆ ನಿಯಂತ್ರಣ ಮಾಡದಿದ್ದರೆ, ಕಾಲ್ತುಳಿತ, ಸಂಚಾರ ಮತ್ತು ಜನರ ದಟ್ಟಣೆ ನಿರ್ವಹಣೆ ಸಾಧ್ಯವಿಲ್ಲ
- ಗ್ರಾಮೀಣ ಪ್ರದೇಶ ಜನರು ಬಹಳ ಸುಲಭವಾಗಿ ವದಂತಿಗಳನ್ನು ನಂಬುತ್ತಾರೆ. ಇದರಿಂದ ಕಾಲ್ತುಳಿತ ಉಂಟಾಗುತ್ತದೆ. ಸರ್ಕಾರವನ್ನು ದೂರುವ ಬದಲು ಗ್ರಾಮೀಣ ಭಾಗದ ಜನರಿಗೆ ಮೂಲಭೂತ ಶಿಷ್ಟಾಚಾರಗಳನ್ನು ಕಲಿಸುವ ಅಗತ್ಯ ಇದೆ.
- ಒಂದು ಗಂಟೆಯಲ್ಲಿ ಸಾವಿರಕ್ಕೂ ಅಧಿಕ ಕಾಯ್ದಿರಿಸದ ಟಿಕೆಟ್‌ಗಳನ್ನು ನೀಡಲಾಗಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಎಚ್ಚರಿಕೆ ತೆಗೆದುಕೊಂಡಿಲ್ಲ. ಪ್ರಯಾಣಿಕರಿಗೆ ಸರಿಯಾದ ಮಾಹಿತಿ ನೀಡುವ ಪ್ರಯತ್ನಗಳನ್ನೇ ಮಾಡಿಲ್ಲ

ಕಿರಿದಾದ ದಾರಿ, ಮೇಲ್ಸೇತುವೆ..

ನವದೆಹಲಿ ರೈಲು ನಿಲ್ದಾಣದಲ್ಲಿ 16ನೇ ಪ್ಲಾಟ್‌ಫಾರ್ಮ್‌ಗೆ ತೆರ-ಳುವುದಕ್ಕಾಗಿ ನಿರ್ಮಿಸಿರುವ ಪಾದಚಾರಿ ಮೇಲ್ಸುತುವೆ 25 ಅಡಿ ಅಗಲ ಇದ್ದು, ಇದನ್ನು ತಲುಪಲು 42 ಮೆಟ್ಟಿಲುಗಳಿವೆ.

ಸಾವಿರಾರು ಜನರು ಈ ಮೆಟ್ಟಿಲುಗಳ ಮೂಲಕ ಸೇತುವೆ ಮೇಲೆ ನುಗ್ಗಿದ್ದರಿಂದ ವಿಪರೀತ ದಟ್ಟಣೆ ಉಂಟಾಗಿದೆ. ಇಳಿಯುವ ಧಾವಂತದಲ್ಲಿದ್ದವರು, ಮೆಟ್ಟಿಲುಗಳನ್ನು ಏರಲು ಮುಂದಾದವರಿಗೆ ಅಡ್ಡಿಯಾಗಿದ್ದಾರೆ. ಇದರಿಂದ ನೂಕುನುಗ್ಗಲು ಉಂಟಾಗಿದೆ ಎಂದು ಕೆಲ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

'ಭಾರಿ ಸಂಖ್ಯೆಯಲ್ಲಿ ಜನರು ಇದ್ದ ಗುಂಪಿನ ಒತ್ತಡವನ್ನು ಸಹಿಸಲು ಸಾಧ್ಯವಿರಲಿಲ್ಲ. ಯಾವ ಕಡೆಯೂ ಚಲಿಸಲಾಗದೇ ಜನರು ಸಿಲುಕಿಕೊಂಡರು. ಕೆಲವರು ನಿಯಂತ್ರಣ ಕಳೆದುಕೊಂಡು ಬಿದ್ದರು, ಹೀಗೆ ಬಿದ್ದವರನ್ನು ಗುಂಪಿನಲ್ಲಿದ್ದವರು ಎಳೆದುಕೊಂಡೇ ಹೋದರು. ಹೀಗಾಗಿ ಹಲವರು ಉಸಿರುಗಟ್ಟಿ ಮೃತಪಟ್ಟರು' ಎಂದು ಪ್ರತ್ಯಕ್ಷದರ್ಶಿ ಗ್ಯಾನೇಂದ್ರ ಸಿಂಗ್ ಹೇಳಿದರು. ಗುಂಪಿನಲ್ಲಿ ಹಿಂದೆ ಇದ್ದವರು ನೂಕುತ್ತಿದ್ದರಿಂದ, ವಿಶೇಷವಾಗಿ ಮಕ್ಕಳು ಹಾಗೂ ಮಹಿಳೆಯರು ಹೆಚ್ಚು ಸಂಕಷ್ಟ ಅನುಭವಿಸಿದರು.

'ನನ್ನ ಮೇಲೆ ಜನರು ಬೀಳುತ್ತಲೇ ಇದ್ದುದರಿಂದ ನನಗೆ ಬಿದ್ದ ಜಾಗದಿಂದ ಕದಲಲು ಆಗಲೇ ಇಲ್ಲ' ಎಂದು ಈ ಕಾಲ್ತು-ಳಿತದಲ್ಲಿ ಬದುಕುಳಿದ ವ್ಯಕ್ತಿಯೊಬ್ಬರು, ಆ ಭೀಕರ ಕ್ಷಣಗಳನ್ನು ನೆನೆದು ಕಂಪಿಸುತ್ತಲೇ ಹೇಳಿದರು.

ವಿಪಕ್ಷಗಳ ಟೀಕೆ

ನವದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಟೀಕಿಸಿದೆ.

'ನಿರ್ವಹಣೆಯಲ್ಲಿ ವೈಫಲ್ಯದಿಂದಾಗಿ ಈ ಅವಘಡ ಸಂಭವಿಸಿದ್ದು, ನೈತಿಕ ಹೊಣೆ ಹೊತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜೀನಾಮೆ ನೀಡಬೇಕು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ಆಮ್ ಆದ್ಮಿ ಪಕ್ಷದ ನಾಯಕ ಮನೀಷ್ ಸಿಸೋಡಿಯಾ ಅವರು ಕೇಂದ್ರ ಸರ್ಕಾರವನ್ನು 'ಆಪದಾ ಸರ್ಕಾರ'(ವಿಪತ್ತಿನ ಸರ್ಕಾರ) ಎಂದು ಕರೆದಿದ್ದಾರೆ.

'ಜನರ ಸುರಕ್ಷತೆ ವಿಚಾರ ಬಂದಾಗ ಹೆಚ್ಚು ಕಾಳಜಿ ವಹಿಸಬೇಕು ಹಾಗೂ ನಿರ್ವಹಣೆಯ ಮಹತ್ವ ಅರಿಯಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಮಹಾ ಕುಂಭ ಮೇಳಕ್ಕೆ ಸಂಬಂಧಿಸಿ ಒಟ್ಟಾರೆ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ತೋರಿದೆ' ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಟೀಕಿಸಿದ್ದಾರೆ.

'ಗೊಂದಲದಿಂದಲೇ ಅವಘಡ'

ಒಂದನೇ ಪುಟದಿಂದ...

'ಪ್ರಯಾಗರಾಜ್ ಎಕ್ಸ್‌ಪ್ರೆಸ್' ರೈಲು ಪ್ಲಾಟ್‌ಫಾರ್ಮ್ 14ರಲ್ಲಿತ್ತು. ಮತ್ತೊಂದೆಡೆ, ಪ್ಲಾಟ್‌ಫಾರ್ಮ್ 16ಕ್ಕೆ 'ಪ್ರಯಾಗರಾಜ್ ಸ್ಪೆಷಲ್' ರೈಲು ಬರುವ ಕುರಿತು ನಿಲ್ದಾಣದ ಸಿಬ್ಬಂದಿ ಘೋಷಿಸಿದ್ದಾರೆ. ಪ್ಲಾಟ್‌ಫಾರ್ಮ್ 14 ತಲುಪುತ್ತಿದ್ದ ಜನರು, ತಾವು ಪ್ರಯಾಣಿಸುವ ರೈಲು ಪ್ಲಾಟ್‌ಫಾರ್ಮ್ 16ಕ್ಕೆ ಬರಲಿದೆ ಎಂದು ಭಾವಿಸಿದರು. ತಾವು ಪ್ರಯಾಣಿಸಬೇಕಿದ್ದ ರೈಲು ತಪ್ಪುತ್ತದೆ ಎಂಬ ಆತಂಕವೂ ಅವರಲ್ಲಿ ಮೂಡಿತು. ಆಗ, ಜನರು 16ನೇ ಪ್ಲಾಟ್‌ಫಾರ್ಮ್‌ನತ್ತ ಓಡಲು ಶುರು ಮಾಡಿದಾಗ ಕಾಲ್ತುಳಿತ ಉಂಟಾಯಿತು' ಎಂದೂ ಮೂಲಗಳು ಹೇಳಿವೆ.

'ರೈಲುಗಳ ಹೆಸರು ಕುರಿತು ಉಂಟಾದ ಗೊಂದಲವೇ ಈ ದುರಂತಕ್ಕೆ ಕಾರಣ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಮತ್ತೊಂದೆಡೆ, 'ಪ್ರಯಾಗರಾಜ್‌ಗೆ ಇತರ ನಾಲ್ಕು ರೈಲುಗಳು ಸಂಚರಿಸಲಿದ್ದವು. ಈ ಪೈಕಿ, ಮೂರು ರೈಲುಗಳು ನಿಲ್ದಾಣಕ್ಕೆ ಬರುವುದು ತಡವಾಗಿತ್ತು. ಹೀಗಾಗಿ, ನಿಲ್ದಾಣದಲ್ಲಿ ಅನಿರೀಕ್ಷಿತ ಜನದಟ್ಟಣೆ ಕಂಡುಬಂತು' ಎಂದು ಪೊಲೀಸರು ಹೇಳಿದ್ದಾರೆ.

ಅವಘಡ ಕುರಿತಂತೆ, ಉತ್ತರ ರೈಲ್ವೆ ಅಧಿಕಾರಿಗಳು ಹೇಳುವುದೇ ಬೇರೆ.

'ಪಟ್ನಾಕ್ಕೆ ಸಂಚರಿಸುವ ಮಗಧ ಎಕ್ಸ್‌ಪ್ರೆಸ್ ಪ್ಲಾಟ್‌ಫಾರ್ಮ್ 14ರಲ್ಲಿ ನಿಂತಿತ್ತು. ನವದೆಹಲಿ-ಜಮ್ಮು ಉತ್ತರ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ಪ್ಲಾಟ್‌ಫಾರ್ಮ್ 15ರಲ್ಲಿತ್ತು' ಎಂದು ಉತ್ತರ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ (ಸಿಪಿಆರ್‌ಒ) ಹಿಮಾಂಶು ಉಪಾಧ್ಯಾಯ ಹೇಳಿದ್ದಾರೆ.

'ಪಾದಚಾರಿ ಮೇಲ್ಸೇತುವೆ ಮೂಲಕ ಸಾಗುತ್ತಿದ್ದವರ ಪೈಕಿ ಬಹಳಷ್ಟು ಜನರು ಪ್ಲಾಟ್‌ಫಾರ್ಮ್ 14 ಮತ್ತು 15ರತ್ತ ಇಳಿಯುತ್ತಿದ್ದರು. ಈ ವೇಳೆ, ಕಾಲು ಜಾರಿದ್ದರಿಂದ ಇತರರ ಮೇಲೆ ಕೆಲವರು ಬಿದ್ದಾಗ, ನೂಕುನುಗ್ಗಲು ಉಂಟಾಗಿ ಕಾಲ್ತುಳಿತ ಸಂಭವಿಸಿತು' ಎಂದು ಸಿಪಿಆರ್‌ಒ ಉಪಾಧ್ಯಾಯ ಹೇಳಿದ್ದಾರೆ.

1,500 ಟಿಕೆಟ್ ಮಾರಾಟ: ನಿಲ್ದಾಣದಿಂದ ಕೆಲವು ರೈಲುಗಳು ತಡವಾಗಿ ಹೊರಟವು. ಜೊತೆಗೆ, ಪ್ರತಿ ಗಂಟೆಗೆ 1,500 ಜನರಲ್ ಟಿಕೆಟ್‌ಗಳನ್ನು ಮಾರಾಟ ಮಾಡಲಾಗಿದೆ. ನಿಲ್ದಾಣದಲ್ಲಿ ಗೊಂದಲದ ಸನ್ನಿವೇಶ ಸೃಷ್ಟಿಗೆ ಇದು ಕಾರಣವಾಯಿತು ಎಂದು ಇತರ ಮೂಲಗಳು ಹೇಳುತ್ತವೆ.

ಪರಿಹಾರ: ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 10 ಲಕ್ಷ, ಗಂಭೀರ ಗಾಯಗೊಂಡವರಿಗೆ ತಲಾ ₹2.5 ಲಕ್ಷ, ಸಣ್ಣಪುಟ್ಟ ಗಾಯಗಳಾದವರಿಗೆ ₹1 ಲಕ್ಷ ಪರಿಹಾರ ನೀಡುವುದಾಗಿ ರೈಲ್ವೆ ಇಲಾಖೆಯು ಘೋಷಿಸಿದೆ.

ಹಸ್ತಾಂತರ: ಮೃತದೇಹಗಳನ್ನು ಅವರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ ಎಂದು ಲೋಕನಾಯಕ ಜಯಪ್ರಕಾಶ್ ನಾರಾಯಣ ಆಸ್ಪತ್ರೆ ಮೂಲಗಳು ಹೇಳಿವೆ. ಬಹುತೇಕ ಕುಟುಂಬಗಳು ತಮ್ಮವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆ ಇಲ್ಲದೆಯೇ ತೆಗೆದುಕೊಂಡಿವೆ ಎಂದೂ ಮೂಲಗಳು ಹೇಳಿವೆ. ಇದನ್ನು ಅಧಿಕಾರಿಗಳು ದೃಢಪಡಿಸಿಲ್ಲ.

ತನಿಖೆಗೆ ಸಮಿತಿ ರಚನೆ

ಕಾಲ್ತುಳಿತ ಕುರಿತು ತನಿಖೆ ನಡೆಸುವುದಕ್ಕಾಗಿ ಇಬ್ಬರು ಉನ್ನತ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿದ್ದಾಗಿ ರೈಲ್ವೆ ಇಲಾಖೆ ತಿಳಿಸಿದೆ.

ಉತ್ತರ ರೈಲ್ವೆಯ ಪ್ರಧಾನ ಮುಖ್ಯ ಕಮರ್ಷಿಯಲ್ ಮ್ಯಾನೇಜರ್ ನರಸಿಂಗ ದೇವ್ ಹಾಗೂ ಪ್ರಧಾನ ಮುಖ್ಯ ಭದ್ರತಾ ಆಯುಕ್ತ ಪಂಕಜ್ ಗಂಗ್ವಾರ್ ಈ ಸಮಿತಿ ಸದಸ್ಯರು ಎಂದು ಇಲಾಖೆ ತಿಳಿಸಿದೆ. ತನಿಖೆ ಆರಂಭಿಸಿರುವ ಸಮಿತಿಯು, ನವದೆಹಲಿ ರೈಲು ನಿಲ್ದಾಣಕ್ಕೆ ಸಂಬಂಧಿಸಿದ ಎಲ್ಲ ವಿಡಿಯೊ ದೃಶ್ಯಾವಳಿಗಳನ್ನು ಭದ್ರವಾಗಿ ಕಾದಿಡುವಂತೆ ಆದೇಶಿಸಿದೆ.

ದಟ್ಟಣೆ: ಕಟ್ಟೆಚ್ಚರ, ನಿರ್ವಹಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾಕುಂಭಮೇಳಕ್ಕಾಗಿ ಪ್ರಯಾಗರಾಜ್‌ಗೆ ದೊಡ್ಡ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಭೇಟಿ ನೀಡಲಿರುವ ನಿರೀಕ್ಷೆಯಲ್ಲಿ ಪ್ರಮುಖ ರೈಲು ನಿಲ್ದಾಣ-ಗಳಲ್ಲಿ ದಟ್ಟಣೆ ನಿರ್ವಹಿಸಲು ಕಟ್ಟೆಚ್ಚರ ವಹಿಸಬೇಕು ಎಂದು ರೈಲ್ವೆ ಇಲಾಖೆಯು ಸೂಚಿಸಿದೆ.

ಮಹಾಕುಂಭಮೇಳವು ನಿಗದಿಯಂತೆ ಶಿವರಾತ್ರಿ ಹಬ್ಬವಾದ ಫೆಬ್ರುವರಿ 26ರಂದು ಅಂತ್ಯವಾಗಲಿದೆ. ಬಾಕಿ ಉಳಿದಿರುವ ದಿನಗಳಲ್ಲಿ ಪ್ರಯಾಗರಾಜ್‌ಗೆ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಬರಬಹುದು ಎಂದು ಉತ್ತರ ಪ್ರದೇಶ ಸರ್ಕಾರವು ಅಂದಾಜು ಮಾಡಿದೆ.

ಈ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಯು ಕಟ್ಟೆಚ್ಚರ ವಹಿಸಿದೆ. ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ ರಾಜ್ಯಗಳ ನಿಲ್ದಾಣಗಳು ಸೇರಿ ಪ್ರಮುಖ ನಿಲ್ದಾಣಗಳಲ್ಲಿ ದಟ್ಟಣೆ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು ಕ್ರಮವಹಿಸಬೇಕು ಎಂದು ನಿರ್ದೇಶನ ನೀಡಿದೆ.

ದೆಹಲಿ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ನಡೆದ ಕಾಲ್ತುಳಿತದಲ್ಲಿ 18 ಜನರು ಮೃತಪಟ್ಟ ಹಿಂದೆಯೇ ಈ ನಿರ್ದೇಶನ ನೀಡಲಾಗಿದೆ.

ಉತ್ತರ ಪ್ರದೇಶದ ಅಧಿಕಾರಿಗಳ ಪ್ರಕಾರ, ಈವರೆಗೆ 50ಕೋಟಿಗೂ ಅಧಿಕ ಭಕ್ತರು ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ.

ತಪ್ಪದ ನೂಕುನುಗ್ಗಲು: ದೆಹಲಿ ನಿಲ್ದಾಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದ ನಂತರವೂ ಉತ್ತರ ಪ್ರದೇಶ ಮತ್ತು ಬಿಹಾರದ ವಿವಿಧ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಇತ್ತು.

ನವದೆಹಲಿ ನಿಲ್ದಾಣದಲ್ಲಿ ಪ್ಲಾಟ್‌ಫಾರಂ 16ರಿಂದಲೇ ಪ್ರಯಾಗರಾಜ್‌ಗೆ ತೆರಳುವ ರೈಲುಗಳು ನಿರ್ಗಮಿಸಲಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಯಾಣಿಕರು ಅಜ್ಮೇರಿ ಗೇಟ್ ಮೂಲಕ ಪ್ರವೇಶಿಸಬೇಕು. ಇತರೆ ಪ್ಲಾಟ್ ಫಾರ್ಮ್‌ಗಳಿಂದ ನಿಗದಿಯಂತೆ ರೈಲು ಸಂಚಾರ ಇರಲಿದೆ ಎಂದಿದ್ದಾರೆ.

ಶಾಲೆಗಳಿಗೆ ರಜೆ ಘೋಷಣೆ

ಲಖನೌ: ಮಹಾಕುಂಭಮೇಳಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದು, ಪ್ರಯಾಗರಾಜ್‌ನಲ್ಲಿ ಸಂಚಾರ ದಟ್ಟಣೆ ಮೂಡಿದೆ. ಜಿಲ್ಲಾಡಳಿತವು ಮುಂಜಾಗ್ರತೆಯಾಗಿ ಎಲ್ಲ ಶಾಲೆಗಳಿಗೆ ರಜೆಯನ್ನು ಘೋಷಿಸಿದೆ.

ದಟ್ಟಣೆ ನಿರ್ವಹಣೆಗೆ ಯೋಧರ ನೆರವು ಪಡೆದಿದ್ದು, ನಗರಕ್ಕೆ ವಾಹನಗಳ ಪ್ರವೇಶ ನಿರ್ಬಂಧಿಸಿದ್ದು, ಭಕ್ತರು ಕಿಲೋ ಮೀಟರ್‌ಗಟ್ಟಲೆ ನಡೆಯಬೇಕಾದ ಸ್ಥಿತಿ ಇದೆ. ಅಧಿಕಾರಿಗಳ ಪ್ರಕಾರ, ಮಧ್ಯಪ್ರದೇಶ, ದೆಹಲಿ, ಹರಿಯಾಣ ಹಾಗೂ ವಿವಿಧೆಡೆಯಿಂದ ದೊಡ್ಡ ಸಂಖ್ಯೆಯಲ್ಲಿ ಭಕ್ತರು ವಾಹನಗಳಲ್ಲಿಯೇ ಬರುತ್ತಿದ್ದಾರೆ.

3 ಕಿಲೋಮೀಟರ್ ಕ್ರಮಿಸಲು 4 ಗಂಟೆ ಬೇಕಾಗಿದೆ ಎಂದು ಭಕ್ತರೊಬ್ಬರ ಹೇಳಿದರು. ಕಾಲ್ತುಳಿತ ತಡೆಯುವ ಕ್ರಮವಾಗಿ ಸಂಗಮ ಬಳಿ ಪೊಲೀಸರನ್ನು ನಿಯೋಜಿಸಲಾಗಿದೆ.

ಭಕ್ತರು ಅಯೋಧ್ಯೆ, ವಾರಾಣಸಿಗೂ ಭೇಟಿ ನೀಡುತ್ತಿದ್ದಾರೆ. ಅಯೋಧ್ಯೆಯಲ್ಲಿಯೂ ಪಟ್ಟಣದ ಹೊರಗೆ ವಾಹನಗಳಿಗೆ ನಿರ್ಬಂಧ ವಿಧಿಸಿದೆ. ಭಕ್ತರು ನಡೆದೇ ಬರಬೇಕಿದೆ.

ಪ್ರತಿಭಟನೆ

ಅಕ್ರಮ ವಲಸಿಗರು ಎಂಬ ಕಾರಣಕ್ಕೆ ಅಮೆರಿಕವು ಭಾರತೀಯರನ್ನು ಗಡೀಪಾರು ಮಾಡಿರುವುದನ್ನು ಪ್ರತಿಭಟಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅಮೆರಿಕ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಅಮೃತಸರದಲ್ಲಿ ಭಾನುವಾರ ಘೋಷಣೆಗಳನ್ನು ಕೂಗಿದರು -ಎಎಫ್‌ಪಿ ಚಿತ್ರ

ಕಾಲಿನಲ್ಲಿ ಸರಪಳಿ, ಕೈಯಲ್ಲಿ ಕೋಳ

ಒಂದನೇ ಪುಟದಿಂದ...

ಈ ಇಬ್ಬರನ್ನೂ ಪೊಲೀಸರು ಬಂಧಿಸಿದ್ದಾರೆ. ಪಟಿಯಾಲ ಜಿಲ್ಲೆಯ ರಾಜಪುರದ ಸಂದೀಪ್ ಸಿಂಗ್ ಅಲಿಯಾಸ್ ಸನ್ನಿ ಹಾಗೂ ಪ್ರದೀಪ್ ಸಿಂಗ್ ಬಂಧಿತರು.

ಖಂಡನೆ: ಅಮೆರಿಕದಿಂದ ಗಡೀಪಾರು ಮಾಡಲಾದ ವಲಸಿಗರ ತಂಡದಲ್ಲಿದ್ದ ಸಿಖ್ಖರಿಗೆ ರುಮಾಲು (ಟರ್ಬನ್) ಧರಿಸಲು ಅವಕಾಶ ನೀಡದ ಅಲ್ಲಿನ ಅಧಿಕಾರಿಗಳ ನಡೆಯನ್ನು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಖಂಡಿಸಿದೆ. ಅಮೃತಸರಕ್ಕೆ ಬಂದಿಳಿದ ತಂಡದಲ್ಲಿದ್ದ ಕೆಲ ಸಿಖ್ಖರು ಟರ್ಬನ್ ಧರಿಸಿಲ್ಲದ ವಿಡಿಯೊ ಜಾಲತಾಣಗಳ ಮೂಲಕ ಹಂಚಿಕೆಯಾಗಿತ್ತು.

ಶನಿವಾರ ಬಂದ 116 ವಲಸಿಗರಲ್ಲಿ ಪಂಜಾಬ್‌ನ 65, ಹರಿಯಾಣದ 33 ಮತ್ತು ಗುಜರಾತ್‌ನ ಎಂಟು ಮಂದಿ ಇದ್ದರು. ಭಾನುವಾರದ ವಿಮಾನದಲ್ಲಿದ್ದ 112 ಮಂದಿಯಲ್ಲಿ 44 ಮಂದಿ ಹರಿಯಾಣದವರು, 33 ಮಂದಿ ಗುಜರಾತಿನವರು, 31 ಮಂದಿ ಪಂಜಾಬ್‌ನವರು ಎಂದು ಮೂಲಗಳು ಹೇಳಿವೆ. ಉತ್ತರ ಪ್ರದೇಶದ ಇಬ್ಬರು, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದ ತಲಾ ಒಬ್ಬರು ಇದರಲ್ಲಿದ್ದರು.

ವಲಸಿಗರಿಗೆ ಲಂಗರ್ ಮತ್ತು ಬಸ್ ಸೇವೆಯನ್ನು ಒದಗಿಸಲು ನಿಯೋಜಿಸಲಾಗಿದ್ದ ಎಸ್‌ಜಿಪಿಸಿ ಅಧಿಕಾರಿಗಳು, ಹೀಗೆ ಮರಳಿದ್ದ ತಂಡದಲ್ಲಿದ್ದ ಸಿಖ್ಖರಿಗೆ ದಸ್ತರ್ (ಟರ್ಬನ್) ಅನ್ನೂ ನೀಡಿದ್ದರು.

'ಅಮೆರಿಕದಂತೆ ಈ ರೀತಿ ಸಾಮೂಹಿಕವಾಗಿ ವಾಪಸ್ ಕಳುಹಿಸುತ್ತಿರುವುದು ನಮ್ಮ ಕಣ್ತೆರೆಸಬೇಕು. ಯುವಕರು ವಿದೇಶಗಳಿಗೆ ಅಕ್ರಮವಾಗಿ ತೆರಳುವ ಆಲೋಚನೆಯನ್ನು ಬಿಡಬೇಕು. ಕಷ್ಟಪಟ್ಟು ದುಡಿದು ರಾಜ್ಯದ ಅಭಿವೃದ್ಧಿಗೆ ನೆರವಾಗಬೇಕು' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ.

'ನಮ್ಮ ಕನಸು ನುಚ್ಚು ನೂರಾಯ್ತು...'

ಒಂದನೇ ಪುಟದಿಂದ...

'ಕಳೆದ ವರ್ಷ ಡಿ.17ರಂದು ಅಮೆರಿಕಕ್ಕೆ ತೆರಳಿದ್ದೆ. ಜನವರಿ 27ರಂದು ಗಡಿ ದಾಟುವಾಗ ಅಮೆರಿಕ ಅಧಿಕಾರಿಗಳು ನನ್ನನ್ನು ಬಂಧಿಸಿದರು. ನಂತರ 18 ದಿನ ನಮ್ಮನ್ನು ಬಂಧನ ಕೇಂದ್ರದಲ್ಲಿ ಇರಿಸಲಾಗಿತ್ತು. ನಮ್ಮ ಮೊಬೈಲ್ ಫೋನ್‌ಗಳನ್ನು ಸಹ ಕಸಿದುಕೊಳ್ಳಲಾಗಿತ್ತು' ಎಂದು ಪಂಜಾಬ್‌ನ ಫಿರೋಜ್‌ಪುರ ಜಿಲ್ಲೆಯ ಚಾಂದೀವಾಲಾ ಗ್ರಾಮದ ಸೌರವ್ (20) ಹೇಳುತ್ತಾರೆ.

ಕೈಕೋಳ ಸಂಕೋಲೆಗೆ ಆಕ್ರೋಶ

ಫೆಬ್ರುವರಿ 5ರಂದು ಮೊದಲ ತಂಡದಲ್ಲಿ ಬಂದಿಳಿದಿದ್ದವರಿಗೂ ಪ್ರಯಾಣದ ವೇಳೆ ಕಾಲುಗಳಿಗೆ ಸರಪಳಿ ಹಾಗೂ ಕೈಗಳಿಗೆ ಕೋಳಗಳನ್ನು ಹಾಕಲಾಗಿತ್ತು. ಈ ವಿಷಯವು ಬಜೆಟ್ ಅಧಿವೇಶನದ ವೇಳೆ ಉಭಯ ಸದನಗಳಲ್ಲಿ ಪ್ರತಿಧ್ವನಿಸಿತ್ತಲ್ಲದೇ, ವಿರೋಧ ಪಕ್ಷಗಳು ಪ್ರತಿಭಟಿಸಿದ್ದವು.

ಇದಕ್ಕೆ ಪ್ರತಿಕ್ರಿಯಿಸಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್, 'ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದಾರೆ ಎನ್ನಲಾದ ಭಾರತೀಯರನ್ನು ವಾಪಸ್ ಕಳುಹಿಸುವಾಗ ಅವರ ಜತೆಗಿನ ಅಮಾನವೀಯ ವರ್ತನೆ' ಕುರಿತು ಆ ದೇಶದ ಜತೆ ಮಾತುಕತೆ ನಡೆಸುತ್ತಿದ್ದೇವೆ' ಎಂದು ಹೇಳಿದ್ದರು

'ಅಕ್ರಮವಾಗಿ ನೆಲಸಿರುವವರನ್ನು ವಾಪಸ್ ಕಳುಹಿಸುವಾಗ ಅವರನ್ನು ನಿರ್ಬಂಧದಲ್ಲಿ ಇರಿಸುವುದು ಅಮೆರಿಕವು 2012ರಿಂದಲೂ ಅನುಸರಿಸುತ್ತಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಭಾಗ' ಎಂದೂ ಹೇಳಿದ್ದರು.

ಕೃಷಿ ಕ್ಷೇತ್ರ ಸುಧಾರಣೆಗೆ ವಿಶ್ರಾಂತ ಕುಲಪತಿಗಳ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೃಷಿಕರು ಎದುರಿಸುತ್ತಿರುವ ಬಿಕ್ಕಟ್ಟಿಗೆ ಪರಿಹಾರ ಸೂಚಿಸುವ ಮತ್ತು ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕದ ವಿಶ್ರಾಂತ ಕುಲಪತಿಗಳ ವೇದಿಕೆ (ಎಫ್‌ವಿಸಿಕೆ) ಕೆಲವೊಂದು ಶಿಫಾರಸುಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

'ಇತ್ತೀಚೆಗೆ ವೇದಿಕೆಯ ಉಪ ಸಮಿತಿ ನಡೆಸಿದ ಸರಣಿ ಚಿಂತನ-ಮಂಥನ ಸಭೆಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ ಶಿಫಾರಸುಗಳನ್ನು, ಮುಖ್ಯಮಂತ್ರಿ ಅವರಿಗೆ ಪತ್ರದೊಂದಿಗೆ ಸಲ್ಲಿಸಲಾಗಿದೆ. ಇವುಗಳ ಅನುಷ್ಠಾನದಿಂದ ಕೃಷಿ ವಿಶ್ವವಿದ್ಯಾಲಯಗಳ ಗುಣಮಟ್ಟ ಸುಧಾರಣೆ ಜೊತೆಗೆ, ರೈತರ ಆರ್ಥಿಕತೆಯನ್ನೂ ಹೆಚ್ಚಿಸಬಹುದು' ಎಂದು ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಉಪ ಸಮಿತಿಯಲ್ಲಿ ವಿಶ್ರಾಂತ ಕುಲಪತಿಗಳಾದ ಕೆ.ನಾರಾಯಣ ಗೌಡ(ಕೃಷಿ), ಆರ್.ಎನ್.ಶ್ರೀನಿವಾಸ ಗೌಡ(ಪಶುವೈದ್ಯಕೀಯ) ಮತ್ತು ಎಂ.ಕೆ. ನಾಯಕ್(ತೋಟಗಾರಿಕೆ) ಇದ್ದರು.

ಪ್ರಮುಖ ಶಿಫಾರಸುಗಳು:

- ಸಂಶೋಧನೆ ಮತ್ತು ವಿಸ್ತರಣಾ ವಿಭಾಗ ಸೇರಿದಂತೆ ರಾಜ್ಯದ ಆರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಶೇಕಡ 60ರಷ್ಟು ಹುದ್ದೆಗಳ ಭರ್ತಿಗೆ ನೇಮಕಾತಿ ಮಾಡಬೇಕು. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನೂ ತುಂಬಬೇಕಿದೆ.
- ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಜೊತೆಗೆ, ರಾಜ್ಯದ ಪ್ರಮುಖ ಕೃಷಿ ಉತ್ಪನ್ನಗಳಿಗೂ ಹೆಚ್ಚುವರಿ ಬೆಂಬಲ ಬೆಲೆ ನೀಡಬೇಕು. ಹೆಚ್ಚಿರುವ ಸಣ್ಣ ಹಿಡುವಳಿದಾರರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಕೃಷಿ ಪರಿಕರಗಳು, ಯಂತ್ರೋಪಕರಣಗಳು ಸಿಗಬೇಕು. ಉಗ್ರಾಣ, ಸಂಸ್ಕರಣೆ ಸೇರಿದಂತೆ ಅವಶ್ಯಕ ಸೌಲಭ್ಯಗಳನ್ನು ದೊರಕಿಸಿಕೊಡಬೇಕು.
- ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳನ್ನು ಐದು ವರ್ಷಗಳ ಅವಧಿಯವರೆಗೂ ಆರ್ಥಿಕವಾಗಿ ಬೆಂಬಲಿಸಬೇಕು. ತಾಂತ್ರಿಕ ಮಾರ್ಗ ದರ್ಶನ ನೀಡಿ ಪ್ರೋತ್ಸಾಹಿಸಬೇಕು.
- ಕುರಿ, ಮೇಕೆ, ಕೋಳಿ ಹಾಗೂ ಸಾವಯವ ಉತ್ಪನ್ನಗಳ ಮಾರಾಟಕ್ಕೆ ಎಪಿಎಂಸಿಯಲ್ಲಿ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಬೇಕು. ಕೊಯ್ಲೋತ್ತರ ನಷ್ಟ ತಪ್ಪಿಸಲು ಮೌಲ್ಯವರ್ಧನೆ ಮತ್ತು ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.
- ವಿವಿಧ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಗ್ರಾಮೀಣ ಯುವ ಸಮೂಹವನ್ನು ಆಕರ್ಷಿಸಲು ನಿರಂತರ ತರಬೇತಿ, ಯುವ ಪೂರಕ ಯೋಜನೆಗಳನ್ನು ರೂಪಿಬೇಕು.

ಮಣಿಪುರ: 10 ಬಂಡುಕೋರರ ಬಂಧನ

ಪ್ರಜಾವಾಣಿ ವಾರ್ತೆ

ಗುವಾಹಟಿ: ರಾಷ್ಟ್ರಪತಿ ಆಡಳಿತ ಜಾರಿ ಬಳಿಕ ಮಣಿಪುರದಲ್ಲಿ ಭದ್ರತಾ ಕಾರ್ಯಾಚರಣೆ ತೀವ್ರಗೊಂಡಿದ್ದು, 10 ಬಂಡುಕೋರರನ್ನು ಬಂಧಿಸಲಾಗಿದೆ ಮತ್ತು 15 ಕಚ್ಚಾ ಬಾಂಬ್‌ಗಳನ್ನು (ಐಇಡಿ) ವಶಪಡಿಸಿಕೊಳ್ಳಲಾಗಿದೆ.

ಕುಕಿ ಪ್ರಾಬಲ್ಯವಿರುವ ಟೆಂಗ್‌ನೌಪಾಲ್ ಜಿಲ್ಲೆಯ ಸೇನಮ್ ಗ್ರಾಮದಲ್ಲಿ ಎರಡು ಫಿರಂಗಿಗಳು, ಒಂದು 9ಎಂಎಂ ಪಿಸ್ತೂಲ್ ಮತ್ತು ಮದ್ದುಗುಂಡುಗಳನ್ನು ಜಪ್ತಿ ಮಾಡಲಾಗಿದೆ ಎಂದು ಮಣಿಪುರ ಪೊಲೀಸರು ತಿಳಿಸಿದ್ದಾರೆ. ಚುರಚಾಂದಪುರ ಜಿಲ್ಲೆಯ ಓಲ್ಡ್ ಖೌಖೌಲ್ ಗ್ರಾಮದಲ್ಲಿ ಬಂಡುಕೋರ ಸಂಘಟನೆ ಕುಕಿ ನ್ಯಾಷನಲ್ ಗ್ರೂಪ್‌ನ 5 ಶಂಕಿತ ಸದಸ್ಯರನ್ನು ಬಂಧಿಸಲಾಗಿದೆ.

ತ್ರಿಭಾಷಾ ಸೂತ್ರ: ಕೇಂದ್ರ ಸಚಿವರ ನಿಲುವಿಗೆ ಸಿ.ಎಂ ಸ್ಟಾಲಿನ್ ಖಂಡನೆ

ಚೆನ್ನೈ (ಪಿಟಿಐ): 'ತ್ರಿಭಾಷಾ ಸೂತ್ರ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಒಪ್ಪಿಕೊಳ್ಳುವವರೆಗೆ ತಮಿಳುನಾಡಿಗೆ ಅನುದಾನ ಒದಗಿಸಲಾಗದು' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನೀಡಿದ್ದಾರೆ ಎನ್ನಲಾದ ಹೇಳಿಕೆಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭಾನುವಾರ ಖಂಡಿಸಿದ್ದಾರೆ.

ಇದೊಂದು 'ಬ್ಲ್ಯಾಕ್‌ಮೇಲ್' ತಂತ್ರ' ಎಂದು ಕಿಡಿಕಾರಿದ್ದಾರೆ.

ವಾರಾಣಸಿಯಲ್ಲಿ ಫೆ.15ರಂದು ಈ ಸಂಬಂಧ ಪ್ರಧಾನ್ ಅವರು ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಜೊತೆಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಸ್ಟಾಲಿನ್ ಅವರು, 'ಇಂತಹ ಬೆದರಿಕೆಯು ಸ್ವೀಕಾರಾರ್ಹವಲ್ಲ. ತಮಿಳುನಾಡು ಇಂತಹದನ್ನು ಸಹಿಸುವುದೂ ಇಲ್ಲ' ಎಂದಿದ್ದಾರೆ.

'ಅನುದಾನ ರಾಜ್ಯದ ಹಕ್ಕು. ಬಾಕಿ ಉಳಿದಿರುವ ಅನುದಾನ ಬಿಡುಗಡೆಗೆ ರಾಜ್ಯ ಒತ್ತಾಯಿಸಿದೆ. ಆದರೆ, ತಮ್ಮ ಸ್ವಂತ ಆಸ್ತಿ ಕೇಳುತ್ತಿದ್ದಾರೆ ಎಂಬರ್ಥದಲ್ಲಿ ಅಹಂನಿಂದ ಕೇಂದ್ರ ಸಚಿವರು ಮಾತ-ನಾಡುತ್ತಿದ್ದಾರೆ' ಎಂದು ಕಟುವಾಗಿ ಪ್ರತಿ-ಕ್ರಿಯಿಸಿದ್ದಾರೆ. ತ್ರಿಭಾಷಾ ಸೂತ್ರ ಕಡ್ಡಾಯ ಎಂದು ಉಲ್ಲೇಖಿಸಿರುವ ಸಂವಿಧಾನದ ಅಂಶವನ್ನು ಕೇಂದ್ರ ಸಚಿವರು ತೋರಿಸಲಿ ಎಂದು ಮುಖ್ಯಮಂತ್ರಿ ಸವಾಲು ಹಾಕಿದರು.

ಇದಕ್ಕೆ ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಅವರು, 'ಮುಖ್ಯಮಂತ್ರಿ ಅವರ ಮೊಮ್ಮಕ್ಕಳು ಖಾಸಗಿ ಶಾಲೆಯಲ್ಲಿ ಮೂರು ಭಾಷೆ ಕಲಿಯುತ್ತಿರುವಾಗ, ಸರ್ಕಾರಿ ಶಾಲೆಯ ಮಕ್ಕಳು ತಮಿಳು, ಇಂಗ್ಲಿಷ್ ಜೊತೆ ಮತ್ತೊಂದು ಭಾಷೆ ಏಕೆ ಕಲಿಯಬಾರದು' ಎಂದು ಪ್ರಶ್ನಿಸಿದ್ದಾರೆ.

ಮೋದಿ ಟೀಕಿಸಿ ವ್ಯಂಗ್ಯಚಿತ್ರ ಪ್ರಕಟ: ಬಿಜೆಪಿ ದೂರು

'ವಿಕಟನ್' ವೆಬ್‌ಸೈಟ್‌ಗೆ ನಿರ್ಬಂಧ?

ಚೆನ್ನೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಭೇಟಿಯನ್ನು ಟೀಕಿಸುವ ವ್ಯಂಗ್ಯಚಿತ್ರವನ್ನು ಪ್ರಕಟಿಸಿದ ಕಾರಣಕ್ಕೆ ಓದುಗರು ನಮ್ಮ ವೆಬ್‌ಸೈಟ್ ವೀಕ್ಷಿಸಲು ಸಾಧ್ಯವಾಗುತ್ತಿಲ್ಲ ಎಂದು ತಮಿಳುನಾಡಿನ ವಿಕಟನ್ ವೆಬ್‌ಸೈಟ್ ಜನಪ್ರಿಯ ವೆಬ್‌ಸೈಟ್ 'ವಿಕಟನ್' ಲಾಂಛನ ಆರೋಪಿಸಿದೆ.

'ವಿಕಟನ್' ವಿರುದ್ಧ ತಮಿಳುನಾಡಿನ ಬಿಜೆಪಿ ರಾಜ್ಯ ಘಟಕ ಕೇಂದ್ರ ಸರ್ಕಾರಕ್ಕೆ ದೂರು ನೀಡಿತ್ತು.

'ವಿಕಟನ್ ವೆಬ್‌ಸೈಟ್ ಅನ್ನು ಕೇಂದ್ರ ಸರ್ಕಾರ ನಿರ್ಬಂಧಿಸಿದೆ ಎಂಬ ಹಲವು ವರದಿಗಳು ಬಂದಿವೆ. ವೆಬ್‌ಸೈಟ್ ವೀಕ್ಷಿಸಲು ಸಾಧ್ಯವಾಗದಿರುವ ಬಗ್ಗೆ ಓದುಗರು ತಿಳಿಸಿದ್ದಾರೆ. ಆದರೆ, ವೆಬ್‌ಸೈಟ್ ಅನ್ನು ನಿರ್ಬಂಧಿಸಿರುವ ಬಗ್ಗೆ ಕೇಂದ್ರ ಸರ್ಕಾರ ಅಧಿಕೃತ ಸೂಚನೆ ನೀಡಿಲ್ಲ' ಎಂದು ವಿಕಟನ್ ವೆಬ್‌ಸೈಟ್ ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದೆ.

ಭಾರತೀಯ ವಲಸಿಗರ ಕೈಗೆ ಕೋಳ ಹಾಕಿ ಅಮೆರಿಕವು ಗಡೀಪಾರು ಮಾಡಿರುವ ಕುರಿತು ಪ್ರಧಾನಿ ಮೋದಿ ಮೌನ ವಹಿಸಿರುವುದನ್ನು ಟೀಕಿಸಿ 'ವಿಕಟನ್ ಪ್ಲಸ್' ಡಿಜಿಟಲ್ ನಿಯತಕಾಲಿಕೆ ವೆಬ್‌ಸೈಟ್‌ನಲ್ಲಿ ಫೆ.10ರಂದು ವ್ಯಂಗ್ಯಚಿತ್ರವೊಂದನ್ನು ಪ್ರಕಟಿಸಲಾಗಿತ್ತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ಪ್ರಧಾನಿ ಮೋದಿ ಅವರು ಕೈಗೆ ಕೋಳ ಹಾಕಿಕೊಂಡು ಕುಳಿತಿರುವ ಹಾಗೆ ಚಿತ್ರಿಸಲಾಗಿತ್ತು.

'ವಿಕಟನ್' ಪ್ರಕಟಿಸಿದ್ದ ವ್ಯಂಗ್ಯಚಿತ್ರದ ಬಗ್ಗೆ ಬಿಜೆಪಿ ಟೀಕೆ ಮಾಡಿತ್ತು ಮತ್ತು ಈ ಬಗ್ಗೆ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಕೇಂದ್ರ ಸರ್ಕಾರಕ್ಕೆ ದೂರು ನೀಡಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯದ ಬದ್ಧತೆಯೊಂದಿಗೆ ಕಾರ್ಯನಿರ್ವಹಿಸುತ್ತಿ-ರುವ ವೆಬ್‌ಸೈಟ್ ಮೇಲಿನ ನಿರ್ಬಂಧದ ಹಿಂದಿನ ಕಾರಣಗಳನ್ನು ತಿಳಿಯಲು ಪ್ರಯತ್ನಿಸುತ್ತಿದ್ದೇವೆ ಮತ್ತು ಈ ಬಗ್ಗೆ ಕೇಂದ್ರ ಮಾಹಿತಿ ಸಚಿವಾಲಯಕ್ಕೆ ತಿಳಿಸಲಾಗಿದೆ ಎಂದು ವಿಕಟನ್ ಹೇಳಿದೆ.

ಮುಖ್ಯಮಂತ್ರಿ ಸ್ಟಾಲಿನ್ ಖಂಡನೆ

'ಅಭಿಪ್ರಾಯವನ್ನು ವ್ಯಕ್ತಪಡಿಸಿದ ಕಾರಣಕ್ಕೆ ಮಾಧ್ಯಮವನ್ನು ನಿರ್ಬಂಧಿಸುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಇದನ್ನು ಖಂಡಿಸುತ್ತೇವೆ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರು ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಟಿವಿಕೆಯ ನಾಯಕರು ಸೇರಿದಂತೆ ಹಲವರು ಕೇಂದ್ರಸರ್ಕಾರವನ್ನು ಟೀಕಿಸಿದ್ದಾರೆ.

ಪಾಕ್ ಪ್ರಜೆ ಶೇಖ್ ತನಿಖೆಗೆ ಅಸ್ಸಾಂ ಸರ್ಕಾರ ಸೂಚನೆ

ಗುವಾಹಟಿ: ಪಾಕಿಸ್ತಾನಿ ಪ್ರಜೆ ಅಲಿ ತಕೀರ್ ಶೇಖ್ ಎನ್ನುವವರ ವಿರುದ್ಧ ಪ್ರಕರಣ ದಾಖಲಿಸುವಂತೆ ಅಸ್ಸಾಂ ಸಚಿವ ಸಂಪುಟವು ಪೊಲೀಸರಿಗೆ ಆದೇಶಿಸಿದೆ.

ಕಾಂಗ್ರೆಸ್ ಸಂಸದ ಗೌರವ್ ಗೊಗೊಯಿ ಅವರ ಪತ್ನಿ ಎಲಿಜಬೆತ್ ಕೊಲ್‌ಬರ್ನ್ ಅವರು ಶೇಖ್ ಅವರ ಜೊತೆ ಹೊಂದಿರುವ ನಂಟಿನ ಬಗ್ಗೆ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಅನುಮಾನ ವ್ಯಕ್ತಪಡಿಸಿದ ನಂತರ ಸಂಪುಟವು ಈ ಆದೇಶ ನೀಡಿದೆ. ಎಲಿಜಬೆತ್ ಅವರು ಬ್ರಿಟಿಷ್ ಪ್ರಜೆ.

ಎಲಿಜಬೆತ್ ಅವರು ಅಲಿ ಶೇಖ್ ನೇತೃತ್ವದ 'ಲೀಡ್ ಪಾಕಿಸ್ತಾನ್' ಎನ್ನುವ ಎನ್‌ಜಿಒಗಾಗಿ ಕೆಲಸ ಮಾಡಿದ್ದಾರೆ. ಎಲಿಜಬೆತ್ ಅವರು ಗೊಗೊಯಿ ಅವರನ್ನು ಮದುವೆಯಾದ ನಂತರವೂ 2023ರಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಈ ಎನ್‌ಜಿಒ ಹವಾಮಾನ ಬದಲಾವಣೆ ವಿಚಾರವಾಗಿ ಕೆಲಸ ಮಾಡಿದೆ ಎಂದು ಶರ್ಮ ಅವರು ಸುದ್ದಿಗಾರರಿಗೆ ತಿಳಿಸಿದರು.

'ಅಲಿ ಅವರ ಸಾಮಾಜಿಕ ಜಾಲತಾಣ ಪೋಸ್ಟ್‌ಗಳು ಅವರ ಭಾರತ ವಿರೋಧಿ, ಅಸ್ಸಾಂ ವಿರೋಧಿ ಧೋರಣೆಗಳನ್ನು ಹೇಳುತ್ತಿವೆ. ಹೀಗಾಗಿ ಸಂಸದರೊಬ್ಬರ ಪತ್ನಿಯು ಪಾಕಿಸ್ತಾನಕ್ಕೆ ಭೇಟಿ ನೀಡುವುದು ಹಲವು ಅನುಮಾನಗಳಿಗೆ ಖಂಡಿತವಾಗಿಯೂ ಕಾರಣವಾಗುತ್ತದೆ, ಪ್ರಶ್ನೆಗಳನ್ನು ಮೂಡಿಸುತ್ತದೆ. ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಸಂಪುಟವು ಡಿಐಜಿ ಅವರಿಗೆ ಸೂಚಿಸಿದೆ' ಎಂದು ಶರ್ಮ ತಿಳಿಸಿದರು.

ವಾರಿಯರ್ಸ್ ವಿರುದ್ಧ ಸಾಂಘಿಕ ಪ್ರದರ್ಶನ • ಮಿಂಚಿದ ಆಶ್ಲೆ ಗಾರ್ಡನರ್

ಗೆಲುವಿನ ಹಳಿಗೆ ಜೈಂಟ್ಸ್

ಅರ್ಧಶತಕ ಬಾರಿಸಿದ ಗುಜರಾತ್ ಜೈಂಟ್ಸ್‌ನ ಆಶ್ಲೆ ಗಾರ್ಡನರ್

ವಡೋದರ (ಪಿಟಿಐ): ಬೌಲಿಂಗ್ ನಂತರ, ಬ್ಯಾಟಿಂಗ್‌ನಲ್ಲೂ ಸಾಂಘಿಕ ಪ್ರದರ್ಶನ ನೀಡಿದ ಗುಜರಾತ್ ಜೈಂಟ್ಸ್ ತಂಡ, ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಭಾನುವಾರ ಯುಪಿ ವಾರಿಯರ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿಗೆ ಸೋತಿದ್ದ ಆತಿಥೇಯರು ಗೆಲುವಿನ ಹಳಿಗೆ ಮರಳಿದರು.

ಕೋತಂಬಿ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ವಾರಿಯರ್ಸ್ ತಂಡ ತನ್ನ ಪಾಲಿನ ಓವರುಗಳಲ್ಲಿ 9 ವಿಕೆಟ್‌ಗೆ 143 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಲೆಗ್ ಸ್ಪಿನ್ನರ್ ಪ್ರಿಯಾ ಮಿಶ್ರಾ 3 ವಿಕೆಟ್ ಗಳಿಸಿದರೆ, ಆಶ್ಲೆ ಗಾರ್ಡನರ್ ಮತ್ತು ದಿಯಾಂಡ್ರಾ ಡಾಟಿನ್ ತಲಾ ಎರಡು ವಿಕೆಟ್ ಪಡೆದರು.

ಈ ಮೊತ್ತ ಬೆನ್ನಟ್ಟಿದ ಜೈಂಟ್ಸ್ ತಂಡ 18 ಓವರುಗಳಲ್ಲಿ 4 ವಿಕೆಟ್ ನಷ್ಟದಲ್ಲಿ 144 ರನ್ ಹೊಡೆಯಿತು. 34 ರನ್ನಿಗೆ 2 ವಿಕೆಟ್ ಪಡೆದಿದ್ದ ಗಾರ್ಡನರ್ ಬ್ಯಾಟಿಂಗ್‌ನಲ್ಲೂ ಮಿಂಚಿ ಲಗುಬಗನೇ 52 ರನ್ (32 ಎ, 4x5, 6x3) ಹೊಡೆದು ಆರಂಭದಲ್ಲೇ ಕುಸಿದ ತಂಡಕ್ಕೆ ಚೈತನ್ಯ ತುಂಬಿದರು.

ಬೆತ್ ಮೂನಿ (0) ಮತ್ತು ದಯಾಳನ್ ಹೇಮಲತಾ (0) ಅವರನ್ನು ಬರೇ ಎರಡು ರನ್‌ಗಳಾಗಿದ್ದಾಗ ಕಳೆದುಕೊಂಡಿದ್ದ ಜೈಂಟ್ಸ್ ತಂಡವನ್ನು ಆರಂಭ ಆಟಗಾರ್ತಿ ಲಾರಾ ವೋಲ್ವಾರ್ಟ್ (22) ಅವರೊಡನೆ ಗಾರ್ಡನರ್ ಅಪಾಯದಿಂದ ಪಾರು ಮಾಡಿ ಮೂರನೇ ವಿಕೆಟ್‌ಗೆ 55 ರನ್ ಪೇರಿಸಿದರು. ಮೊತ್ತ 86 ಆಗಿದ್ದಾಗ ಗಾರ್ಡನರ್ ನಿರ್ಗಮಿಸಿದರೂ, ಹರ್ಲೀನ್ ಡಿಯೋಲ್ (ಔಟಾಗದೇ 34, 30ಎ) ಮತ್ತು ಡಿಯಾಂಡ್ರ ಡಾಟಿನ್ (ಔಟಾಗದೇ 33, 18ಎ, 4x3, 6x2) ಮುರಿಯದ ಐದನೇ ವಿಕೆಟ್‌ಗೆ 58 ರನ್ ಸೇರಿಸಿ ಎರಡು ಓವರುಗಳಿರುವಂತೆ ತಂಡವನ್ನು ದಡ ಸೇರಿಸಿದರು.

ಇದಕ್ಕೆ ಮೊದಲು ಯುವ ಸ್ಪಿನ್ನರ್ ಪ್ರಿಯಾ ಮಿಶ್ರಾ (25ಕ್ಕೆ3) ನೇತೃತ್ವದಲ್ಲಿ ಜೈಂಟ್ಸ್ ಬೌಲರ್‌ಗಳು ಎದುರಾಳಿಯನ್ನು ಕಟ್ಟಿಹಾಕಿದ್ದರು. ವಾರಿಯರ್ಸ್ ನಾಯಕಿ ದೀಪ್ತಿ ಶರ್ಮಾ (39, 27ಎ) ಮತ್ತು ಉಮಾ ಚೆಟ್ರಿ (24) ಬಿಟ್ಟರೆ ಉಳಿದವರು ವಿಫಲರಾದರು. ಇವರಿಬ್ಬರು ಮೂರನೇ ವಿಕೆಟ್‌ಗೆ 44 ಎಸೆತಗಳಲ್ಲಿ 51 ರನ್ ಸೇರಿಸಿದ್ದು ಬಿಟ್ಟರೆ ಯುಪಿ ಇನಿಂಗ್ಸ್‌ನಲ್ಲಿ ಹೇಳಿಕೊಳ್ಳುವುದೇನೂ ಇರಲಿಲ್ಲ.

ಸಂಕ್ಷಿಪ್ತ ಸ್ಕೋರು: ಯುಪಿ ವಾರಿಯರ್ಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 143 (ಉಮಾ ಚೆಟ್ರಿ 24, ದೀಪ್ತಿ ಶರ್ಮಾ 39; ದಿಯಾಂಡ್ರಾ ಡಾಟಿನ್ 34ಕ್ಕೆ2, ಆಶ್ಲೆ ಗಾರ್ಡನರ್ 39ಕ್ಕೆ2, ಪ್ರಿಯಾ ಮಿಶ್ರಾ 25ಕ್ಕೆ3); ಗುಜರಾತ್ ಜೈಂಟ್ಸ್: 18 ಓವರುಗಳಲ್ಲಿ 4 ವಿಕೆಟ್‌ಗೆ 143 (ಲಾರಾ ವೊಲ್ವಾರ್ಟ್ 22, ಆಶ್ಲೆ ಗಾರ್ಡನರ್ 52, ಹರ್ಲಿನ್ ಡಿಯೋಲ್ ಔಟಾಗದೇ 34, ದಿಯಾಂಡ್ರ ಡಾಟಿನ್ ಔಟಾಗದೇ 33; ಸೋಫಿ ಎಕ್ಲೆಸ್ಟೋನ್ 16ಕ್ಕೆ2). ಪಂದ್ಯದ ಆಟಗಾರ್ತಿ: ಆಶ್ಲೆ ಗಾರ್ಡನರ್

ರಣಜಿ ಟ್ರೋಫಿ ಸೆಮಿಫೈನಲ್ಸ್ ಇಂದಿನಿಂದ • ಜೈಸ್ವಾಲ್ ಆಡುವುದು ಸಂದೇಹ

ಮುಂಬೈ ತಂಡಕ್ಕೆ ವಿದರ್ಭ ಸವಾಲು

ನಾಗ್ಪುರ (ಪಿಟಿಐ): ಭಾರತ ತಂಡದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಗಾಯಾಳಾಗಿದ್ದು ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಆಡುವ ಸಾಧ್ಯತೆ ದೂರವಾಗಿದೆ. ಆದರೂ ಮುಂಬೈ ತಂಡ ಸೋಮವಾರ ಇಲ್ಲಿ ಆರಂಭವಾಗುವ ಐದು ದಿನಗಳ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ವಿರುದ್ಧ ಗೆಲ್ಲುವ ನೆಚ್ಚಿನ ತಂಡವಾಗಿದೆ.

ಗಾಯದ ತೀವ್ರತೆ ತಿಳಿದುಕೊಳ್ಳಲು ಜೈಸ್ವಾಲ್ ಅವರು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರಕ್ಕೆ ತೆರಳುವ ಸಂಭವವಿದೆ ಎಂದು ಪಿಟಿಐ ತಿಳಿಸಿದೆ. ಅವರಿಗಾಗಿರುವ ಗಾಯದ ಸಮಸ್ಯೆ ಏನೆಂದು ನಿರ್ದಿಷ್ಟವಾಗಿ ತಿಳಿಸಲಾಗಿಲ್ಲ. ಚಾಂಪಿಯನ್ಸ್ ಟ್ರೋಫಿಗೆ ಅವರು ಭಾರತ ತಂಡದ 'ನಾನ್ ಟ್ರಾವೆಲಿಂಗ್ ರಿಸರ್ವ್' ಪಟ್ಟಿಯಲ್ಲಿದ್ದಾರೆ.

ಜೈಸ್ವಾಲ್ ಅವರ ಸಂಭವನೀಯ ಗೈರು ಮುಂಬೈ ತಂಡವನ್ನು ಬಾಧಿಸುವ ಸಾಧ್ಯತೆ ಇಲ್ಲ. ಅನುಭವಿ ಅಜಿಂಕ್ಯ ರಹಾನೆ ನೇತೃತ್ವದ ಮುಂಬೈ ತಂಡದಲ್ಲಿ ಸೂರ್ಯಕುಮಾರ್ ಯಾದವ್, ಶಿವಂ ದುಬೆ ಮತ್ತು ಶಾರ್ದೂಲ್ ಠಾಕೂರ್ ಅವರಂಥ ತಾರೆಗಳಿದ್ದಾರೆ.

ಆದರೆ ಪಟ್ಟುಬಿಡದ ಆಟ ಆ ತಂಡದ ಯಶಸ್ಸಿನ ಗುಟ್ಟಾಗಿದೆ. ಮುಂಬೈ 42 ಬಾರಿ ಚಾಂಪಿಯನ್ ಆಗಿದೆ. ಪರಿಣತ ಬ್ಯಾಟರ್‌ಗಳು ಕೈಕೊಟ್ಟಾಗ ಕೆಳಕ್ರಮಾಂಕದ ಆಟಗಾರರಾದ ಶಾರ್ದೂಲ್ ಠಾಕೂರ್, ಶಮ್ಸ್ ಮುಲಾನಿ, ತನುಷ್ ಕೋಟ್ಯಾನ್ ತಂಡವನ್ನು ರಕ್ಷಿಸಿದ್ದಾರೆ.

ಇನ್ನೊಂದು ಕಡೆ ಅಕ್ಷಯ ವಾಡ್ಕರ್ ನೇತೃತ್ವದ ವಿದರ್ಭ ತಂಡವೂ ಅತ್ಯುತ್ತಮ ಫಾರ್ಮ್‌ನಲ್ಲಿದೆ. ತಂಡದಲ್ಲಿ ಖ್ಯಾತನಾಮ ಬೌಲರ್‌ಗಳಿಲ್ಲದಿದ್ದರೂ, ಹರ್ಷ ದುಬೆ, ಯಶ್ ಠಾಕೂರ್, ಆದಿತ್ಯ ಠಾಕರೆ, ನಚಿಕೇತ್ ಭೂತೆ ಪರಿಣಾಮಕಾರಿ ಎನಿಸಿದ್ದಾರೆ.

ಎಡಗೈ ಸ್ಪಿನ್ನರ್ ದುಬೆ ಈ ಬಾರಿಯ ರಣಜಿ ಋತುವಿನಲ್ಲಿ 59 ವಿಕೆಟ್ ಕಿತ್ತು ಬೌಲರ್‌ಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಮುಂಬೈ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ದೌರ್ಬಲ್ಯದ ಲಾಭ ಪಡೆಯುವ ಹವಣಿಕೆಯಲ್ಲಿ ವಿದರ್ಭ ಇದೆ. ಈ ಬಾರಿ ಅತ್ಯಧಿಕ ರನ್ ಗಳಿಸಿರುವ ಅಗ್ರ 20 ಬ್ಯಾಟರ್‌ಗಳ ಪಟ್ಟಿಯಲ್ಲಿ ಮುಂಬೈನ ಯಾವುದೇ ಬ್ಯಾಟರ್ ಇಲ್ಲ. 565 ರನ್ ಪೇರಿಸಿರುವ ಸಿದ್ದೇಶ್ ಲಾಡ್ 22ನೇ ಸ್ಥಾನದಲ್ಲಿದ್ದಾರೆ.

ವಿದರ್ಭದ ಪ್ರಮುಖ ಬ್ಯಾಟರ್ ಯಶ್ ಠಾಥೋಡ್ ಈ ಬಾರಿ 728 ರನ್ ಗಳಿಸಿದ್ದು ನಾಲ್ಕನೇ ಸ್ಥಾನದಲ್ಲಿದ್ದಾರೆ. ಜೊತೆಗೆ ಕರುಣ್ ನಾಯರ್ (591) ಮತ್ತು ಅಕ್ಷಯ್ ವಾಡ್ಕರ್ (588) ಅವರೂ ತಂಡವನ್ನು ಕೆಲವು ಬಾರಿ ರಕ್ಷಿಸಿದ್ದಾರೆ. ಆರಂಭ ಆಟಗಾರರಾದ ಅಥರ್ವ ತೈಡೆ ಮತ್ತು ಧ್ರುವ್ ಶೋರೆ ಅವರಿಂದ ಉಪಯುಕ್ತ ಆಟದ ನಿರೀಕ್ಷೆಯಲ್ಲಿ ವಿದರ್ಭ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9.30.

ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯದ ಮುನ್ನಾದಿನವಾದ ಭಾನುವಾರ ನಾಗ್ಪುರದಲ್ಲಿ ಪ್ರಾಕ್ಟೀಸ್ ನಂತರ ಮುಂಬೈ ತಂಡದ ಸೂರ್ಯಕುಮಾರ್ ಯಾದವ್ ಅವರು ವಿದರ್ಭ ತಂಡದ ಕರುಣ್ ನಾಯರ್ ಜೊತೆ ತಮಾಷೆಯಲ್ಲಿ ತೊಡಗಿದ್ದು ಕಂಡುಬಂತು –ಪಿಟಿಐ ಚಿತ್ರ

ಗುಜರಾತ್ ನೆಚ್ಚಿನ ತಂಡ

ಅಹಮದಾಬಾದ್: ಮಾಜಿ ಚಾಂಪಿಯನ್ ಹಾಗೂ ಆತಿಥೇಯ ಗುಜರಾತ್ ತಂಡ ಸೋಮವಾರ ಆರಂಭವಾಗುವ ಇನ್ನೊಂದು ಸೆಮಿಫೈನಲ್‌ನಲ್ಲಿ ಆಟವಾಡುತ್ತಿರುವ ಕೇರಳ ತಂಡವನ್ನು ಎದುರಿಸಲಿದೆ.

2016–17ರಲ್ಲಿ ಚಾಂಪಿಯನ್ ಆಗಿದ್ದ ಗುಜರಾತ್, ಐದು ವರ್ಷಗಳ ನಂತರ ಸೆಮಿಫೈನಲ್ ತಲುಪಿದೆ. 2019–20ರಲ್ಲಿ ಕೊನೆಯ ಬಾರಿ ಸೆಮಿಫೈನಲ್ ಆಡಿತ್ತು.

ಮನನ್ ಹಿಂಗ್ರೇಜಿಯಾ, ಜಯಮೀತ್ ಪಟೇಲ್ ಮತ್ತು ಕೀಪರ್ ಉರ್ವಿಲ್ ಪಟೇಲ್ ಅವರಿರುವ ಮಧ್ಯಮ ಕ್ರಮಾಂಕವು ಪ್ರಿಯಾಂಕ್ ಪಾಂಚಾಲ್ ನೇತೃತ್ವದ ಗುಜರಾತ್ ಬ್ಯಾಟಿಂಗ್‌ಗೆ ಬಲ ನೀಡಿದೆ. ಜಯಮೀತ್ ಈ ಬಾರಿ ಗುಜರಾತ್ ಪರ 48.50 ಸರಾಸರಿಯಲ್ಲಿ 582 ರನ್ ಗಳಿಸಿದ್ದು, ತಂಡದ ಟಾಪ್ ಸ್ಕೋರರ್ ಎನಿಸಿದ್ದಾರೆ. ಹಿಂಗ್ರೇಜಿಯಾ (570 ರನ್) ಅವರೂ ಹಿಂದೆಬಿದ್ದಿಲ್ಲ.

ಸಚಿನ್ ಬೇಬಿ ನೇತೃತ್ವದ ಕೇರಳ ತಂಡ ಏಳು ವರ್ಷಗಳಲ್ಲಿ ಎರಡನೇ ಸಲ ಸೆಮಿಫೈನಲ್ ಆಡುತ್ತಿದೆ. 2018–19ರಲ್ಲಿ ಮೊದಲ ಬಾರಿ ನಾಲ್ಕರ ಘಟ್ಟ ತಲುಪಿತ್ತು. ತಂಡ ಎಂಟರ ಘಟ್ಟದ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಪಡೆದ ಮೊದಲ ಇನಿಂಗ್ಸ್‌ನಲ್ಲಿ ಒಂದು ರನ್ ಮುನ್ನಡೆ ಪಡೆದಿತ್ತು.

ಗೋಲು ದಾಖಲಿಸಿದ ಸಂಭ್ರಮದಲ್ಲಿ ಭಾರತ ಪುರುಷರ ಹಾಕಿ ತಂಡದ ಆಟಗಾರರು

ಕಿಕ್‌ಸ್ಟಾರ್ಟ್ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ಕರ್ನಾಟಕ ಯೂತ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಭಾನುವಾರ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ವಿರುದ್ಧ 3–2 ಗೋಲುಗಳಿಂದ ಜಯಗಳಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಎ. ಆನಂದ್ ಆಸೀರ್ (6ನೇ ನಿ.) ಮತ್ತು ಹಾಹೊಲೆನ್‌ಮಾನೊಹೊ ಮಿಸಾಹೊ (8ನೇ ನಿ., 45ನೇ ನಿ.) ಗೋಲುಗಳನ್ನು ಹೊಡೆದರು.

ರಾಮನ್ ತಂಡದ ರಕ್ಷಿತ್ ಪಿ.ಅನಿಲ್ (41ನೇ ಮತ್ತು 69ನೇ ನಿ.) ಗೋಲುಗಳನ್ನು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ದಿ ಸ್ಪೋರ್ಟ್ಸ್ ಸ್ಕೂಲ್ ತಂಡ 1–1 ಗೋಲಿನಿಂದ ಆಲ್ಕೆಮಿ ಐಎಫ್ಎ ವಿರುದ್ಧ ಡ್ರಾ ಸಾಧಿಸಿತು.

ಸ್ಪೋರ್ಟ್ಸ್ ಸ್ಕೂಲ್ ತಂಡದ ವೇದಾಂತ್ ಅಜಯ್ ಗುಪ್ತಾ (51ನೇ ನಿ.) ಮತ್ತು ಆಲ್ಕೆಮಿ ಐಎಫ್ಎ ತಂಡದ ಪೌಲ್ ಪ್ರದೀಪ್ (44ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಎಚ್‌ಎಎಲ್ ಎಫ್‌ಸಿ ತಂಡಕ್ಕೆ ಜಯ

ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಎಚ್‌ಎಎಲ್ ಎಫ್‌ಸಿ ತಂಡ 2–1 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಪ್ರೊ ಲೀಗ್: ಮಹಿಳಾ ತಂಡಕ್ಕೆ ನಿರಾಸೆ

ಹರ್ಮನ್ ಬಳಗಕ್ಕೆ ಮಣಿದ ಸ್ಪೇನ್

ಭುವನೇಶ್ವರ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತ ಪುರುಷರ ಹಾಕಿ ತಂಡವು ಭಾನುವಾರ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ 2–0 ಗೋಲುಗಳಿಂದ ಸ್ಪೇನ್ ತಂಡವನ್ನು ಮಣಿಸಿತು.

ಶನಿವಾರ ನಡೆದ ಪಂದ್ಯದಲ್ಲಿ 1–3 ಗೋಲುಗಳಿಂದ ಇದೇ ತಂಡದ ವಿರುದ್ಧ ಪರಾಭವಗೊಂಡಿದ್ದ ಹರ್ಮನ್‌ಪ್ರೀತ್ ಬಳಗವು ಮರು ಲೆಗ್ ಪಂದ್ಯದಲ್ಲಿ ಅದ್ಭುತ ಪುನರಾಗಮನದೊಂದಿಗೆ ಗೆದ್ದು, ಮುಯ್ಯಿ ತೀರಿಸಿಕೊಂಡಿತು. ಭಾರತ ತಂಡವು ಮಂಗಳವಾರ ಜರ್ಮನಿ ತಂಡವನ್ನು ಎದುರಿಸಲಿದೆ.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲ ಎರಡು ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದವು. ಮೂರನೇ ಕ್ವಾರ್ಟರ್‌ನಲ್ಲಿ ಭಾರತದ ಪರ ಎರಡು ಗೋಲು ದಾಖಲಾದವು.

32ನೇ ನಿಮಿಷದಲ್ಲಿ ಮನ್‌ದೀಪ್ ಅವರು ಅಮೋಘವಾಗಿ ಚೆಂಡನ್ನು ಗುರಿ ಸೇರಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಅದಾದ ಏಳು ನಿಮಿಷಕ್ಕೆ ದಿಲ್‌ಪ್ರೀತ್ ಸಿಂಗ್ (39ನೇ) ಗೋಲು ದಾಖಲಿಸಿ, ಭಾರತದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ನಾಲ್ಕನೇ ಕಾರ್ಟರ್‌ನಲ್ಲಿ ಇದೇ ಅಂತರವನ್ನು ಕಾಯ್ದುಕೊಳ್ಳುವಲ್ಲಿ ಹರ್ಮನ್ ಪಡೆ ಯಶಸ್ವಿಯಾಯಿತು.

ವನಿತೆಯರಿಗೆ ಸೋಲು: ಭಾರತದ ಮಹಿಳಾ ತಂಡವು ಇಂಗ್ಲೆಂಡ್ ವಿರುದ್ಧ ಪರಾಭವಗೊಂಡಿತು. ನಿಗದಿತ ಅವಧಿಯ ಆಟ 2–2 ಗೋಲುಗಳಿಂದ ಸಮಬಲಗೊಂಡ ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಸಲಿಮಾ ಟೆಟೆ ಬಳಗ 1–2ರಿಂದ ಮುಗ್ಗರಿಸಿತು.

ಭಾರತದ ವನಿತೆಯರು ಶನಿವಾರ ಇದೇ ತಂಡದ ವಿರುದ್ಧ 3–2 ಗೋಲುಗಳಿಂದ ಗೆದ್ದು, ಶುಭಾರಂಭ ಮಾಡಿದ್ದರು. ಮರುದಿನ ನಡೆದ ಹಣಾಹಣಿಯಲ್ಲಿ ಆಂಗ್ಲರ ಪಡೆ ಗೆದ್ದು ಬೀಗಿತು. ಭಾರತ ಮಹಿಳಾ ತಂಡವು ಇಲ್ಲಿ ಮಂಗಳವಾರ ಸ್ಪೇನ್ ತಂಡವನ್ನು ಎದುರಿಸಲಿದೆ.

ಹಿಂದಿನ ಪಂದ್ಯದಲ್ಲಿ ಗೆಲುವಿನ ಗೋಲು ದಾಖಲಿಸಿದ್ದ ಉಪನಾಯಕಿ ನವನೀತ್ ಕೌರ್ (53ನೇ ನಿ) ಮತ್ತು ಋತುಜಾ ದಾದಾಸೊ ಪಿಸಾಲ್ (57ನೇ ನಿ) ಅವರು ಭಾರತ ಪರ ಗೋಲು ತಂದಿತ್ತರು. ಪೈಗೆ ಗಿಲ್ಲೊಟ್ (40ನೇ ನಿಮಿಷ) ಮತ್ತು ಟೆಸ್ಸಾ ಹೊವಾರ್ಡ್ (56ನೇ) ಅವರು ಇಂಗ್ಲೆಂಡ್ ಪರ ತಲಾ ಒಂದು ಗೋಲು ಗಳಿಸಿದರು. ಈ ಎರಡೂ ಗೋಲುಗಳು ಪೆನಾಲ್ಟಿ ಕಾರ್ನರ್‌ನಿಂದ ದಾಖಲಾದವು. ಪೆನಾಲ್ಟಿ ಶೂಟೌಟ್‌ನಲ್ಲಿ ನವನೀತ್ ಮಾತ್ರ ಚೆಂಡನ್ನು ಗುರಿ ಸೇರಿಸಲು ಯಶಸ್ವಿಯಾದರು.

ಐಪಿಎಲ್: ಮುಂಬೈ ಇಂಡಿಯನ್ಸ್ ತಂಡಕ್ಕೆ ಮುಜೀಬ್

ಮುಂಬೈ (ಪಿಟಿಐ): ಅಫ್ಗಾನಿಸ್ತಾನದ ಆಫ್ ಸ್ಪಿನ್ನರ್ ಮುಜೀಬ್ ಉರ್ ರಹಮಾನ್ ಅವರನ್ನು ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯು ಐಪಿಎಲ್ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ. ಅವರು ಅದೇ ದೇಶದ ಸ್ಪಿನ್ನರ್, ಗಾಯಾಳಾಗಿರುವ ಅಲ್ಲಾಹ್ ಗಝನ್ಫರ್ ಬದಲಿಗೆ ತಂಡ ಸೇರಿಕೊಂಡಿದ್ದಾರೆ.

18 ವರ್ಷ ವಯಸ್ಸಿನ ಗಜನ್ಫರ್ ಅವರು ಬೆನ್ನುನೋವಿನ ಸಮಸ್ಯೆಯಿಂದ ಬಳಲುದ್ದಾರೆ. ಅವರು ಚಾಂಪಿಯನ್ಸ್ ಟ್ರೋಫಿ ತಂಡಕ್ಕೂ ಆಯ್ಕೆಯಾಗಿಲ್ಲ. ಅಫ್ಗಾನಿಸ್ತಾನ ತಂಡದ ಇತ್ತೀಚಿನ ಜಿಂಬಾಬ್ವೆ ಪ್ರವಾಸದ ವೇಳೆ ಅವರು ಗಾಯಾಳಾಗಿದ್ದರು.

ಮುಂಬೈ ಇಂಡಿಯನ್ಸ್ ತಂಡ ಬಿಡ್ ಪ್ರಕ್ರಿಯೆಯಲ್ಲಿ ಗಝನ್ಫರ್ ಅವರನ್ನು ₹4.80 ಕೋಟಿ ಮೊತ್ತಕ್ಕೆ ಪಡೆದಿತ್ತು. ಮುಜೀಬ್ ಅವರು 300 ಟಿ20 (ದೇಶಿಯ ಮತ್ತು ಅಂತರರಾಷ್ಟ್ರೀಯ) ಪಂದ್ಯಗಳಲ್ಲಿ 330 ವಿಕೆಟ್‌ಗಳನ್ನು (6.5ರ ಇಕಾನಮಿ) ಪಡೆದಿದ್ದಾರೆ.

13 ತಾಣಗಳಲ್ಲಿ 74 ಪಂದ್ಯಗಳು

ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ–ಕೆಕೆಆರ್ ಮುಖಾಮುಖಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ 18ನೇ ಆವೃತ್ತಿಯು ಮಾರ್ಚ್ 22ರಂದು ಆರಂಭವಾಗಲಿದ್ದು, ಒಟ್ಟು 13 ತಾಣಗಳಲ್ಲಿ 74 ಪಂದ್ಯಗಳು ನಿಗದಿಯಾಗಿವೆ. ಮೇ 25ರಂದು ಫೈನಲ್ ಪಂದ್ಯ ನಡೆಯಲಿದೆ.

ಐಪಿಎಲ್ 2025ನೇ ಸಾಲಿನ ಟಿ20 ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಬಿಡುಗಡೆಗೊಳಿಸಿದೆ.

ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಮಾರ್ಚ್ 22ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ. ಇದೇ ಕ್ರೀಡಾಂಗಣದಲ್ಲಿ ಫೈನಲ್ ಹಣಾಹಣಿ ನಡೆಯಲಿದೆ.

12 ಡಬಲ್ ಹೆಡರ್ (ದಿನಕ್ಕೆ 2 ಪಂದ್ಯಗಳು) ಇರಲಿದೆ. ಒಟ್ಟು 65 ದಿನ ಪಂದ್ಯಗಳು ನಡೆಯಲಿವೆ. ಮೂರು ಫ್ರಾಂಚೈಸಿಗಳ ಎರಡನೇ ತವರಾದ ಧರ್ಮಶಾಲಾ (ಪಂಜಾಬ್ ಕಿಂಗ್ಸ್), ಗುವಾಹಟಿ (ರಾಜಸ್ಥಾನ ರಾಯಲ್ಸ್), ಮತ್ತು ವಿಶಾಖಪಟ್ಟಣದಲ್ಲಿ (ಡೆಲ್ಲಿ ಕ್ಯಾಪಿಟಲ್ಸ್) ಕೆಲ ಪಂದ್ಯಗಳು ನಿಗದಿಯಾಗಿವೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಾರ್ಚ್ 24ರಂದು ತನ್ನ ಎರಡನೇ ತವರಾದ ವಿಶಾಖಪಟ್ಟಣದಲ್ಲೇ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಅಭಿಯಾನ ಆರಂಭಿಸಲಿದೆ. ಗುವಾಹಟಿ ಮತ್ತು ವಿಶಾಖಪಟ್ಟಣದಲ್ಲಿ ತಲಾ ಎರಡು ಪಂದ್ಯಗಳು ಮತ್ತು ಧರ್ಮಶಾಲಾದಲ್ಲಿ ಮೂರು ಪಂದ್ಯಗಳು ನಿಗದಿಯಾಗಿವೆ.

ಆವೃತ್ತಿಯ ಮೊದಲ ಡಬಲ್ ಹೆಡರ್ ಮಾರ್ಚ್ 23ರಂದು ನಡೆಯಲಿದೆ. ಮಧ್ಯಾಹ್ನದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತನ್ನ ತವರಿನಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ರಾತ್ರಿಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತನ್ನ ತವರಿನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಲಿದೆ.

ಪ್ಲೇ ಆಫ್ ಹಂತದ ಪಂದ್ಯಗಳನ್ನು ಹೈದರಾಬಾದ್ ಮತ್ತು ಕೋಲ್ಕತ್ತದಲ್ಲಿ ಆಯೋಜಿಸಲಾಗಿದೆ. ಮೊದಲ ಕ್ವಾಲಿಫೈಯರ್ (ಮೇ 20) ಮತ್ತು ಎಲಿಮಿನೇಟರ್ (ಮೇ 21) ಪಂದ್ಯಗಳಿಗೆ ಹೈದರಾಬಾದ್‌ನಲ್ಲಿ ಆತಿಥ್ಯ ವಹಿಸಲಿದೆ. ಎರಡನೇ ಕ್ವಾಲಿಫೈಯರ್ (ಮೇ 23) ಪಂದ್ಯ ಕೋಲ್ಕತ್ತದಲ್ಲಿ ನಡೆಯಲಿದೆ.

ಒಟ್ಟು 10 ತಂಡಗಳು ಟೂರ್ನಿಯಲ್ಲಿ ಪೈಪೋಟಿ ನಡೆಸಲಿವೆ. ಚೆನ್ನೈ ಮತ್ತು ಮುಂಬೈ ತಂಡಗಳು ತಲಾ ಐದು ಬಾರಿ ಪ್ರಶಸ್ತಿ ಗೆದ್ದಿವೆ. ಕೋಲ್ಕತ್ತ ತಂಡವು ಮೂರು ಬಾರಿ ಚಾಂಪಿಯನ್ ಆಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಒಮ್ಮೆಯೂ ಪ್ರಶಸ್ತಿ ಗೆದ್ದಿಲ್ಲ.

ಇಂಡಿಯನ್ ಪ್ರೀಮಿಯರ್ ಲೀಗ್ ವೇಳಾಪಟ್ಟಿ

ದಿನಾಂಕ	ತಂಡಗಳು	ಸಮಯ	ಸ್ಥಳ
ಮಾ.22	ಕೆಕೆಆರ್–ಆರ್‌ಸಿಬಿ	7.30	ಕೋಲ್ಕತ್ತ
ಮಾ.23	ಎಸ್‌ಆರ್‌ಎಚ್–ಆರ್‌ಆರ್	3.30	ಹೈದರಾಬಾದ್
ಮಾ.23	ಸಿಎಸ್‌ಕೆ–ಎಂಐ	7.30	ಚೆನ್ನೈ
ಮಾ.24	ಡಿಸಿ–ಎಲ್‌ಎಸ್‌ಜಿ	7.30	ವಿಶಾಖಪಟ್ಟಣ
ಮಾ.25	ಜಿಟಿ–ಪಂಜಾಬ್ ಕಿಂಗ್ಸ್	7.30	ಅಹಮದಾಬಾದ್
ಮಾ.26	ಆರ್‌ಆರ್–ಕೆಕೆಆರ್	7.30	ಗುವಾಹಟಿ
ಮಾ.27	ಎಸ್‌ಆರ್‌ಎಚ್–ಎಲ್‌ಎಸ್‌ಜಿ	7.30	ಹೈದರಾಬಾದ್
ಮಾ.28	ಸಿಎಸ್‌ಕೆ–ಆರ್‌ಸಿಬಿ	7.30	ಚೆನ್ನೈ
ಮಾ.29	ಜಿಟಿ–ಎಂಐ	7.30	ಅಹಮದಾಬಾದ್
ಮಾ.30	ಡಿಸಿ–ಎಸ್‌ಆರ್‌ಎಚ್	3.30	ವಿಶಾಖಪಟ್ಟಣ
ಮಾ.30	ಆರ್‌ಆರ್–ಸಿಎಸ್‌ಕೆ	7.30	ಗುವಾಹಟಿ
ಮಾ.31	ಎಂಐ–ಕೆಕೆಆರ್	7.30	ಮುಂಬೈ
ಏ.1	ಎಲ್‌ಎಸ್‌ಜಿ–ಪಂಜಾಬ್ ಕಿಂಗ್ಸ್	7.30	ಲಖನೌ
ಏ.2	ಆರ್‌ಸಿಬಿ–ಜಿಟಿ	7.30	ಬೆಂಗಳೂರು
ಏ.3	ಕೆಕೆಆರ್–ಎಸ್‌ಆರ್‌ಎಚ್	7.30	ಕೋಲ್ಕತ್ತ
ಏ.4	ಎಲ್‌ಎಸ್‌ಜಿ–ಎಂಐ	7.30	ಲಖನೌ
ಏ.5	ಸಿಎಸ್‌ಕೆ–ಡಿಸಿ	3.30	ಚೆನ್ನೈ
ಏ.5	ಪಂಜಾಬ್ ಕಿಂಗ್ಸ್–ಆರ್‌ಆರ್	7.30	ಚಂಡೀಗಢ
ಏ.6	ಕೆಕೆಆರ್–ಎಲ್‌ಎಸ್‌ಜಿ	3.30	ಕೋಲ್ಕತ್ತ
ಏ.6	ಎಸ್‌ಆರ್‌ಎಚ್–ಜಿ.ಟಿ	7.30	ಹೈದರಾಬಾದ್
ಏ.7	ಎಂಐ–ಆರ್‌ಸಿಬಿ	7.30	ಮುಂಬೈ
ಏ.8	ಪಂಜಾಬ್ ಕಿಂಗ್ಸ್–ಸಿಎಸ್‌ಕೆ	7.30	ಚಂಡೀಗಢ
ಏ.9	ಜಿಟಿ–ಆರ್‌ಆರ್	7.30	ಅಹಮದಾಬಾದ್
ಏ.10	ಆರ್‌ಸಿಬಿ–ಡಿಸಿ	7.30	ಬೆಂಗಳೂರು
ಏ.11	ಸಿಎಸ್‌ಕೆ–ಕೆಕೆಆರ್	7.30	ಚೆನ್ನೈ
ಏ.12	ಎಲ್‌ಎಸ್‌ಜಿ–ಜಿಟಿ	3.30	ಲಖನೌ
ಏ.12	ಎಸ್‌ಆರ್‌ಎಚ್–ಪಂಜಾಬ್ ಕಿಂಗ್ಸ್	7.30	ಹೈದರಾಬಾದ್
ಏ.13	ಆರ್‌ಆರ್–ಆರ್‌ಸಿಬಿ	3.30	ಜೈಪುರ
ಏ.13	ಡಿಸಿ–ಎಂಐ	7.30	ಡೆಲ್ಲಿ
ಏ.14	ಎಲ್‌ಎಸ್‌ಜಿ–ಸಿಎಸ್‌ಕೆ	7.30	ಲಖನೌ
ಏ.15	ಪಂಜಾಬ್ ಕಿಂಗ್ಸ್–ಕೆಕೆಆರ್	7.30	ಚಂಡೀಗಢ
ಏ.16	ಡಿಸಿ–ಆರ್‌ಆರ್	7.30	ದೆಹಲಿ
ಏ.17	ಎಂಐ–ಎಸ್‌ಆರ್‌ಎಚ್	7.30	ಮುಂಬೈ
ಏ.18	ಆರ್‌ಸಿಬಿ–ಪಂಜಾಬ್ ಕಿಂಗ್ಸ್	7.30	ಬೆಂಗಳೂರು
ಏ.19	ಜಿಟಿ–ಡಿಸಿ	3.30	ಅಹಮದಾಬಾದ್
ಏ.19	ಆರ್‌ಆರ್–ಎಲ್‌ಎಸ್‌ಜಿ	7.30	ಜೈಪುರ
ಏ.20	ಪಂಜಾಬ್ ಕಿಂಗ್ಸ್–ಆರ್‌ಸಿಬಿ	3.30	ಚಂಡೀಗಢ
ಏ.20	ಎಂಐ–ಸಿಎಸ್‌ಕೆ	7.30	ಮುಂಬೈ
ಏ.21	ಕೆಕೆಆರ್–ಜಿಟಿ	7.30	ಕೋಲ್ಕತ್ತ
ಏ.22	ಎಲ್‌ಎಸ್‌ಜಿ–ಡಿಸಿ	7.30	ಲಖನೌ
ಏ.23	ಎಸ್‌ಆರ್‌ಎಚ್–ಎಂಐ	7.30	ಹೈದರಾಬಾದ್
ಏ.24	ಆರ್‌ಸಿಬಿ–ಆರ್‌ಆರ್	7.30	ಬೆಂಗಳೂರು
ಏ.25	ಸಿಎಸ್‌ಕೆ–ಎಸ್‌ಆರ್‌ಎಚ್	7.30	ಚೆನ್ನೈ
ಏ.26	ಕೆಕೆಆರ್–ಪಂಜಾಬ್ ಕಿಂಗ್ಸ್	7.30	ಕೋಲ್ಕತ್ತ
ಏ.27	ಎಂಐ–ಎಲ್‌ಎಸ್‌ಜಿ	3.30	ಮುಂಬೈ
ಏ.27	ಡಿಸಿ–ಆರ್‌ಸಿಬಿ	7.30	ದೆಹಲಿ
ಏ.28	ಆರ್‌ಆರ್–ಜಿಟಿ	7.30	ಜೈಪುರ
ಏ.29	ಡಿಸಿ–ಕೆಕೆಆರ್	7.30	ದೆಹಲಿ
ಏ.30	ಸಿಎಸ್‌ಕೆ–ಪಂಜಾಬ್ ಕಿಂಗ್ಸ್	7.30	ಚೆನ್ನೈ
ಮೇ 1	ಆರ್‌ಆರ್–ಎಂಐ	7.30	ಜೈಪುರ
ಮೇ 2	ಜಿಟಿ–ಎಸ್‌ಆರ್‌ಎಚ್	7.30	ಅಹಮದಾಬಾದ್
ಮೇ 3	ಆರ್‌ಸಿಬಿ–ಸಿಎಸ್‌ಕೆ	7.30	ಬೆಂಗಳೂರು
ಮೇ 4	ಕೆಕೆಆರ್–ಆರ್‌ಆರ್	3.30	ಕೋಲ್ಕತ್ತ
ಮೇ 4	ಪಂಜಾಬ್ ಕಿಂಗ್ಸ್–ಎಲ್‌ಎಸ್‌ಜಿ	7.30	ಧರ್ಮಶಾಲಾ
ಮೇ 5	ಎಸ್‌ಆರ್‌ಎಚ್–ಡಿಸಿ	7.30	ಹೈದರಾಬಾದ್
ಮೇ 6	ಎಂಐ–ಜಿಟಿ	7.30	ಮುಂಬೈ
ಮೇ 7	ಕೆಕೆಆರ್–ಸಿಎಸ್‌ಕೆ	7.30	ಕೋಲ್ಕತ್ತ
ಮೇ 8	ಪಂಜಾಬ್ ಕಿಂಗ್ಸ್–ಡಿಸಿ	7.30	ಧರ್ಮಶಾಲಾ
ಮೇ 9	ಎಲ್‌ಎಸ್‌ಜಿ–ಆರ್‌ಸಿಬಿ	7.30	ಲಖನೌ
ಮೇ 10	ಎಸ್‌ಆರ್‌ಎಚ್–ಕೆಕೆಆರ್	7.30	ಹೈದರಾಬಾದ್
ಮೇ 11	ಪಂಜಾಬ್ ಕಿಂಗ್ಸ್–ಎಂಐ	3.30	ಧರ್ಮಶಾಲಾ
ಮೇ 11	ಡಿಸಿ–ಜಿಟಿ	7.30	ದೆಹಲಿ
ಮೇ 12	ಸಿಎಸ್‌ಕೆ–ಆರ್‌ಆರ್	7.30	ಚೆನ್ನೈ
ಮೇ 13	ಆರ್‌ಸಿಬಿ–ಎಸ್‌ಆರ್‌ಎಚ್	7.30	ಬೆಂಗಳೂರು
ಮೇ 14	ಜಿಟಿ–ಎಲ್‌ಎಸ್‌ಜಿ	7.30	ಅಹಮದಾಬಾದ್
ಮೇ 15	ಎಂಐ–ಡಿಸಿ	7.30	ಮುಂಬೈ
ಮೇ 16	ಆರ್‌ಆರ್–ಪಂಜಾಬ್ ಕಿಂಗ್ಸ್	7.30	ಜೈಪುರ
ಮೇ 17	ಆರ್‌ಸಿಬಿ–ಕೆಕೆಆರ್	7.30	ಬೆಂಗಳೂರು
ಮೇ 18	ಜಿಟಿ–ಸಿಎಸ್‌ಕೆ	3.30	ಅಹಮದಾಬಾದ್
ಮೇ 18	ಎಲ್‌ಎಸ್‌ಜಿ–ಎಸ್‌ಆರ್‌ಎಚ್	7.30	ಲಖನೌ
ಮೇ 20	ಕ್ವಾಲಿಫೈಯರ್ 1	7.30	ಹೈದರಾಬಾದ್
ಮೇ 21	ಎಲಿಮಿನೇಟರ್ 1	7.30	ಹೈದರಾಬಾದ್
ಮೇ 23	ಕ್ವಾಲಿಫೈಯರ್ 2	7.30	ಕೋಲ್ಕತ್ತ
ಮೇ 25	ಫೈನಲ್	7.30	ಕೋಲ್ಕತ್ತ

(ಆರ್‌ಸಿಬಿ– ರಾಯಲ್ ಚಾಲೆಂಜರ್ಸ್ ಬೆಂಗಳೂರು, ಎಂಐ– ಮುಂಬೈ ಇಂಡಿಯನ್ಸ್, ಜಿಟಿ– ಗುಜರಾತ್ ಟೈಟನ್ಸ್, ಆರ್‌ಆರ್– ರಾಜಸ್ಥಾನ ರಾಯಲ್ಸ್, ಎಲ್‌ಎಸ್‌ಜಿ– ಲಖನೌ ಸೂಪರ್ ಜೈಂಟ್ಸ್, ಎಸ್‌ಆರ್‌ಎಚ್– ಸನ್‌ರೈಸರ್ಸ್ ಹೈದರಾಬಾದ್, ಕೆಕೆಆರ್– ಕೋಲ್ಕತ್ತ ನೈಟ್ ರೈಸರ್ಸ್, ಸಿ ಎಸ್‌ಕೆ– ಚೆನ್ನೈ ಸೂಪರ್ ಕಿಂಗ್ಸ್, ಡಿಸಿ– ಡೆಲ್ಲಿ ಕ್ಯಾಪಿಟಲ್ಸ್)

ನೆಟ್ಸ್‌ನಲ್ಲಿ ಭಾರತ ತಂಡದ ಅಭ್ಯಾಸ

ಲೆಂಗ್ತ್ ಸರಿಪಡಿಸಿಕೊಳ್ಳಲು ಮೊಹಮ್ಮದ್ ಶಮಿ ಯತ್ನ

ಮೊಹಮ್ಮದ್ ಶಮಿ

ದುಬೈ (ಪಿಟಿಐ): ಐಸಿಸಿ ಚಾಂಪಿಯನ್ಸ್ ಟ್ರೋಫಿ ಆಡಲು ಇಲ್ಲಿಗೆ ಬಂದಿಳಿದಿರುವ ಭಾರತ ತಂಡವು ಐಸಿಸಿ ಅಕಾಡೆಮಿ ಮೈದಾನದಲ್ಲಿ ಭಾನುವಾರ ಪೂರ್ಣ ಪ್ರಮಾಣದಲ್ಲಿ ನೆಟ್ ಪ್ರಾಕ್ಟೀಸ್‌ನಲ್ಲಿ ತೊಡಗಿತು. ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಉಸ್ತುವಾರಿಯಲ್ಲಿ ಸಾಕಷ್ಟು ಸಮಯ ಆಸ್ಥೆಯಿಂದ ಅಭ್ಯಾಸದಲ್ಲಿ ಕಳೆದರು.

ಫೆಬ್ರುವರಿ 20ರಂದು ಭಾರತ ಮೊದಲ ಪಂದ್ಯ ಆಡಲಿದ್ದು ಬಾಂಗ್ಲಾದೇಶ ಎದುರಾಳಿಯಾಗಿದೆ.

ಹೊಸ ಮಾರ್ಗಸೂಚಿ ಕಟ್ಟುನಿಟ್ಟಾಗಿ ಜಾರಿಯಲ್ಲಿರುವ ಕಾರಣ ನಾಯಕ ರೋಹಿತ್ ಶರ್ಮಾ ಅವರಿಂದ ಹಿಡಿದು ತಂಡದ ಅತಿ ಕಿರಿಯ ಆಟಗಾರ ಹರ್ಷಿತ್ ರಾಣಾ ಅವರವರೆಗೆ ಎಲ್ಲರೂ ಭಾಗಿಯಾಗಿದ್ದರು. ಆದರೆ ಶಮಿ ಅವರು ಹೆಚ್ಚಿನ ಅಭ್ಯಾಸಕ್ಕೆ ಒತ್ತು ನೀಡಿದ್ದು ಗಮನಸೆಳೆಯಿತು.

ಇತ್ತೀಚೆಗೆ ತವರಿನಲ್ಲಿ ಇಂಗ್ಲೆಂಡ್ ವಿರುದ್ಧ ಟಿ20 ಮತ್ತು ಏಕದಿನ ಸರಣಿ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪುನರಾಗಮನ ಮಾಡಿದ್ದ ಶಮಿ, ಅಭ್ಯಾಸದ ವೇಳೆ ಆರಂಭದಲ್ಲಿ ರನ್ ಅಪ್ ಕಡಿಮೆ ಮಾಡಿ ಕೆಲವು ಎಸೆತಗಳನ್ನು ಪ್ರಯೋಗಿಸಿ ಪರಿಸ್ಥಿತಿಗೆ ಒಗ್ಗಿಕೊಳ್ಳುವ ಯತ್ನ ನಡೆಸಿದರು. ಇತರ ಕೆಲವು ಆಟಗಾರರು ದೈಹಿಕ ಕಸರತ್ತಿನಲ್ಲಿ ತೊಡಗಿದ್ದರು.

ಶಮಿ ತಮ್ಮ ಲೆಂಗ್ತ್ ಹೊಂದಿಸಿಕೊಳ್ಳಲು ಯತ್ನಿಸಿದ್ದು ಕಾಣಿಸಿತು. ಯಾವ ಲೆಂಗ್ತ್ ಸೂಕ್ತವಾಗ ಬಹುದೆಂದು ಕೋಚ್ ಜೊತೆ ಸಮಾಲೋಚನೆ ನಡೆಸಿದರು.

ಹಾರ್ದಿಕ್ ಪಾಂಡ್ಯ ಮತ್ತು ಶ್ರೇಯಸ್ ಅಯ್ಯರ್ ಅವರು ಕುಲದೀಪ್ ಯಾದವ್ ಮತ್ತು ಇತರ ಸ್ಪಿನ್ನರ್‌ಗಳನ್ನು ಎದುರಿಸಿ ದೊಡ್ಡ ಹೊಡೆತಗಳನ್ನು ಆಡಿದರು. ಇಂಥ ಒಂದು ಭಾರಿ ಹೊಡೆತದಲ್ಲಿ ಚೆಂಡು ಆಕಸ್ಮಿಕವಾಗಿ ಪಂತ್ ಅವರ ಮೊಣಕಾಲಿಗೆ ಬಡಿಯಿತು. ಅವರು ಕೆಲಕಾಲ ನೋವು ಅನುಭವಿಸಿದರು. ಫಿಸಿಯೊ ಕಮಲೇಶ್ ಜೈನ್ ಜೊತೆ, ಪಾಂಡ್ಯ ಕೂಡ ಕಿರಿಯ ಆಟಗಾರನತ್ತ ಧಾವಿಸಿದರು. ಆದರೆ ಅದು ಗಂಭೀರವಾಗಿರಲಿಲ್ಲ. ಕೆಲಹೊತ್ತಿನ ನಂತರ ಪಂತ್ ಪ್ಯಾಡ್‌ಕಟ್ಟಿಕೊಂಡು ಆಟಕ್ಕಿಳಿದರು.

ಕೊಹ್ಲಿ ಕೂಡ ಏಕಾಗ್ರತೆಯಿಂದ ಅಭ್ಯಾಸದಲ್ಲಿ ತೊಡಗಿದರು. ಏಕತಾನತೆ ಕಳೆಯಲು ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಕೋಚ್ ಅವರು ಡ್ರಿಲ್‌ಗಳಲ್ಲಿ ಸ್ವಲ್ಪ ಹೊಸತನ ಅಳವಡಿಸಿದ್ದರು.

ಸಿಂಗಲ್ಸ್ ಪ್ರಶಸ್ತಿಯೊಂದಿಗೆ ಕೈರಿಯನ್ ಜಾಕ್ವೆಟ್

ಡೆಲ್ಲಿ ಓಪನ್: ಜಾಕ್ವೆಟ್‌ಗೆ ಸಿಂಗಲ್ಸ್ ಕಿರೀಟ

ನವದೆಹಲಿ (ಪಿಟಿಐ): ಶ್ರೇಯಾಂಕರಹಿತ ಆಟಗಾರ ಕೈರಿಯನ್ ಜಾಕ್ವೆಟ್ ಅವರು ಡೆಲ್ಲಿ ಓಪನ್ ಎಟಿಪಿ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಕಳೆದ ವಾರ ಚೆನ್ನೈ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದ ಫ್ರಾನ್ಸ್‌ನ 23 ವರ್ಷ ವಯಸ್ಸಿನ ಜಾಕ್ವೆಟ್ ಇಲ್ಲಿನ ಡಿಎಲ್‌ಟಿಎ ಕಾಂಪ್ಲೆಕ್ಸ್ ಸೆಂಟರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ 6-4, 6-2ರಿಂದ ಎರಡನೇ ಶ್ರೇಯಾಂಕದ ಬಿಲಿ ಹ್ಯಾರಿಸ್ (ಇಂಗ್ಲೆಂಡ್) ಅವರನ್ನು ಮಣಿಸಿದರು.

ಅಖಿಲ ಭಾರತ ಟೆನಿಸ್ ಸಂಸ್ಥೆ ಮತ್ತು ದೆಹಲಿ ಟೆನಿಸ್ ಸಂಸ್ಥೆ ಆಯೋಜಿಸಿದ್ದ ₹87 ಲಕ್ಷ ಬಹುಮಾನ ಮೊತ್ತದ ಟೂರ್ನಿಯಲ್ಲಿ ಚಾಂಪಿಯನ್ ಆದ ಜಾಕ್ವೆಟ್ ಅವರು 75 ಎಟಿಪಿ ಪಾಯಿಂಟ್ಸ್ ತಮ್ಮದಾಗಿಸಿಕೊಂಡರು.

ಜಾಕ್ವೆಟ್ ಅವರು ದೆಹಲಿ ಓಪನ್ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದ ಮೂರನೇ ಫ್ರೆಂಚ್ ಆಟಗಾರನಾಗಿದ್ದಾರೆ.

ಮಂಗಳೂರಿನಲ್ಲಿ ಎಎಂಎಸ್‌ಸಿ ಡರ್ಟ್ ಫ್ರೀ8 ರೇಸ್: ಬೆಂಗಳೂರಿನ ರೂಪೇಶ್‌ಗೆ ಎರಡನೇ ಸ್ಥಾನ

ಚಿಕ್ಕಮಗಳೂರಿನ ಐಮನ್ ವೇಗದ ಚಾಲಕ

ಪ್ರಜಾವಾಣಿ ವಾರ್ತೆ

ರೇಸ್‌ನಲ್ಲಿ ಗುರಿಯತ್ತ ಮುನ್ನುಗ್ಗಿದ ಕಾರು

ಟ್ರೋಫಿಯೊಂದಿಗೆ ಐಮನ್

ಮಂಗಳೂರು: ಎಸ್‌ಯುವಿ ಓಪನ್ ವಿಭಾಗವೂ ಸೇರಿ ಒಟ್ಟು ಆರು ವಿಭಾಗಗಳಲ್ಲಿ ಚಾಂಪಿಯನ್ ಆದ ಚಿಕ್ಕಮಗಳೂರಿನ ಐಮನ್ ಅಹಮ್ಮದ್ ಅವರು ನಗರದ ಗೋಲ್ಡ್ ಫಿಂಚ್ ಸಿಟಿಯಲ್ಲಿ ನಡೆದ ಎಎಂಎಸ್‌ಸಿ ಡರ್ಟ್ ಫ್ರೀ-8 ರೇಸ್‌ನ ವೇಗದ ಚಾಲಕ ಮತ್ತು ಅತ್ಯುತ್ತಮ ಚಾಲಕ ಎನಿಸಿಕೊಂಡರು.

ಮಾಂಡೊವಿ ಮೋಟರ್ಸ್ ಮತ್ತು ಶೂಲಿನ್ ಗ್ರೂಪ್ಸ್ ಸಹಯೋಗದಲ್ಲಿ ಮಂಗಳೂರು ಮೋಟರ್ ಸ್ಪೋರ್ಟ್ಸ್ ಸಂಸ್ಥೆ ಭಾನುವಾರ ಆಯೋಜಿಸಿದ್ದ ರೇಸ್‌ನ ಎಸ್‌ಯುವಿ ಓಪನ್, ಅನ್‌ರಿಸ್ಟ್ರಿಕ್ಟೆಡ್ ಓಪನ್, ಎಎಂಎಸ್‌ಸಿ ಓಪನ್, ಪ್ರೊ 3000 ಸಿಸಿ, ಪ್ರೊ 1400 ಸಿಸಿ ಮತ್ತು 1100 ಸಿಸಿ ವಿಭಾಗಗಳಲ್ಲಿ ಐಮನ್ ಮೊದಲಿಗರಾದರು. ಪೋಲೊ, ಜಿಪ್ಸಿ ಮತ್ತು ಜೆನ್ ಚಾಲನೆ ಮಾಡಿದರು.

ಸ್ಟಾರ್ ಆಫ್ ಕರ್ನಾಟಕ ಸೇರಿದಂತೆ ಎರಡು ಟ್ರೋಫಿ ಮತ್ತು ಎರಡು ವಿಭಾಗದಲ್ಲಿ ರನ್ನರ್ ಅಪ್ ಆದ ಬೆಂಗಳೂರಿನ ರೂಪೇಶ್ ಬಿ.ಸಿ ಎರಡನೇ ವೇಗದ ಚಾಲಕ ಎನಿಸಿಕೊಂಡರು. ಕೇರಳದ ಅತುಲ್ ಥಾಮಸ್ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಮಂಗಳೂರು–ಉಡುಪಿ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ನಿರ್ಮಿಸಿದ್ದ 1.5 ಕಿಲೊಮೀಟರ್ ಟ್ರ್ಯಾಕ್‌ನಲ್ಲಿ ಬಿರುಬಿಸಿಲಿನ ಹೊಡೆತ ಲೆಕ್ಕಿಸದೆ ದೂಳೆಬ್ಬಿಸುತ್ತ ಮುನ್ನುಗ್ಗಿದ ಐಮನ್ ಮೊದಲು ಸ್ಪರ್ಧಿಸಿದ್ದು ಎಎಂಎಸ್‌ಸಿ ಓಪನ್ ವಿಭಾಗದಲ್ಲಿ. 1 ನಿಮಿಷ 34.897 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ನಂತರ 1100 ಸಿಸಿ ವಿಭಾಗದಲ್ಲಿ 1ನಿ.40.296 ಸೆಕೆಂಡುಗಳಲ್ಲಿ ಗುರಿ ಸೇರಿದರು. 1650 ಸಿಸಿ ವಿಭಾಗದಲ್ಲಿ ರೂಪೇಶ್ ಅವರ ವೇಗವನ್ನು ಸರಿಗಟ್ಟಲು ಐಮನ್‌ಗೆ ಸಾಧ್ಯವಾಗಲಿಲ್ಲ. ರೂಪೇಶ್ 1ನಿ.34.843 ಸೆಕೆಂಡುಗಳಲ್ಲಿ ಫಿನಿಷಿಂಗ್ ಪಾಯಿಂಟ್ ತಲುಪಿದರೆ ಐಮನ್ 1ನಿ.35.378 ಸೆಕೆಂಡುಗಳನ್ನು ತೆಗೆದುಕೊಂಡರು. ಎಎಂಎಸ್‌ಸಿ ಮತ್ತು 1650 ಸಿಸಿ ವಿಭಾಗಗಳಲ್ಲಿ ಐಮನ್, ರೂಪೇಶ್ ಮತ್ತು ಅತುಲ್ ಅವರು ಪ್ರಮುಖ ಆಕರ್ಷಣೆಯಾಗಿದ್ದರು. ಎರಡೂ ವಿಭಾಗಗಳಲ್ಲಿ ಅತುಲ್ ಮೂರನೆಯವರಾದರು. 3000 ಸಿಸಿಯಲ್ಲೂ ಐಮನ್ ಚಾಂಪಿಯನ್ ಆದರೆ ಅತುಲ್ ಎರಡನೇ ಸ್ಥಾನ ಗಳಿಸಿದರು. ರೂಪೇಶ್ ನಾಲ್ಕನೇ ಸ್ಥಾನ ಪಡೆದರು.

ವುಶು: ಬಾಗಲಕೋಟೆ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕರ್ನಾಟಕ ವುಶು ಸಂಸ್ಥೆ ವತಿಯಿಂದ ರಾಜ್ಯಮಟ್ಟದ ಖೇಲೊ ಇಂಡಿಯಾ ಮಹಿಳಾ ವುಶು ಲೀಗ್ (ಸಬ್ ಜೂನಿಯರ್, ಜೂನಿಯರ್, ಸೀನಿಯರ್) ಕೂಟ ಭಾನುವಾರ ಇಲ್ಲಿ ಮುಕ್ತಾಯಗೊಂಡಿದ್ದು, ಬಾಗಲಕೋಟೆ ಜಿಲ್ಲೆ ಸಮಗ್ರ ಚಾಂಪಿಯನ್ ಆಗಿದೆ.

ವಿಜಯನಗರ ಜಿಲ್ಲೆ ದ್ವಿತೀಯ ಹಾಗೂ ಮೈಸೂರು ಜಿಲ್ಲೆ ತೃತೀಯ ಸ್ಥಾನ ಪಡೆದವು. 300 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಚಾಂಗ್‌ಕ್ವೀನ್ ವಿಭಾಗದಲ್ಲಿ ವಿಜಯನಗರದ ಅಂಕಿತಾ ಚಿನ್ನದ ಪದಕ ಗಳಿಸಿದರೆ, ಬೆಂಗಳೂರು ಸೆಂಟ್ರಲ್‌ನ ಕುಮುದಾ ಬೆಳ್ಳಿ ಹಾಗೂ ಕೊಪ್ಪಳದ ಕೃತಿಕಾ ಮತ್ತು ವಿಜಯನಗರದ ಸೆರಿನಾ ಕಂಚಿನ ಪದಕ ಹಂಚಿಕೊಂಡರು.

ಕ್ವಾಂಶು ವಿಭಾಗದಲ್ಲಿ ಬಾಗಲಕೋಟೆಯ ಶ್ರುತಿ ಸುಲಬೆ ಚಿನ್ನದ ಪದಕ, ದಾವಣಗೆರೆಯ ಮಹೇಶ್ವರಿ ಬೆಳ್ಳಿ ಹಾಗೂ ಬೆಂಗಳೂರು ಸೆಂಟ್ರಲ್‌ನ ಶಿಲ್ಪಾ, ಕಲಬುರ್ಗಿಯ ಚೈತ್ರಾ ಕಂಚಿನ ಪದಕ ಹಂಚಿಕೊಂಡರು.